ಸಂಪುಟ: 05 ಸಂಚಿಕೆ: 143 ಪುಟಗಳು: 08 ಮಂಗಳವಾರ 05 ಆಗಸ್ಟ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ನೀವು ನಿಮ್ಮ ಭವಿಷ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ನಿಮ್ಮ ಅಭ್ಯಾಸಗಳನ್ನು ಬದಲಾಯಿಸುವ ಅವಕಾಶ ನಿಮಗಿದೆ ಮತ್ತು ನಿಮ್ಮ ಅಭ್ಯಾಸಗಳು ಖಂಡಿತಾ ನಿಮ್ಮ ಭವಿಷ್ಯವನ್ನು ಬದಲಾಯಿಸುತ್ತವೆ

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಮುಷ್ಕರ ಬಿಡಲ್ಲ ಬಸ್ ಬರಲ್ಲ

## ಮುರಿದುಬಿದ್ದ ಸಂಧಾನ ಸಭೆ

### ಬಿಎಂಟಿಸಿ-ಕೆಎಸ್ಆರ್‌ಟಿಸಿ ನೌಕರರ ಮುಷ್ಕರ ಫಿಕ್ಸ್

**ಬೆಳಗ್ಗೆ 6 ರಿಂದಲೇ ನೌಕರರ ಹೋರಾಟ**

• ಉದಯವಾಹಿನಿ, ಬೆಂಗಳೂರು

ಸಾರಿಗೆ ನೌಕರರ ಮುಷ್ಕರ ಆ.05 ತಡೆಹಿಡಿಯುವಂತೆ ಕರ್ನಾಟಕ ಹೈಕೋರ್ಟ್ ಆದೇಶ ನೀಡಿದೆ. ನಾಳಿನ ಸಾರಿಗೆ ನೌಕರರ ಮುಷ್ಕರ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಪಿಐಎಲ್ ವಿಚಾರಣೆ ನಡೆಸಿದ ಹೈಕೋರ್ಟ್ ಮಹತ್ವದ ಆದೇಶ ನೀಡಿತ್ತು. ಆದರೆ ಹೈಕೋರ್ಟ್ ಆದೇಶದ ನಡುವೆಯೂ ಇಂದಿನಿಂದಲ್ಲೆ ಅನಿರ್ದಿಷ್ಟಾವದಿ ಮುಷ್ಕರ ಆರಂಭಿಸುವುದಾಗಿ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಅನಂತ ಸುಬ್ಬರಾವ್ ಖಚಿತಪಡಿಸಿದ್ದಾರೆ. ಹೀಗಾಗಿ ಮಂಗಳವಾರ ಬೆಳಗ್ಗೆ 6 ಗಂಟೆಯಿಂದ ರಾಜ್ಯಾದ್ಯಂತ ಸಾರಿಗೆ ಬಸ್ ರಸ್ತೆಗಳಿಯುವುದಿಲ್ಲ.

**1** ಸಿದ್ದರಾಮಯ್ಯ ಅವರೊಂದಿಗೆ ನಡೆದ ಸಂಧಾನ ಸಭೆ ವಿಫಲ.

**2** ಸಾರಿಗೆ ನೌಕರರು 1800 ಕೋಟಿ ರೂ ಹಿಂಬಾಕಿಯನ್ನು ಹಾಗೂ ವೇತನ ಹೆಚ್ಚಳ ಸೇರಿದಂತೆ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗಿತ್ತು.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಾರಿಗೆ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಅನಂತ ಸುಬ್ಬರಾವ್, ಕೋರ್ಟ್ ಆದೇಶ ನಮಗೆ ತಲುಪಿದ್ದು, ಆದೇಶ ಏನಿದೆ ಅನ್ನೋದು ಗೊತ್ತಿಲ್ಲ. ಎಂದಿನಂತೆ ನಮ್ಮ ಮುಷ್ಕರ ನಡೆಯುತ್ತೆ. ಬೆಳಿಗ್ಗೆ 6 ಗಂಟೆಯಿಂದ ಮುಷ್ಕರ ನಡೆಯುತ್ತೆ. ಲಾಯರ್ ಅಭಿಪ್ರಾಯ ಪಡೆದು ನಾಳೆ ನಮ್ಮ ಜಂಟಿಕ್ರಿಯಾ ಸಮಿತಿ




ಮುಂದಿಟ್ಟು ತೀರ್ಮಾನ ಮಾಡುತ್ತೇವೆ. ಇವತ್ತು ಮುಷ್ಕರ ವಾಪಸ್ಸು ಪಡೆಯುವ ಮಾತಿಲ್ಲ. ನಾಳೆ ಬೆಳಿಗ್ಗೆ 6 ಗಂಟೆಯಿಂದ ಎಂದಿನಂತೆ ಮುಷ್ಕರ ನಡೆಯುತ್ತೆ ಎಂದು ಸ್ಪಷ್ಟಪಡಿಸಿದರು. ಆ.05 ಬೆಳಗ್ಗೆ 6 ಗಂಟೆಯಿಂದಲೇ ಎಲ್ಲಾ ಬಸ್ ಗಳನ್ನು ಡಿಪೋಗಳಲ್ಲಿ ನಿಲ್ಲಿಸುತ್ತೇವೆ. ಯಾವುದೇ ನೌಕರರು ಬಸ್‌ಗಳನ್ನು ಓಡಿಸಲ್ಲ. ಸರ್ಕಾರದ ಬೆದರಿಕೆಗೆ ಹೆದರಬೇಡಿ, ಶಾಂತಿಯುತವಾಗಿ ಪ್ರತಿಭಟನೆ ನಡೆಸಿ ಎಂದು ನೌಕರರಿಗೆ ಕಿವಿಮಾತು ಹೇಳಿದ್ದಾರೆ.ಮುಷ್ಕರದ ಬಗ್ಗೆ 22 ದಿನಗಳ ಹಿಂದೆಯೇ ನೋಟಿಸ್ ಕೊಟ್ಟಿದ್ದೆವು.

ಆದರೆ ಸಿಎಂ ಸಿದ್ದರಾಮಯ್ಯ ಇಂದು ಸಭೆ ಕರೆದಿದ್ದರು. 38 ತಿಂಗಳ ಬಾಕಿ ಹಣ ಕೊಡಬೇಕು, ಶೇ.15ರಷ್ಟು ವೇತನ ಹೆಚ್ಚಿಸಬೇಕು. ಬೇಕಿದ್ದರೆ ಕಂತಿನರೂಪದಲ್ಲಿ ಬಾಕಿ ಹಣ ಕೊಡಿ ಎಂದು ಮನವಿ ಮಾಡಿದ್ದೇವೆ. 12 ಬೇಡಿಕೆಗಳ ಪೈಕಿ 2 ಪ್ರಮುಖ ಬೇಡಿಕೆಗಳನ್ನಾದರೂ ಈಡೇರಿಸಬೇಕಿತ್ತು. ಅಧಿವೇಶನದವರೆಗೆ ಮುಷ್ಕರ ಮುಂದೂಡಿ ಎಂದು ಹೇಳಿದ್ದಾರೆ. ಆದ್ರೆ, ನಾವು ಒಪ್ಪಿಲ್ಲ. ಹೀಗಾಗಿ ನಾಳೆ ಬೆಳಗ್ಗೆ 6 ಗಂಟೆಯಿಂದ ಸಾರಿಗೆ ಮುಷ್ಕರ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು. ಪ್ರಯಾಣ ದರ ಜಾಸ್ತಿ ಮಾಡಿದರೆ, ನಿಮ್ಮ ಬೇಡಿಕೆ ಈಡೇರಿಕೆ ಮಾಡುತ್ತೇವೆ ಎಂದು ಹಿಂದಿನ ಮುಷ್ಕರ ವೇಳೆ ಭರವಸೆ ನೀಡಿದ್ದರು. ಇದೀಗ 2027 ರವರೆಗೆ ಹೊಸ ವೇತನ ಪರಿಷ್ಕರಣೆ ಆಗಲ್ಲ ಎಂದಿದ್ದಾರೆ. ಅಂತಿಮವಾಗಿ ಸಿಎಂ ಇವತ್ತು 14 ತಿಂಗಳ ಹಿಂಬಾಕಿ ಕೊಡುತ್ತೇವೆ ಎಂದು ಹೇಳಿದ್ದಾರೆ. 2024ರ ಹೊಸ ವೇತನ ಪರಿಷ್ಕರಣೆಯನ್ನು ಅಧಿವೇಶನದ ಬಳಿಕ ಮಾತನಾಡೋಣ ಎಂದಿದ್ದಾರೆ. ಇದು ನಮಗೆ ಒಪ್ಪಿಗೆ ಇಲ್ಲ ಎಂದು ಮುಖಂಡ ಅನಂತ ಸುಬ್ಬರಾವ್ ಅವರು ಘಂಟಾಘೋಷವಾಗಿ ಹೇಳಿದ್ದಾರೆ.

**ಸಭೆಯಿಂದ ಹೊರ ನಡೆದ ಕಾರ್ಮಿಕ ಇಲಾಖೆ ಮುಖಂಡರು**

ಅನಿರ್ಧಿಷ್ಟಾವಧಿ ಸಾರಿಗೆ ನೌಕರರ ಮುಷ್ಕರ ಫಿಕ್ಸ್ ಆಗಿದೆ. ಮೂರನೇ ಸಂಧಾನ ಸಭೆ ಖುದ್ದು ಸಿಎಂ ನೇತೃತ್ವದಲ್ಲಿ ನಡೆದರೂ ಸಭೆಯಲ್ಲಿ ಒಮ್ಮತದ ನಿರ್ಧಾರಕ್ಕೆ ಬರಲಾಗಿಲ್ಲ. 38 ತಿಂಗಳ ಹಿಂಬಾಕಿ 1800 ಕೋಟಿ ಕೊಡಲು ಸಾಧ್ಯವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಇದಕ್ಕೆ 800 ಕೋಟಿ ರೂ. ಆದರೂ ಈಗ ಪಾವತಿಸಿ, ನಂತರ ಕಂತಿನ ರೂಪದಲ್ಲಿ 1000 ಕೋಟಿ ರೂ. ಕೊಡುವಂತೆ ಮನವಿ ಮಾಡಿದಾಗ ಸಿಎಂ ಇದಕ್ಕೆ ಒಪ್ಪಲಿಲ್ಲ ಎನ್ನಲಾಗಿದೆ. ಹೀಗಾಗಿ ಸಭೆಯು ವಿಫಲವಾಗಿದ್ದು, ಕಾರ್ಮಿಕ ಮುಖಂಡ ಮುಷ್ಕರದ ಘೋಷಣೆ ಮಾಡಿದ್ದಾರೆ.




**ಬೆಳಗ್ಗೆ 6 ರಿಂದಲೇ ಹೋರಾಟ**

ಸರ್ಕಾರದ ನಡೆಸಿದ ಸಭೆಯಲ್ಲಿ 14 ತಿಂಗಳ ಅರಿಯರ್ಸ್ ಕೊಡಲು ಒಪ್ಪಿದ್ದಾರೆ. ಆದರೆ ನಾವು 38 ತಿಂಗಳ ಹಿಂಬಾಕಿಗೆ ಬೇಡಿಕೆ ಇಟ್ಟಿದ್ದೇವೆ. ಹೀಗಾಗಿ ಸಭೆ ವಿಫಲ ಆಗಿದೆ ಎಂದು ಮುಖಂಡ ಅನಂತ ಸುಬ್ಬರಾವ್ ಹೇಳಿದ್ದು, ಹೋರಾಟ ಬೆಳಗ್ಗೆ 6 ಗಂಟೆಯಿಂದಲೇ ನಡೆಯಲಿದೆ. ಜನ ಯಾರೂ



ಕೆಲಸಕ್ಕೆ ಹೋಗೋದಿಲ್ಲ. ಎಸ್ಮಾ ಅಲ್ಲ ಏನಾದರೂ ಮಾಡಲಿ. ನಮ್ಮ ಹೋರಾಟ ಆರಂಭ ಆಗೇ ಆಗುತ್ತದೆ ಎಂದಿದ್ದಾರೆ. ವೇತನ ಹೆಚ್ಚಳದ ಬಗ್ಗೆಯೂ ಮುಂದೆ ಮಾತನಾಡುತ್ತೇವೆ ಎಂದಿದ್ದಾರೆ. ಈಗಲೇ ಮಾತಾಡಿ ಎಂದು ನಾವು ಹೇಳಿದ್ದೇವೆ. ಹೋರಾಟ ಆರಂಭ ಆದ ನಂತರ ಸರ್ಕಾರ ಮಾತಿಗೆ ಕರೆದರೂ ನಾವು ಸಿದ್ಧ ಎಂದು ಅನಂತ ಸುಬ್ಬರಾವ್ ಹೇಳಿದ್ದಾರೆ. ರಾಜ್ಯಾದ್ಯಂತ, ಬಿಎಂಟಿಸಿ, ಕೆಎಸ್ ಆರ್ ಟಿಸಿ ಸೇರಿದಂತೆ ಸರಕಾರಿ ನಿಗಮದ ಯಾವ ಬಸ್‌ಗಳೂ ಇರೋದಿಲ್ಲ. ಜನರಿಗೆ ಸಮಸ್ಯೆ ಆದರೆ ಅದಕ್ಕೆ ಸರ್ಕಾರ ಕಾರಣ ಎಂದು ಹೇಳಿದ್ದಾರೆ.

**ನೌಕರರು ಕೆಲಸಕ್ಕೆ ಗೈರಾದ್ರೆ ಶಿಸ್ತುಕ್ರಮ**

ಸಾರಿಗೆ ನೌಕರರ ರಜೆ ರದ್ದು ಮಾಡಲಾಗಿದೆ. ಕೆಲಸಕ್ಕೆ ಬಾರದಿದ್ದರೆ ಸಂಬಳ ಕಟ್ ಎಂದು ನೌಕರರಿಗೆ ಸಂದೇಶ ರವಾನಿಸಲಾಗಿದೆ. ಮುಷ್ಕರದಲ್ಲಿ ಭಾಗಿಯಾಗದೆ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ. ಅಲ್ಲದೆ ಗೈರಾಗುವವರ ಮೇಲೆ ಶಿಸ್ತುಕ್ರಮ ಜಾರಿ ಮಾಡುವ ಬಗ್ಗೆಯೂ ಎಚ್ಚರಿಕೆ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹಾಗೂ ಒಕ್ಕೂಟದೊಂದಿದೆ ವಿಧಾನದೌಧದ ಸಮಿತಿ ಕೊಠಡಿಯಲ್ಲಿ ಸುದೀರ್ಘ ಸಭೆ ನಡೆಸಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಹಾಗೂ ಇಲಾಖಾ ಅಧಿಕಾರಿಗಳು ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಸಾರಿಗೆ ನೌಕರರ ಜೊತೆಗೆ ಸಿಎಂ ಸಿದ್ದರಾಮಯ್ಯ ನಡೆಸಿದ ಸಂಧಾನ ಸಭೆ ವಿಫಲಗೊಂಡಿತ್ತು. ಹೀಗಾಗಿ ಮುಷ್ಕರಕ್ಕೆ ತೀರ್ಮಾನಿಸಲಾಗಿತ್ತು. ಆದ್ರೆ ಅಷ್ಟರೊಳಗೆ ಮುಷ್ಕರ ಮುಂದೂಡಿಕೆ ಮಾಡುವಂತೆ ಹೈಕೋರ್ಟ್ ಆದೇಶ ಬಂದಿತ್ತು. ಹೀಗಾಗಿ ಮುಷ್ಕರ ಇದೆಯಾ ಇಲ್ವಾ ಎನ್ನುವ ಬಗ್ಗೆ ಗೊಂದಲಗಳು ಇದ್ದವು. ಆದ್ರೆ, ಇದೀಗ ಅನಂತ ಸುಬ್ಬರಾವ್, ಹೈಕೋರ್ಟ್ ಆದೇಶದ ನಡುವೆಯೂ ಮುಷ್ಕರ ನಡೆಸುವುದಾಗಿ ತಿಳಿಸಿದ್ದಾರೆ. ಸಾರಿಗೆ ಮುಷ್ಕರ ಮುಂದೂಡಿಕೆ ಮಾಡುವಂತೆ ಹೈಕೋರ್ಟ್ ಸೂಚನೆ ನೀಡಿದೆ. ನಾಳಿನ ಸಾರಿಗೆ ನೌಕರರ ಪ್ರತಿಭಟನೆ ಪ್ರಶ್ನಿಸಿ ವಕೀಲ ಎನ್ ಪಿ ಅಮೃತೇಶ್ ಮತ್ತಿತರರಿಂದ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಒಂದು ದಿನದ ಮಟ್ಟಿಗೆ ಮುಷ್ಕರವನ್ನ ಮುಂದೂಡುವಂತೆ ಸೂಚನೆ ನೀಡಿದೆ. ಹೀಗಾಗಿ ನಾಳೆ ಬಹುತೇಕ ಸರ್ಕಾರಿ ಬಸ್‌ಗಳು ಎಂದಿನಂತೆ ಓಡಾಟ ನಡೆಸಲಿವೆ ಎನ್ನಲಾಗಿತ್ತು.

## ಸೋನಿಯಾರಂತೆ ಎಲ್ಲರೂ ಅಧಿಕಾರ ತ್ಯಾಗ ಮಾಡಲು ಸಾಧ್ಯವೇ?

• ಉದಯವಾಹಿನಿ, ಬೆಂಗಳೂರು

ಎಐಸಿಸಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಭಾಗವಹಿಸಿದ್ದರು. ದೆಹಲಿಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ಜೊತೆಯಾಗಿಯೇ ಪ್ರಯಾಣಿಸಿದ್ದರು. ಡಿಕೆಶಿ, ಆ ಸಮ್ಮೇಳನದಲ್ಲಿ ಆಡಿದ ಮಾತು, ಕರ್ನಾಟಕ ರಾಜಕೀಯದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ. ಪವರ್ ಶೇರಿಂಗ್ ವಿಚಾರದ ಕಾವಿನ ಹೊಗೆ ಇನ್ನೂ ಇರುವಾಗಲೇ, ಕಾಂಗ್ರೆಸ್ ಹೈಕಮಾಂಡ್ ಸೋನಿಯಾ ಗಾಂಧಿ ಅವರ ತ್ಯಾಗವನ್ನು ಹೊಗಳುತ್ತಾ, ಡಿಕೆ ಶಿವಕುಮಾರ್ ಆಡಿದ ಮಾತು ಕುತೂಹಲಕ್ಕೆ ಕಾರಣವಾಗಿದೆ. ಅದು ಕೂಡಾ, ಉದ್ವೇಗಭರಿತವಾಗಿ ಭಾಷಣವನ್ನು ಮಾಡಿದ್ದರು. ಸೋನಿಯಾ ಗಾಂಧಿಯವರಿಗೆ ಪ್ರಧಾನಮಂತ್ರಿಯಾಗುವ ಯೋಗವಿದ್ದರೂ, ಅವರು ದೇಶ ಕಂಡ ಅತ್ಯುತ್ತಮ ಎಕಾನಮಿಸ್ಟ್ ಅವರನ್ನು ಪ್ರಧಾನಿಯನ್ನಾಗಿ ಮಾಡಿದರು ಎಂದು ಹೇಳಿದರು.

## ಕೆಎಎಸ್ ನೇಮಕ ಪ್ರಕ್ರಿಯೆ ಮುಂದುವರಿಕೆಗೆ ಹೈ ಸಮ್ಮತಿ

• ಉದಯವಾಹಿನಿ, ಬೆಂಗಳೂರು

ಸರಕಾರಿ ನೇಮಕಾತಿಯಲ್ಲಿ ಮೀಸಲು ಜಾರಿ ಸಂಬಂಧ ನಿಯಮ ಉಲ್ಲಂಘನೆಯಾಗಿದೆಯೆಂದು 348 ಕೆಎಎಸ್ ಅಧಿಕಾರಿಗಳ ನೇಮಕ ಕುರಿತ ಅಧಿಸೂಚನೆ ರದ್ದುಗೊಳಿಸಿದ್ದ ಕೆಎಟಿ ಆದೇಶ ಪ್ರಶ್ನಿಸಿ ಸಲ್ಲಿಕೆ ಆಗಿದ್ದ ಮೇಲ್ಮನವಿ ಆಲಿಸಿದ ಹೈಕೋರ್ಟ್, ಕೆಎಎಸ್ ನೇಮಕ ಪ್ರಕ್ರಿಯೆ ಮುಂದುವರಿಸಲು ಸಮ್ಮತಿಸಿದೆ.

ಇದರಿಂದಾಗಿ ಅತಂತ್ರಕ್ಕೆ ಸಿಲುಕಿದ್ದ ನೇಮಕಾತಿಯನ್ನು ಮತ್ತೆ ಮುಂದುವರಿಸಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹಸಿರು ನಿಶಾನೆ ದೊರೆತಂತಾಗಿದೆ. ಮುಖ್ಯ ಪರೀಕ್ಷೆ ಬರೆದು ನೇಮಕಕ್ಕೆ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದ ಅಭ್ಯರ್ಥಿಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಕೆಎಟಿ ಕಳೆದ ಮೇ 28ರಂದು ನೀಡಿದ್ದ ಆದೇಶ ಪ್ರಶ್ನಿಸಿ ಸರಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಆಲಿಸಿದ ನ್ಯಾ. ಡಿ.ಕೆ. ಸಿಂಗ್ ಮತ್ತು ನ್ಯಾ. ವೆಂಕಟೇಶ್ ಟಿ. ನಾಯಕ್ ಅವರಿದ್ದ ವಿಭಾಗೀಯ ಪೀಠ ಈ ಮಧ್ಯಂತರ ಆದೇಶವನ್ನು ಮಾಡಿದೆ. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಮೂಲ ಅರ್ಜಿದಾರರಾದ ಬಿ.ಎನ್. ಮಧು, ಕರ್ನಾಟಕ ಲೋಕಸೇವಾ ಆಯೋಗ ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ಮೂರು ವಾರಗಳಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸೂಚನೆ ನೀಡಿತು.

## ಧರ್ಮಸ್ಥಳ : ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಾಧೀಶ

• ಉದಯವಾಹಿನಿ, ಬೆಂಗಳೂರು

'ಧರ್ಮಸ್ಥಳದಲ್ಲಿ ಕೊಲೆಯಾದ ನೂರಾರು ಶವಗಳನ್ನು ಕಾನೂನು ಬಾಹಿರವಾಗಿ ದಫನ ಮಾಡಲಾಗಿದೆ' ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಬಂಧಕವಾಗಿ ಆದೇಶ ಕೋರಲಾದ ಅಸಲು ದಾವೆ ವಿಚಾರಣೆಯನ್ನು ನಡೆಸುತ್ತಿರುವ ಬೆಂಗಳೂರು ಸಿಟಿ ಸಿವಿಲ್ ಕೋರ್ಟ್‌ನ ಸೆಷನ್ಸ್ ನ್ಯಾಯಾಧೀಶ ವಿಜಯ ಕುಮಾರ್ ರೈ ತಮ್ಮ ಮುಂದಿರುವ ಹಾಲಿ ಪ್ರಕರಣವನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಲು ಮನವಿ ಮಾಡಿದ್ದಾರೆ. ನ್ಯಾಯಾಧೀಶ ರೈ ಅವರು ನೀಡಿದ್ದ ಪ್ರತಿಬಂಧಕ ಆದೇಶವನ್ನು ಪತ್ರಕರ್ತ ನವೀನ್ ಸೂರಿಂಜೆ, ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಹಾಗೂ ಬೈರಪ್ಪ ಹರೀಶ್ ಕುಮಾರ್ ಪ್ರಶ್ನಿಸಿದ್ದರು. 'ನ್ಯಾಯಾಧೀಶ ರೈ ಅವರು, ಡಿ. ಹರ್ಷೇಂದ್ರ ಕುಮಾರ್ ಕುಟುಂಬದಿಂದ ನಿರ್ವಹಣೆ ಮಾಡಲಾಗುತ್ತಿರುವ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥ ಕಾನೂನು ಕಾಲೇಜಿನಲ್ಲಿ 25 ವರ್ಷಗಳ ಹಿಂದೆ ವಿದ್ಯಾರ್ಥಿಯಾಗಿದ್ದರು. ಹೀಗಾಗಿ, ಹಾಲಿ ಪ್ರಕರಣವನ್ನು ಬೇರೊಂದು ನ್ಯಾಯಾಲಯಕ್ಕೆ ವರ್ಗಾಯಿಸಬೇಕು' ಎಂದು ಕೋರಿ ಮೆಮೊ ಸಲ್ಲಿಸಿದ್ದರು.

## ಕೃತಕ ಬಣ್ಣಗಳ ಬಳಕೆ; ಎಂಪೈರ್ ಹೊಟೇಲ್‌ಗಳ ಮೇಲೆ ಕ್ರಮ

• ಉದಯವಾಹಿನಿ, ಬೆಂಗಳೂರು

ಜುಲೈನಲ್ಲಿ 3,489 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದ್ದು, ಅವುಗಳಲ್ಲಿ 17 ಮಾದರಿಗಳು ಅಸುರಕ್ಷಿತ ಮತ್ತು 18 ಮಾದರಿಗಳು ಕಳಪೆ ಮಟ್ಟದ್ದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ರಾಜ್ಯದಾದ್ಯಂತ ಬೀದಿ ಬದಿಯ 1,557 ಆಹಾರ ತಯಾರಿಕಾ ಘಟಕಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ಲೋಪ ಕಂಡು ಬಂದಿರುವ 406 ಘಟಕಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೇ, ಸ್ಥಳದಲ್ಲೇ ರೂ. 44,500 ದಂಡ ವಿಧಿಸಲಾಗಿದೆ. 240 ಬೀದಿ ಬದಿ ಆಹಾರ ವ್ಯಾಪಾರಿಗಳಿಗೆ ನೈರ್ಮಲ್ಯ ಮತ್ತು ಗುಣಮಟ್ಟ ಕುರಿತ ತರಬೇತಿ ನೀಡಲಾಗಿದೆ ಎಂದರು. ರಾಜ್ಯದ ವಿವಿಧೆಡೆ 186 ಬಸ್ ನಿಲ್ದಾಣಗಳಲ್ಲಿ 889 ಆಹಾರ ಮಳಿಗೆಗಳನ್ನು ಪರೀಕ್ಷಿಸಲಾಗಿದ್ದು, ಲೋಪಗಳು ಕಂಡು ಬಂದಿರುವ 206 ಘಟಕಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಸ್ಥಳದಲ್ಲೇ 55 ಸಾವಿರ ದಂಡ ವಿಧಿಸಲಾಗಿದೆ.


## ಕೆಆರ್‌ಎಸ್ ಅಣೆಕಟ್ಟೆಗೆ ಟಿಪ್ಪು ಅಡಿಗಲ್ಲು ವಿವಾದ-ಆನಂದೂರಿನ ಶಾಸನದಲ್ಲಿ ಉಲ್ಲೇಖ

• ಉದಯವಾಹಿನಿ, ಬೆಂಗಳೂರು

ಕನ್ನಂಬಾಡಿ ಅಣೆಕಟ್ಟೆಗೆ ಮೊದಲು ಅಡಿಪಾಯ ಹಾಕಿದ್ದೇ ಅಂದಿನ ಮೈಸೂರು ಸಾಮ್ರಾಜ್ಯದ ಅರಸ ಟಿಪ್ಪು ಸುಲ್ತಾನ್ ಎಂದು ಹೇಳುವ ಮೂಲಕ ಸಚಿವರಾದ ಎಚ್.ಸಿ. ಮಹದೇವಪ್ಪನವರು ಹೊಸತೊಂದು ವಿವಾದಕ್ಕೆ ನಾಂದಿ ಹಾಡಿದ್ದಾರೆ.

ಇದರ ಬಗ್ಗೆ ರಾಜಕೀಯ ವಲಯದಲ್ಲಿ ಹಾಗೂ ಮಾಧ್ಯಮಗಳಲ್ಲಿ ಹಲವಾರು ರೀತಿಯ ಪರ ವಿರೋಧ ಚರ್ಚೆಗಳಾಗುತ್ತಿವೆ. ಇದರ ನಡುವೆಯೇ ನಟ ಚೇತನ್ ಅಹಿಂಸಾ ಅವರು ಮಹದೇವಪ್ಪನವರ ಹೇಳಿಕೆಗೆ ಬೆಂಬಲ ಕೊಡುವಂಥ ಮತ್ತೊಂದು ವಿಚಾರವನ್ನು ದಾಖಲೆಯೊಂದರ ಮೂಲಕ ತಮ್ಮ ಫೇಸ್ ಬುಕ್ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಆ ಪೋಸ್ಟ್‌ನಲ್ಲಿ, ಅವರು 1794ರ ಪರ್ಶಿಯನ್ ಶಾಸನದಲ್ಲಿ ಟಿಪ್ಪು ಸುಲ್ತಾನ್ ಅವರು ಕಾವೇರಿ ನದಿಗೆ 'ಮೊಹಿಯಿ ಅಣೆಕಟ್ಟೆಗೆ' ಅಡಿಗಲ್ಲು ಇಟ್ಟಿದ್ದಾರೆಂದು ಹೇಳಲಾಗಿದೆ.




**ಇಂಗ್ಲೀಷ್ ಪತ್ರಿಕೆಯಲ್ಲಿ ಬಂದಿದ್ದ ಪ್ರಕಟಣೆ**

ಇತಿಹಾಸಕಾರರು ಹೇಳುವಂತೆ, ನಾಲ್ಕನೇ ಆಂಗ್ಲ-ಮೈಸೂರು ಯುದ್ಧದಲ್ಲಿ ಟಿಪ್ಪು 'ವೀರ ಮರಣ' ಹೊಂದಿಲ್ಲದಿದ್ದರೆ, ಅವರು ಅಣೆಕಟ್ಟಿನ ನಿರ್ಮಾಣವನ್ನು ಆರಂಭಿಸುತ್ತಿದ್ದರು. ಈ 'ಹೊಸ ಆನಂದೂರಿನ ಶಾಸನ' ಈಗ ಕೆಆರ್‌ಎಸ್ ಅಣೆಕಟ್ಟಿನ ಪ್ರವೇಶ ದ್ವಾರದ ಬಳಿ ಸ್ಥಾಪಿಸಲ್ಪಟ್ಟಿದೆ ಎಂದು ಅವರು ಉಲ್ಲೇಖಿಸಿದ್ದಾರೆ. ಈ ಸುದ್ದಿ ಹೊಸ ಆನಂದೂರಿನ ಶಾಸನದ ಬಗ್ಗೆ ದಶಕಗಳ ಹಿಂದೆ ಇಂಗ್ಲೀಷ್ ಪತ್ರಿಕೆಯಲ್ಲಿ ಬಂದಿದ್ದ ಪ್ರಕಟಣೆಯೊಂದರ ಕ್ಲಿಪ್ಪಿಂಗ್ ಅನ್ನೂ ಸಹ ನಟ ಚೇತನ್ ಅಹಿಂಸಾ ಅವರು ಈ ಮಾಹಿತಿಯ ಜೊತೆಗೆ ಪೋಸ್ಟ್ ಮಾಡಿದ್ದಾರೆ. ಆ ವರದಿಯಲ್ಲೂ ಪರ್ಶಿಯನ್ ಶಿಲಾಶಾಸನದಲ್ಲಿ ಈ ಅಣೆಕಟ್ಟೆಗೆ ಟಿಪ್ಪು ಅವರೇ ಅಡಿಗಲ್ಲು ಹಾಕಿರುವಂಥ ವಿಚಾರ ಉಲ್ಲೇಖವಾಗಿದೆ.

**ಸಚಿವ ಮಹದೇವಪ್ಪ ಹೇಳಿಕೆಯ ನಿಜಾಂಶವೇನು?**

ಕನ್ನಂಬಾಡಿ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂದು ಸಚಿವ ಡಾ. ಎಚ್.ಸಿ.ಮಹದೇವಪ್ಪ ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ. ಈಗ, ನಾನು ಹಾಗೆ ಹೇಳಿದ್ದಲ್ಲ ಎಂದು ಅವರೀಗ ಬೇರೊಂದು ಸ್ಪಷ್ಟನೆಯನ್ನು ನೀಡಿದ್ದಾರೆ. ಆದರೆ, ಸಾಮಾಜಿಕ ಹಾಗೂ ರಾಜಕೀಯ ವಲಯದಲ್ಲಿ ಕೆಆರ್ ಎಸ್ ಅಣೆಕಟ್ಟೆಗೆ ಮೊದಲು ಅಡಿಪಾಯ ಹಾಕಿದ್ದು ಯಾರು ಎಂಬ ಪರ- ವಿರೋಧ ಚರ್ಚೆಗಳು ನಡೆಯುತ್ತಿವೆ.

**ಒಡೆಯರ್ ಕಾಲದ 2.5 ಕೋಟಿ ರೂ. ಬೆಲೆಯ ಕ್ರೆಸ್ಟ್ ಗೇಟ್ ಕೆಜಿಗೆ 6 ರೂ. ಲೆಕ್ಕದಲ್ಲಿ ಮಾರಾಟ?:** ಕೃಷ್ಣರಾಜಸಾಗರ ಅಣೆಕಟ್ಟೆಯ ಎಲ್ಲಾ 150 ಕ್ರೆಸ್ಟ್ ಗೇಟ್‌ಗಳನ್ನು ಕಳೆದ ವರ್ಷ ಬದಲಾಯಿಸಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಕಟ್ಟಲಾಗಿದ್ದ ಆ ಡ್ಯಾಂನಲ್ಲಿ ಅಂದಿಗೆ, ಕ್ರೆಸ್ಟ್ ಗೇಟ್‌ಗಳನ್ನು 2.5 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗಿತ್ತು. ಆದರೆ, ಹಳೆಯ ಗೇಟ್‌ಗಳನ್ನು ಕೆಜಿಗೆ ಕೇವಲ 6 ರೂ.ಗಳಂತೆ ಮಂಡ್ಯದ ಮಾಣಿಕೇಶ್ವರಿ ಎಂಬ ಸಂಸ್ಥೆಗೆ ಮಾರಾಟ ಮಾಡಲಾಗಿದೆ ಎಂದು ಮಂಡ್ಯ ಜಿಲ್ಲಾ ರೈತ ಸಂಘದ ಅಧ್ಯಕ್ಷ ಎ.ಎಲ್. ಕೆಂಪೂಗೌಡ ಎಂಬುವರು ಕಳೆದ ವರ್ಷ ಆರೋಪಿಸಿದ್ದರು.

## ಕಾಂಗ್ರೆಸ್‌ನಲ್ಲಿ ಚಿಂತೆಗೆ ಕಾರಣವಾದ ಆಂತರಿಕ ಸಮೀಕ್ಷಾ ವರದಿ

● ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ 2 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಸರ್ಕಾರ, ಪಕ್ಷದ ಕಡೆಯಿಂದ ಸಮೀಕ್ಷೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ 2 ವರ್ಷಗಳು ತುಂಬಿವೆ. ಈ ಹಿನ್ನೆಲೆಯಲ್ಲಿ ಜನರ ಅಭಿಪ್ರಾಯ ಏನಿದೆ ಎಂಬ ಕುರಿತಾಗಿ ಆಂತರಿಕವಾಗಿ ಸಮೀಕ್ಷೆಯನ್ನು ನಡೆಸಲಾಗಿದೆ. ಪಕ್ಷ ಹಾಗೂ ಸರ್ಕಾರದ ವತಿಯಿಂದ ಪ್ರತ್ಯೇಕವಾಗಿ ಸಮೀಕ್ಷೆಗಳು ನಡೆದಿದೆ. ಈ ಸಮೀಕ್ಷೆಯಲ್ಲಿ ಗ್ಯಾರಂಟಿ ಯೋಜನೆಗಳು ಉತ್ತಮವೇ, ಆದ್ರೆ ಕೇವಲ ಗ್ಯಾರಂಟಿ ಕೊಟ್ಟರೆ ಮಾತ್ರ ಸಾಲದು ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಆದ್ಯತೆ ಕೊಡಬೇಕು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಕಾಂಗ್ರೆಸ್ ಮೂಲಗಳ ಪ್ರಕಾರ ಪಶ್ಚಿಮ ಬಂಗಾಳ ಮೂಲದ ಸಂಸ್ಥೆಯೊಂದಕ್ಕೆ ಸಮೀಕ್ಷೆಯ ಜವಾಬ್ದಾರಿ ನೀಡಲಾಗಿತ್ತು. ಈ ಸಂಸ್ಥೆ ರಾಜ್ಯಾದ್ಯಂತ ಜನರ ಮನದಾಳದ ಮಾತಿಗೆ ಕಿವಿಯಾಗುವ ಪ್ರಯತ್ನ ಮಾಡಿತ್ತು. ಈ ಸಂಸ್ಥೆ ಕೆಲವೊಂದು ವಿಚಾರಗಳನ್ನು ಮುಂದಿಟ್ಟುಕೊಂಡು ಜನರ ಅಭಿಪ್ರಾಯ ಸಂಗ್ರಹಿಸಿದೆ.

ಕಾಂಗ್ರೆಸ್ ಸರ್ಕಾರದ ಪರ ಹಾಗೂ ವಿರುದ್ಧ ಜನರಲ್ಲಿ ಏನೆಲ್ಲಾ ಅಭಿಪ್ರಾಯಗಳು ಇವೆ ಎಂಬ ನಿಟ್ಟಿನಲ್ಲಿ ಸಮೀಕ್ಷೆಯನ್ನು ನಡೆಸಿ ಮಾಹಿತಿಯನ್ನು ಕಲೆ ಹಾಕಿದೆ ಎಂದು ತಿಳಿದುಬಂದಿದೆ.

**ಸಮೀಕ್ಷೆಯಲ್ಲಿ ಕಂಡು ಬಂದ ಪ್ಲಸ್ ಹಾಗೂ ಮೈನಸ್ ಅಂಶಗಳೇನು?:** ಸರ್ಕಾರ ಆಂತರಿಕವಾಗಿ ನಡೆಸಿದ ಸಮೀಕ್ಷೆಯಲ್ಲಿ ಕೆಲವೊಂದು ಪ್ಲಸ್ ಹಾಗೂ ಮೈನಸ್ ಅಂಶಗಳು ಪತ್ತೆಯಾಗಿವೆ. ಗ್ರಾಮೀಣ ಭಾಗದಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಲ್ಲಿ ಉತ್ತಮ ಅಭಿಪ್ರಾಯಗಳಿವೆ. ಆದರೆ ನಗರ ಪ್ರದೇಶಗಳಲ್ಲಿ ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯಗಳು ವ್ಯಕ್ತವಾಗಿವೆ.

ಮುಂದಿನ ಚುನಾವಣೆಯಲ್ಲಿ ಗ್ಯಾರಂಟಿಯಿಂದ ನಿರೀಕ್ಷಿತ ಮಟ್ಟದ ಲಾಭ ಸಿಗಲ್ಲ ಎಂಬ ಅಂಶ ಸಮೀಕ್ಷೆಯಲ್ಲಿ ಕಂಡು ಬಂದಿದೆ. ಈ ವಿಚಾರ ಕಾಂಗ್ರೆಸಿಗರಿಗೆ ಆತಂಕ ತಂದಿದೆ.



**ಜನರ ಮನದಾಳದ ಮಾತಿಗೆ ಕಿವಿಯಾಗುವ ಪ್ರಯತ್ನ**

**ಪಕ್ಷ ಮತ್ತು ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕಾಗಿದೆ**

ಸಮೀಕ್ಷೆಯಿಂದ ತಿಳಿದು ಬಂದ ಒಟ್ಟು ಸಾರಾಂಶವೇನೆಂದರೆ, ಸರ್ಕಾರ ಕೇವಲ ಗ್ಯಾರಂಟಿಗಳನ್ನು ಮಾತ್ರ ನೆಚ್ಚಿಕೊಳ್ಳದೆ, ಇತರ ಅಭಿವೃದ್ಧಿ ಕೆಲಸಗಳತ್ತಲೂ ಹೆಚ್ಚಿನ ಆದ್ಯತೆ ಕೊಡಬೇಕು. ಜನರು ಗುರುತಿಸುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬುದಾಗಿದೆ. ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಹೀಗೆ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯುವುದು ಸುಲಭವಲ್ಲ. ಈಗ ಚುನಾವಣೆ ನಡೆದರೆ ಕಾಂಗ್ರೆಸ್ 90 - 95 ಸ್ಥಾನ ಮಾತ್ರ ಗೆಲ್ಲೋದಕ್ಕೆ ಸಾಧ್ಯ. ಹಾಗಾಗಿ ಪಕ್ಷ ಮತ್ತು ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕಾಗಿದೆ ಎಂಬ ಉಲ್ಲೇಖವೂ ವರದಿಯಲ್ಲಿ ಇದೆ ಎಂದು ತಿಳಿದುಬಂದಿದೆ. ಈ ನಡುವೆ ಸಿಎಂ ಸಿದ್ದರಾಮಯ್ಯ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿಗಳ ಸಭೆ ನಡೆಸಿದ್ದರು. ಈ ಸಭೆಯಲ್ಲಿ ಸಮೀಕ್ಷೆಯ ವಿಚಾರವಾಗಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಕ್ಷೇತ್ರಗಳಲ್ಲಿ ಗ್ಯಾರಂಟಿಗಳ ಬಗ್ಗೆ ಹೆಚ್ಚು ಹೆಚ್ಚು ಪ್ರಚಾರ ಮಾಡಿ , ಜೊತೆಗೆ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಇಂದಿನಿಂದಲೇ ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ ಎಂದು ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎಂಬ ಮಾಹಿತಿಯೂ ಲಭ್ಯವಾಗಿದೆ.

ಇನ್ನು ಕಾಂಗ್ರೆಸ್ ಪಕ್ಷದಿಂದಲೈ ಪ್ರತ್ಯೇಕ ಸಮೀಕ್ಷೆಯನ್ನು ನಡೆಸಲಾಗಿದೆ. ಈ ಸಮೀಕ್ಷೆಯಲ್ಲಿ ಸರ್ಕಾರದ ಕಾರ್ಯವೈಖರಿಯ ಬಗ್ಗೆ ಜನರ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳುವ ಪ್ರಯತ್ನ ನಡೆಸಲಾಗಿದೆ. ಕೇವಲ ಸರ್ಕಾರದ ಕಾರ್ಯವೈಖರಿ ಮಾತ್ರವಲ್ಲದೆ ಕ್ಷೇತ್ರವಾರು ಶಾಸಕರು ಕಾರ್ಯವೈಖರಿಯ ಬಗ್ಗೆಯೂ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,140/Gram24ct ₹9,295/Gram22ct ಬೆಳ್ಳಿ: ₹113.00/Gram

# ಪೀಣ್ಯ ಮೇಲ್ಸೇತುವೆ ಬಲಪಡಿಸುವ ಕೆಲಸ 2 ತಿಂಗಳಲ್ಲಿ ಪೂರ್ಣ: ಆಕ್ಟೋಬರ್‌ನಿಂದ ಸಂಚಾರ ದಟ್ಟಣೆಗೂ ಬ್ರೇಕ್

• ಉದಯವಾಹಿನಿ, ಬೆಂಗಳೂರು

ಪೀಣ್ಯ ಮೇಲ್ಸೇತುವೆ ದುರಸ್ತಿ ಕಾರ್ಯ ಸದೃಢಗೊಳಿಸುವ ಕಾಮಗಾರಿಯು ಶೇ 83 ರಷ್ಟು ಮುಕ್ತಾಯಗೊಂಡಿದ್ದು, ಮುಂದಿನ ತಿಂಗಳು ಅಂದರೆ ಅಕ್ಟೋಬರ್ 2025 ಮೊದಲ ವಾರದಲ್ಲಿ ಪೂರ್ಣ ಪ್ರಮಾಣದಲ್ಲಿ ಪೀಣ್ಯ ಮೇಲ್ಸೇತುವೆ ಸಿದ್ಧವಾಗಲಿದೆ.

ಬೆಂಗಳೂರಿಂದ ರಾಜ್ಯದ ಬಹುತೇಕ 20 ಜಿಲ್ಲೆಗಳನ್ನು ಸಂಪರ್ಕಿಸಲು ಪ್ರಮುಖ ಹೆದ್ದಾರಿ ಈ ಪೀಣ್ಯ ಮೇಲ್ಸೇತುವೆ. ಅಷ್ಟೇ ಅಲ್ಲ ಹೊರರಾಜ್ಯಗಳಾದ ಗೋವಾ, ಮಹಾರಾಷ್ಟ್ರ, ತೆಲಂಗಾಣಕ್ಕೂ ಇದೇ ಮಾರ್ಗ. ಬೆಂಗಳೂರು-ತುಮಕೂರು ರಸ್ತೆಯ ಭಾಗ ಈಗ ಕಾಮಗಾರಿ ನಡೆಸಲಾಗುತ್ತಿದೆ. ಇದು ಗೊರಗುಂಟೆಪಾಳ್ಯದಿಂದ ಆರಂಭಗೊಂಡು ಪಾರ್ಲೇಜಿ ಫ್ಯಾಕ್ಟರಿವರೆಗೆ ಸುಮಾರು 4.2 ಕಿಮೀ ಉದ್ದದ ಮೇಲ್ಸೇತುವೆ ದುರಸ್ತಿ ಕಾಮಗಾರಿಯಾಗಿದೆ.

ಮೇಲ್ಸೇತುವೆ ಪಿಲ್ಲರ್(ಕಂಬ)ಗಳಲ್ಲಿ ಈಗಾಗಲೇ ದುರ್ಬಲವಾಗಿದ್ದ 1000 ಕೇಬಲ್‌ಗಳನ್ನು ಬದಲಾಯಿಸಲಾಗಿದೆ. ಇನ್ನು ಕೇವಲ 200 ಬಾಕಿ ಇದ್ದು, 120 ಹೊಸ ಕೇಬಲ್ ಗಳ ಅಳವಡಿಕೆಯೂ ಮಾಡಲಾಗಿದೆ. ಈ ಖಾಮಗಾರಿ ವೇಳೆ ಬುಧವಾರ ಬೆಳಗ್ಗೆ 6 ರಿಂದ ಗುರುವಾರ ಬೆಳಗ್ಗೆ 6 ರವರೆಗೆ ಭಾರಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಇದರಿಂದ ಅನ್ಯಮಾರ್ಗಗಳಲ್ಲಿ ಭಾರಿ ಟ್ರಾಫಿಕ್ ಜಾಂಗೂ ಕಾರಣವಾಗಿತ್ತು. ಆದರೆ ಅಕ್ಟೋಬರ್ ಮೊದಲ ವಾರದಿಂದ ಈ ಸಮಸ್ಯೆಗೆ ಮುಕ್ತಿ ಸಿಗಲಿದೆ.

ಮೇಲ್ಸೇತುವೆ ಬಲಪಡಿಸುವ ಕೆಲಸ ಎರಡು ಹಂತದಲ್ಲಿ ನಡೆಸಲಾಗುತ್ತಿದೆ. ಮೊದಲ ಹಂತದಲ್ಲಿ 120 ಕಂಬಗಳಿಗೆ 240 ಹೊಸ ಕೇಬಲ್ ಅಳವಡಿಕೆ, ಎರಡನೇ ಹಂತದಲ್ಲಿ ಪ್ರತೀ ಪಿಲ್ಲರ್‌ಗಳ ತಲಾ 10 ಕೇಬಲ್‌ನಂತೆ 1200 ಕೇಬಲ್‌ಗಳ ಬದಲಾವಣೆ ಕೆಲಸ ನಡೆಸಲಾಗಿದೆ. 2021 ಡಿಸೆಂಬರ್ 25 ಕ್ಕೆ ಮೇಲ್ಸೇತುವೆಯನ್ನು ಎಲ್ಲಾ ಮಾದರಿಯ ವಾಹನಗಳೂ ಚಲಿಸದಂತೆ ಬಂದ್ ಮಾಡಲಾಗಿತ್ತು. 102 ಹಾಗೂ 103 ನೇ ಕಂಬದ ಬಳಿ ದೋಷ ಕಂಡುಬಂದಿತ್ತು. ನಂತರ ಹಗುರ ವಾಹನಗಳಿಗೆ ಮಾತ್ರ ಅವಕಾಶ ಕೊಟ್ಟು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದುರಸ್ತಿ ಕಾರ್ಯ ಆರಂಭಿಸಿತ್ತು. ಮೇಲ್ಸೇತುವೆ ಈಗಾಗಲೇ ಸದೃಢಪಡಿಸುವ ಕೆಲಸ ಆಗಿದೆ. ಕೊನೆಯ ಹಂತದ ಕಾಮಗಾರಿಗಳು ಮುಕ್ತಾಯದ ಬಳಿಕ ಎಲ್ಲಾ ಮಾದರಿಯ ವಾಹನಗಳ ಓಡಾಟಕ್ಕೆ ಅನುವು ಆಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



### ಪೀಣ್ಯ ಮೇಲ್ಸೇತುವೆ ರಕ್ಷಣಾತ್ಮಕ ಪೈಂಟ್

ಮೇಲ್ಸೇತುವೆಯನ್ನು ಇನ್ನು ಮುಂದೆಯೂ ಸದೃಢವಾಗಿರಿಸಲು, ಆಂಟಿ-ಕಾರ್ಬೊನೇಷನ್ ಪೇಂಟ್ ಬಳಿಯಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪೈಂಟ್ ಕೋಟಿಂಗ್ ಉಕ್ಕಿನ ರಚನೆಗೆ ರಕ್ಷಣೆ ನೀಡುತ್ತದೆ. ವಾತಾವರಣದಲ್ಲಿನ ತೇವಾಂಶ, ರಾಸಾಯನಿಕ ವಸ್ತುಗಳು, ಧೂಳು ಮತ್ತು ಕಾಂಕ್ರೀಟ್ ಬಿರುಕುಗಳಿಂದ ಉಂಟಾಗುವ ತುಕ್ಕು ಹಿಡಿಯುವಿಕೆಯನ್ನು ತಡೆಯುತ್ತದೆ. ಇದರಿಂದ ಸೇತುವೆಯ ಬಾಳಿಕೆ ಹೆಚ್ಚಾಗುತ್ತದೆ. ಪ್ರಯಾಣಿಕರ ಸುರಕ್ಷತೆಯನ್ನು ಕಾಪಾಡುತ್ತದೆ.

## ನನ್ನನ್ನು ಕ್ಷಮಿಸಿ.. ಮರಣಪತ್ರ ಬರೆದಿಟ್ಟು ಏಳನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ಮರಣ ಪತ್ರ ಬರೆದಿಟ್ಟು ಏಳನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ಸಿಕೆ ಅಚ್ಚುಕಟ್ಟುವಿನಲ್ಲಿ ನಡೆದಿದೆ. ಗಾಂಧಾರ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಬೆಳಿಗ್ಗೆ ಬಾಲಕನ ತಂದೆ ಗಣೇಶ್ ಪ್ರಸಾದ್ ಅವರು ರೂಮ್‌ಗೆ ಹೋಗಿ ನೋಡಿದಾಗ ಘಟನೆ ಗೊತ್ತಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಮರಣ ಪತ್ರದಲ್ಲಿ ಕ್ಷಮಿಸಿ ಎಂದು ಬರೆದಿದ್ದಾನೆ. ಮರಣ ಪತ್ರ ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಗಾಂಧಾರ್‌ನ ತಂದೆ ಸಂಗೀತ ಕಲಾವಿದರು. ತಾಯಿ ಸವಿತಾ ಜಾನಪದ ಗಾಯಕಿ. ಸವಿತಾ ಅವರು ಕಳೆದ ಶುಕ್ರವಾರ ಕಾರ್ಯಕ್ರಮಕ್ಕೆಂದು ಆಸ್ಟ್ರೇಲಿಯಾಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ರವಾನೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

## ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನದ ಆರೋಪ

### ಸಿದ್ಧರಾಮಯ್ಯ, ಡಿ. ಕೆ. ಶಿವಕುಮಾರ್‌ಗೆ ಬಿಜೆಪಿ ನಾಯಕರ ಕುತೂಹಲಕಾರಿ ಬಹಿರಂಗ ಪತ್ರ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮಹದೇವಪುರ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ ನಡೆದಿದೆ ಎನ್ನುವ ಆರೋಪವನ್ನು ವಿಪಕ್ಷದ ನಾಯಕ ರಾಹುಲ್ ಗಾಂಧಿ, ಚುನಾವಣಾ ಆಯೋಗದ ವಿರುದ್ದ ಮಾಡಿದ್ದಾರೆ. ಈ ಸಂಬಂಧ, ರಾಹುಲ್, ಬೆಂಗಳೂರಿನಲ್ಲಿ ಆಗಸ್ಟ್ ಐದರಂದು ಪ್ರತಿಭಟನೆ ನಡೆಸಲಿದ್ದಾರೆ. ಈ ಹಿನ್ನಲೆಯಲ್ಲಿ, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಹಾಗೂ ಆಡಳಿತ ಪಕ್ಷದ ಮಾಜಿ ನಾಯಕರು, ಬಿಬಿಎಂಪಿ, ಎನ್‌ಆರ್ ರಮೇಶ್, ಸಿಎಂ, ಡಿಸಿಎಂಗೆ ಬಹಿರಂಗ ಪತ್ರವನ್ನು ಬರೆದಿದ್ದಾರೆ.

**ಅದರ ಯಥಾವತ್ ಕಾಪಿ ಹೀಗಿದೆ:** ಬೆಂಗಳೂರಿನ ಹಲವು ಕ್ಷೇತ್ರಗಳಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂದು ಕಾಂಗ್ರೆಸ್ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ಪ್ರತಿಭಟನೆ ನಡೆಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಈ ಹಿಂದೆ ಕಾಂಗ್ರೆಸ್ ಪಕ್ಷ ಮಾಡಿರುವ ಅಕ್ರಮ ಮತದಾರರ ಸೇರ್ಪಡೆ ಕಾರ್ಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ. ಸಿದ್ಧರಾಮಯ್ಯ ಹಾಗೂ KPCC ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಡಿ. ಕೆ. ಶಿವಕುಮಾರ್ ಅವರಿಗೆ ಬಹಿರಂಗ ಪತ್ರ.



ಕರ್ನಾಟಕ ರಾಜ್ಯದ-ಅದರಲ್ಲೂ ಬೆಂಗಳೂರು ನಗರದ ಮಹದೇವಪುರ, ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಚುನಾವಣಾ ಅಕ್ರಮಗಳು ನಡೆದಿದೆ ಎಂದು ತಮ್ಮ ಪಕ್ಷದ ನಾಯಕರು ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ರಾಹುಲ್ ಗಾಂಧಿ ಅವರು ದಿನಾಂಕ 05/08/2025 ರಂದು ಪ್ರತಿಭಟನೆ ನಡೆಸುತ್ತಿರುವ ವಿಷಯ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಆದರೆ, ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದವರು

**2013 ರಿಂದ 2018 ರ ಅವಧಿಯಲ್ಲಿ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಕೇವಲ ಬೆಂಗಳೂರು ಮಹಾನಗರದ ಭಾರತೀಯ ಜನತಾ ಪಾರ್ಟಿಯ ಶಾಸಕರು ಪ್ರತಿನಿಧಿಸುತ್ತಿರುವ ಕ್ಷೇತ್ರಗಳಲ್ಲಿ ಕಾಂಗ್ರೆಸ್(ಐ) ಪಕ್ಷದ ಮುಖಂಡರುಗಳು ಭಾರಿ ಅಕ್ರಮ ಮತದಾರರ ಸೇರ್ಪಡೆ ಕಾರ್ಯ ನಡೆಸಿರುವ ಸಂಬಂಧ ಮುಖ್ಯಮಂತ್ರಿಗಳಿಗೆ ಹಾಗೂ ಚುನಾವಣಾ ಆಯೋಗಕ್ಕೆ ದಾಖಲೆಗಳ ಸಹಿತ ದೂರುಗಳನ್ನು ಸಲ್ಲಿಸಲಾಗಿತ್ತು.**

ಈ ಹಿಂದೆ ಮಾಡಿರುವ ಚುನಾವಣಾ ಅಕ್ರಮಗಳು / ಅಕ್ರಮ ಮತದಾರರ ಸೇರ್ಪಡೆ / ದೇಶದ್ರೋಹದ ಕಾರ್ಯಗಳ ಬಗ್ಗೆ ಕೆಲವೊಂದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. 2013 ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬನಶಂಕರಿ ವಾರ್ಡ್ ಮತ್ತು ಕುಮಾರಸ್ವಾಮಿ ಬಡಾವಣೆ ವಾರ್ಡ್‌ಗಳ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ತಮಿಳುನಾಡಿನ ಡೆಂಕಣಿಕೋಟೆ ಪ್ರದೇಶದ ನಿವಾಸಿಗಳಾಗಿರುವ 9,000 ಕ್ಕೂ ಹೆಚ್ಚು ಅಲ್ಪಸಂಖ್ಯಾತರ ಹೆಸರುಗಳನ್ನು ಸೇರ್ಪಡೆ ಮಾಡಲು ತಯಾರಿ ನಡೆಸಿದ್ದು, ಈ ಸಂಬಂಧ ದಾಖಲೆಗಳ ಸಹಿತ ನಾನು ನೀಡಿದ ದೂರಿನನ್ವಯ 9,000 ಕ್ಕೂ ಹೆಚ್ಚು Form-6ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತಲ್ಲದೇ, ಅದಾಗಲೇ 3,000 ಕ್ಕೂ ಹೆಚ್ಚು ಮಂದಿ ತಮಿಳುನಾಡಿನ ಡೆಂಕಣಿಕೋಟೆ ಪ್ರದೇಶದ ನಿವಾಸಿಗಳಾಗಿದ್ದ ಅಲ್ಪಸಂಖ್ಯಾತರ ಹೆಸರುಗಳನ್ನು ಮೇಲೆ ತಿಳಿಸಿರುವ 02 ವಾರ್ಡ್ ಗಳಲ್ಲಿ ಕಾಂಗ್ರೆಸ್(ಐ) ಪಕ್ಷದ ನಾಯಕರು ಸೇರ್ಪಡೆ ಮಾಡಿದ್ದುದನ್ನು ಪತ್ತೆ ಹಚ್ಚಿದ ನಂತರ ಈ ಸಂಬಂಧ 14 ಮಂದಿ ಅಧಿಕಾರಿ / ನೌಕರರನ್ನು ಅಮಾನತು ಮಾಡಲಾಗಿತ್ತು.

- ಬೆಂಗಳೂರಿನ ಎರಡು ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನದ ಆರೋಪ
- ಕಾಂಗ್ರೆಸ್ ನಾಯಕರು ಮತ್ತು ವಿಪಕ್ಷದ ನಾಯಕ ರಾಹುಲ್ ಗಾಂಧಿ ಪ್ರತಿಭಟನೆ
- ಬೆಂಗಳೂರು ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಎನ್‌ಆರ್ ರಮೇಶ್ ಬಹಿರಂಗ ಪತ್ರ

## ಎಡ ಸಮುದಾಯಕ್ಕೆ 7% ಒಳಮೀಸಲಾತಿ ಕೊಡಬೇಕು: ಆಂಜನೇಯ

• ಉದಯವಾಹಿನಿ, ಬೆಂಗಳೂರು

ಒಳಮೀಸಲಾತಿ ಕೊಡುವ ಸಂಬಂಧ ನ್ಯಾ. ನಾಗಮೋಹನ್ ದಾಸ್ ಆಯೋಗ ಇವತ್ತು ವರದಿ ಕೊಡ್ತಿದ್ದು, ಮಾದಿಗರಿಗೆ ನ್ಯಾಯ ಸಿಗೋ ವಿಶ್ವಾಸ ಇದೆ. ಮಾದಿಗರಿಗೆ 7% ಆದರೂ ಒಳಮೀಸಲಾತಿ ಕೊಡಬೇಕು ಎಂದು ಮಾಜಿ ಸಚಿವ ಆಂಜನೇಯ ಒತ್ತಾಯ ಮಾಡಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವರದಿ ಕೊಡುತ್ತಿರುವುದರಿಂದ ಆತಂಕ, ಕುತೂಹಲ, ಸಂತೋಷ ಎಲ್ಲಾ ಆಗುತ್ತಿದೆ. ಒಳಮೀಸಲಾತಿ ಬೇಕು ಅಂತ 35 ವರ್ಷಗಳ ಹೋರಾಟ ಮಾಡುತ್ತಿದ್ದೇವೆ. ಮಾದಿಗರಿಗೆ ಸರಿಯಾದ ಸವಲತ್ತು ಇದೂವರೆಗೂ ಸಿಕ್ಕಿಲ್ಲ. ಸುಪ್ರೀಂ ಕೋರ್ಟ್ ಒಳಮೀಸಲಾತಿ ಕೊಡಿ ಅಂತ ಆದೇಶ ಬಂದ ಮೇಲೆ ನಮಗೆ ಧೈರ್ಯ ಬಂತು. ಈವರೆಗೂ ನಮಗೆ ಸಿಗೋ ಸವಲತ್ತು ಸಿಕ್ಕಿಲ್ಲ. ಮಾದಿಗರು ಅವಕಾಶದಿಂದ ವಂಚನೆ ಆಗುತ್ತಿದ್ದಾರೆ. ಒಳಮೀಸಲಾತಿಯ ವರದಿ ಕೊಡುತ್ತಿದ್ದಾರೆ. ಒಳಮೀಸಲಾತಿ ವರದಿ ಕೊಡ್ತಿರೋದ್ರಿಂದ ಮಾದಿಗರು ಬದುಕಬಹುದು ಎಂಬ ನಂಬಿಕೆ ಬಂದಿದೆ ಎಂದರು. ನಾವು ಅಸ್ಪೃಶ್ಯರು ಅಂತ ಸರಿಯಾಗಿ ಸರ್ಕಾರದ ಸವಲತ್ತು ಸಿಕ್ಕಿರಲಿಲ್ಲ. ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ಹರಿಕಾರ ಒಳಮೀಸಲಾತಿ ಜಾತಿಗೆ ಆಯೋಗ ರಚನೆ ಮಾಡಿದ್ರು. ಆಯೋಗ ರಾಜ್ಯಾದ್ಯಂತ ಸಮೀಕ್ಷೆ ಮಾಡಿದೆ. ವರದಿ ಚೆನ್ನಾಗಿ ಇದೆ ಅನ್ನೋ ವಿಶ್ವಾಸ ಇದೆ. ನಮಗೆ ಸಿಗಬೇಕಾದ ಸವಲತ್ತು ಸಿಗೋ ವಿಶ್ವಾಸ ಇದೆ ಎಂದು ತಿಳಿಸಿದರು. ಸದಾಶಿವ ಆಯೋಗ ಎಡ ಸಮುದಾಯಕ್ಕೆ 6% ಒಳಮೀಸಲಾತಿ ಕೊಟ್ಟಿದ್ದರು. ಮಾಧುಸ್ವಾಮಿ ಅವರು 6% ಕೊಡಬೇಕು ಅಂತ ಹೇಳಿದ್ರು. ಈಗ 7% ಮೀಸಲಾತಿಯಾದ್ರು ಮಾದಿಗರಿಗೆ ಸರ್ಕಾರ ಕೊಡಬೇಕು. 15% ಮೀಸಲಾತಿ ಇದ್ದಾಗ 6% ಶಿಫಾರಸು ಮಾಡಿದ್ರು. ಈಗ 17% ಮೀಸಲಾತಿ ಇದೆ. ಈಗ 7% ಆದ್ರು ಮೀಸಲಾತಿ ಎಡ ಸಮುದಾಯಕ್ಕೆ ಕೊಡಬೇಕು ಎಂದು ಒತ್ತಾಯ ಮಾಡಿದರು.

## ಸಾರಿಗೆ ಮುಷ್ಕರವನ್ನು ಮುಂದೂಡುವಂತೆ ಹೈಕೋರ್ಟ್ ಸೂಚನೆ

• ಉದಯವಾಹಿನಿ, ಬೆಂಗಳೂರು

ನಡೆಯಬೇಕಿದ್ದ ಸಾರಿಗೆ ಮುಷ್ಕರವನ್ನು ಮುಂದೂಡುವಂತೆ ಹೈಕೋರ್ಟ್ ಸೂಚನೆ ನೀಡಿದೆ. ಸಾರಿಗೆ ನೌಕರರ ಬೇಡಿಕೆ ಈಡೇರಿಸಿ, ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರವಹಿಸಲು ಸರ್ಕಾರಕ್ಕೆ ಸೂಚನೆ ನೀಡುವಂತೆ ವಕೀಲ ಅಮೃತೇಶ್ ಅವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.



ಮುಖ್ಯ ನ್ಯಾಯಮೂರ್ತಿಗಳ ಕೋರ್ಟ್ ಕಲಾಪ ಇಲ್ಲದ ಕಾರಣ ನ್ಯಾ.ಕೆ.ಎಸ್.ಮುದಗಲ್, ನ್ಯಾ. ಎಂ.ಜಿ.ಎಸ್. ಕಮಲ್ ಅವರ ಪೀಠದಲ್ಲಿ ಈ ಅರ್ಜಿಯ ವಿಚಾರಣೆ ನಡೆಯಿತು ಅರ್ಜಿದಾರರ ಪರ ಹಾಜರಾಗಿದ್ದ ದೀಕ್ಷಾ ಅಮೃತೇಶ್ ಅವರು, ಜುಲೈ 15ರಂದು ಪ್ರತಿಭಟನಾಕಾರರು ನೋಟಿಸ್ ನೀಡಿದ್ದಾರೆ. ಆದರೆ ಈಗ ಪ್ರತಿಭಟನೆ ನಡೆಸದಂತೆ ಎಸ್ಮಾ ಜಾರಿಗೊಳಿಸಿದ್ದಾರೆ ಎಂದು ಕೋರ್ಟ್ ಗಮನಕ್ಕೆ ತಂದರು ಈ ವೇಳೆ ಸರ್ಕಾರದ ಪರ ಹಾಜರಾದ ವಕೀಲೆ, ನಿಲೋಫರ್ ಅಕ್ಬರ್, ಸಿಎಂ ಸಿದ್ದರಾಮಯ್ಯನವರು ಸಾರಿಗೆ ನೌಕರರ ಜೊತೆ ಸಭೆ ನಡೆಸುತ್ತಿದ್ದು ಪ್ರಗತಿಯಲ್ಲಿದೆ ಎಂಬ ವಿಚಾರವನ್ನು ಕೋರ್ಟ್ ಗಮನಕ್ಕೆ ತಂದರು. ವಾದ ಆಲಿಸುವ ವೇಳೆ, ಇದು ಅರ್ಜಿದಾರರ ಪ್ರಾಮಾಣಿಕತೆಗೆ ಸಂಬಂಧಿಸಿದ ವಿಚಾರವಾಗಿದ್ದು ಅವರ ಕಳಕಳಿಯನ್ನ ನೀವು ನೋಡಬೇಕು.

ಸರ್ಕಾರ ಇನ್ನೊಬ್ಬರ ಹೆಗಲ ಮೇಲೆ ಇಟ್ಟು ಶೂಟ್ ಮಾಡಬಾರದು ಎಂದು ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿತು. ಕೊನೆಗೆ ಮುಖ್ಯಮಂತ್ರಿಗಳು ಸಭೆ ನಡೆಸುತ್ತಿದ್ದಾರೆ. ಒಂದು ದಿನ ಸಾರಿಗೆ ಮುಷ್ಕರ ಮುಂದೂಡಬಹುದು ಎಂದು ಹೇಳಿ ಬುಧವಾರಕ್ಕೆ ಅರ್ಜಿ ವಿಚಾರಣೆಯನ್ನು ಮುಂದೂಡಿತು

## ಕ್ರೀಡಾಕೂಟದಲ್ಲಿ ಯುವ ಪ್ರತಿಭೆಗಳ ಅನಾವರಣ

• ಉದಯವಾಹಿನಿ, ಬೆಂಗಳೂರು

ಸಿವಿ.ರಾಮನ್ ನಗರದಲ್ಲಿರುವ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ 17 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ಕ್ರೀಡಾಕೂಟ ಆಯೋಜಿಸಲಾಗಿದೆ. ಕ್ರೀಡಾಕೂಟದಲ್ಲಿ ದೇಶದ ವಿವಿಧ ಭಾಗಗಳಿಂದ 24 ತಂಡಗಳ 288 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಅಸಾಧಾರಣ ಕೌಶಲ ಮತ್ತು ಕ್ರೀಡಾ ಮನೋಭಾವವನ್ನು ಪ್ರದರ್ಶಿಸಿದರು. ಕೇಂದ್ರೀಯ ವಿದ್ಯಾಲಯ ಸಂಘಟನೆಯ (ಕೆವಿಎಸ್) ಪ್ರಾದೇಶಿಕ ಕಚೇರಿಯ ಉಪ ಆಯುಕ್ತ ಶೇಖ್ ತಾಜುದ್ದೀನ್ ಅವರು ಕೆವಿಎಸ್ ಧ್ವಜಾರೋಹಣ ನೆರವೇರಿಸಿದರು. ಎಡಿಇ ವಿಜ್ಞಾನಿ ವರ್ಷಾ ಅಗರ್ವಾಲ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು,



ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ ತಂಡವಾಗಿ ಕೆಲಸ ಮಾಡುವಂತಹ ಕೌಶಲಗಳನ್ನು ಬೆಳೆಸುತ್ತದೆ' ಎಂದು ಹೇಳಿದರು. ಹೆಚ್ಚು ಹೆಚ್ಚು ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳಿಗೆ ಅವರು ಸಲಹೆ ನೀಡಿದರು. ಕ್ರೀಡಾಕೂಟದ ಭಾಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಗುಂಪು ನೃತ್ಯ ಮತ್ತು ಯೋಗ ಪ್ರದರ್ಶಿಸಿದರು. ನಂತರ ವರ್ಷಾ ಅಗರ್ವಾಲ್ ಅವರು, ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಚಂಡೀಗಢ ಮತ್ತು ಬೆಂಗಳೂರು, ಚೆನ್ನೈ ಮತ್ತು ಆಗ್ರಾ ತಂಡಗಳ ನಡುವೆ ಕಬಡ್ಡಿ ಪಂದ್ಯಗಳು ನಡೆದವು.

ಕಾರ್ಯಕ್ರಮದಲ್ಲಿ ವಿಜ್ಞಾನಿ ವಿನೋದ್ ವಿಶ್ವಕರ್ಮ, ಪ್ರಾಚಾರ್ಯೆ ಗ್ಲೋರಿ ಜ್ಞಾನಸಲ್ವಿ, ಕೇಂದ್ರೀಯ ವಿದ್ಯಾಲಯ ಎಂ.ಜಿ ರೈಲ್ವೆಯ ಪ್ರಾಚಾರ್ಯ ರುಡಾಲ್ ದುಬೆ, ಕೆವಿ ಡಿಆರ್‌ಡಿಒ ಶಾಲೆಯ ಮುಖ್ಯ ಶಿಕ್ಷಕಿ ಜಯಶ್ರೀ ರಾಜಾ ಉಪಸ್ಥಿತರಿದ್ದರು.

## ಮತಗಳ್ಳತನದ ಬಗ್ಗೆ ದಾಖಲಾತಿ ಇವೆ, ರಾಹುಲ್ ಗಾಂಧಿ ಬಿಡುಗಡೆ ಮಾಡ್ತಾರೆ

• ಉದಯವಾಹಿನಿ, ಬೆಂಗಳೂರು

ಮತಗಳ್ಳತನದ ಬಗ್ಗೆ ದಾಖಲಾತಿಗಳು ಇವೆ. ರಾಹುಲ್ ಗಾಂಧಿ ಅದನ್ನು ಬಿಡುಗಡೆ ಮಾಡುತ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಪ್ರತಿಭಟನೆ ಮಾಡುವ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ರಾಹುಲ್ ಗಾಂಧಿ ಮತಗಳವು ಬಗ್ಗೆ ಹೇಳಿದ್ದರು. ಅದರ ಬಗ್ಗೆ ಇಂದು ಸುದ್ದಿಗೋಷ್ಠಿ ಮಾಡಬೇಕಿತ್ತು. ಆದರೆ ಜಾರ್ಖಂಡ್ ಸಿಎಂ ಶಿಬು ಸೊರೇನ್ ಅವರು ತೀರಿಕೊಂಡಿದ್ದಾರೆ.



ಹಾಗಾಗಿ ಸುದ್ದಿಗೋಷ್ಠಿ ಮುಂದೂಡಿಕೆಯಾಗಿರಬಹುದು. ಇಲ್ಲದಿದ್ದರೆ ದಾಖಲೆ ಬಿಡುಗಡೆ ಮಾಡುತ್ತಿದ್ದರು ಎಂದು ತಿಳಿಸಿದರು. ರಾಹುಲ್ ಗಾಂಧಿ ಪ್ರತಿಭಟನೆ ಮಾಡ್ತಾರೆ. ನಿಮಗೆ ಏನು ದಾಖಲೆ ಬೇಕು ಕೊಡ್ತಾರೆ. ನಿಮ್ಮ ಮುಂದೆ ಬರುವಾಗ ದಾಖಲಾತಿ ಇಟ್ಟುಕೊಂಡು ಬರೋದು. ಮತಗಳುವು ಹೇಗೆ ಆಗಿದೆ ಎಂದು ಸಾಕ್ಷ್ಯಗಳಿವೆ. ಲೀಗಲ್ ಆಗಿಯೇ ನಾವು ಪ್ರೂವ್ ಮಾಡ್ತೇವೆ. ಸುಮ್ಮನೆ ಸುದ್ದಿಗೋಷ್ಠಿ ಮಾಡಿದ್ರೆ ಪ್ರಯೋಜನವೇನು? ದಾಖಲೆ ಇರೋದ್ರಿಂದಲೇ ಮಾಡ್ತಿರೋದು ಎಂದು ಸ್ಪಷ್ಟಪಡಿಸಿದರು. ನಾನು ಎಲೆಕ್ಷನ್ ಕಮೀಷನ್‌ಗೆ ದೂರು ಕೊಟ್ಟಿದ್ದೇನೆ. ಅದಕ್ಕೆ ಇನ್ನೂ ಆಯೋಗ ಉತ್ತರ ಕೊಟ್ಟಿಲ್ಲ. ಜಗತ್ತಿನಲ್ಲಿ ತಾಂತ್ರಿಕತೆಯಲ್ಲಿ 4ನೇ ಸ್ಥಾನ ನಮ್ಮದು. ಯಾಕೆ ಆಯೋಗ ನಮ್ಮ ಪ್ರಶ್ನೆಗೆ ಉತ್ತರ ಕೊಡ್ತಿಲ್ಲ. ಇವಿಎಂ ಬಗ್ಗೆ ಈಗಲೂ ನಮ್ಮ ಅಭಿಪ್ರಾಯ ಒಂದೇ. ಬಿಜೆಪಿ ಅವರ ಚಿಲುಮೆ ಟ್ರಸ್ಟ್ ಪ್ರಕರಣ ನೆನಪಿದ್ಯಾ, ಬೇರೆ ಬೇರೆ ಪ್ರಕರಣ ಇಲ್ಲವೇ. ನೋಡೋಣ ಎಲ್ಲವೂ ಹೊರಗೆ ಬರಲಿದೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು.

## ಟಿಪ್ಪು ಸುಲ್ತಾನ್ ಕೆಆರ್‌ಎಸ್‌ಗೆ ಆಧಾರ ಶಿಲೆ ಎನ್ನಬಹುದು :ನಟ ಚೇತನ್ ಅಹಿಂಸಾ

• ಉದಯವಾಹಿನಿ, ಬೆಂಗಳೂರು

ಕೃಷ್ಣರಾಜ ಜಲಾಶಯಕ್ಕೆ ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂಬ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು, ಪರ, ವಿರುದ್ಧದ ಅಭಿಪ್ರಾಯಗಳು ಕೇಳಿಬರುತ್ತಿವೆ. ಈ ನಡುವೆ ಟಿಪ್ಪು ಸುಲ್ತಾನ್ ಕೆಆರ್ ಎಸ್‌ಗೆ ಆಧಾರ ಶಿಲೆ ಎನ್ನಬಹುದು ಎಂದು ನಟ ಚೇತನ್ ಅಹಿಂಸಾ ಹೇಳಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಮಾಹಿತಿ ಹಂಚಿಕೊಂಡಿದ್ದು, ಮೈಸೂರು ಮೂಲದ ಟಿಪ್ಪು ಸಂಶೋಧಕ ಪ್ರೊಫೆಸರ್ ಗುರುಸಿದ್ದಯ್ಯ ಅವರ ಮಾತುಗಳ ಪ್ರಕಾರ, ಶಾಸನಗಳ ಆಧಾರದಲ್ಲಿ ಟಿಪ್ಪು ಸುಲ್ತಾನ್ ಇವತ್ತಿನ ಕೆಆರ್‌ಎಸ್ ಅಣೆಕಟ್ಟು ಇರುವ ಸ್ಥಳದ ಬಳಿ ಅಣೆಕಟ್ಟು ಕಟ್ಟುವ ಉದ್ದೇಶ ಹೊಂದಿದ್ದರು ಅನ್ನೋದು ಗೊತ್ತಾಗುತ್ತದೆ ಎಂದಿದ್ದಾರೆ.



ಟಿಪ್ಪು ಅಣೆಕಟ್ಟು ನಿರ್ಮಾಣವನ್ನು ಪ್ರಾರಂಭಿಸಲ್ಲವಾದರೂ ಇವತ್ತಿನ ಅಣೆಕಟ್ಟು ಅದೇ ಸುತ್ತಮುತ್ತಲಿನ ಸ್ಥಳದಲ್ಲಿ ನಿರ್ಮಾಣವಾಗಿರುವುದರಿಂದ ಅವರನ್ನೂ ಕೆಆರ್‌ಎಸ್‌ಗೆ 'ಆಧಾರ ಶಿಲೆ' ಎನ್ನಬಹುದು ಎಂದು ಬರೆದುಕೊಂಡಿದ್ದಾರೆ.

**ಶ್ರೀರಂಗಪಟ್ಟಣದಲ್ಲಿ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಹೆಚ್.ಸಿ. ಮಹದೇವಪ್ಪ, ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು ಸುಲ್ತಾನ್ ಎಂಬ ಹೇಳಿಕೆ ವಿವಾದಕ್ಕೆ ಗುರಿಯಾಗಿದೆ. ಕೆಆರ್‌ಎಸ್ ಗೇಟ್‌ನ ಹೆಬ್ಬಾಗಿಲಿನಲ್ಲಿ ಈಗಲೂ ಅಡಿಗಲ್ಲು ಇದ್ದು ಈ ಸತ್ಯವನ್ನು ಹೇಳಲು ಯಾರಿಗೂ ಧೈರ್ಯ ಇಲ್ಲ ಎಂದು ಅವರು ಹೇಳಿದ್ದಾರೆ.**

ಈ ಹಿಂದೆ ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್ ಹೆಸರಿಡುವುದರಲ್ಲಿ ತಪ್ಪೇನಿಲ್ಲ ಎಂದು ಚೇತನ್ ಅಹಿಂಸಾ ಹೇಳಿದ್ದರು.

## ಬಿಬಿಎಂಪಿಗೆ ಚುನಾವಣೆ: ನ.3ಕ್ಕೆ ವಿಚಾರಣೆ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನವೆಂಬರ್ 3ಕ್ಕೆ ಮುಂದೂಡಿದೆ. ನ್ಯಾ. ಸೂರ್ಯಕಾಂತ್ ನೇತೃತ್ವದ ದ್ವಿಸದಸ್ಯ ಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹ್ಟಗಿ, ಸರ್ಕಾರ ನೆಪಗಳನ್ನೊಡ್ಡಿ ಚುನಾವಣೆಯನ್ನು ಮುಂದೂಡುತ್ತಿದೆ. ಉದ್ದೇಶಪೂರ್ವಕವಾಗಿ ಇದನ್ನು ಮಾಡಲಾಗುತ್ತಿದೆ. ಎಲ್ಲವನ್ನು ಬದಿಗಿರಿಸಿ ಶೀಘ್ರ ಚುನಾವಣೆ ನಡೆಸಲು ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು. ಸರ್ಕಾರ ಪರವಾದ ಮಂಡಿಸಿದ ವಕೀಲರು, ನವೆಂಬರ್ ವೇಳೆಗೆ ಪುನರ್ ವಿಂಗಡನೆ, ಮೀಸಲಾತಿ ಪ್ರಕ್ರಿಯೆ ಮುಗಿಸಲಾಗುವುದು. ಇದಕ್ಕೆ ಸಮಯ ಬೇಕು ಈ ಬಗ್ಗೆ ಈಗಾಗಲೇ ಅಫಿಡವಿಟ್ ಸಲ್ಲಿಸಿದೆ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಪೀಠ, ನವೆಂಬರ್ 1ರ ವೇಳೆ ಸರ್ಕಾರ ಏನು ಮಾಡಲಿದೆ ಎಂದು ವಿಸ್ತೃತ ಮಾಹಿತಿಯನ್ನು ನೀಡಿ ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

## ಎಲ್ಲಾ ಜಿಲ್ಲೆಗಳಿಗೂ ಯೆಲ್ಲೋ ಅಲರ್ಟ್ ಘೋಷಣೆ



• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಒಂದು ವಾರ ಬಿಡುವುಕೊಟ್ಟಿದ್ದ ಮುಂಗಾರು ಮತ್ತೆ ಚುರುಕುಗೊಂಡಿದೆ. ಈ ವಾರ ಪೂರ್ತಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ ಮತ್ತು ಮಲೆನಾಡಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. (ಆ.4) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. (ಜು.5) ಕರಾವಳಿ, ಮಲೆನಾಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್. ಉಳಿದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಜ್ಯದಲ್ಲಿ ಆ.7 ರವರೆಗೆ ಮಳೆಯ ಮುನ್ಸೂಚನೆ ನೀಡಲಾಗಿದೆ. ಬೆಂಗಳೂರಿನಲ್ಲಿ ಮುಂದಿನ ನಾಲ್ಕು ದಿನ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

## ಆಟೋ: ಮೀಟರ್, ಕನಿಷ್ಠ ದರ ಕಡತಕ್ಕೆ ಸೀಮಿತ

### 2 ಕಿ.ಮೀ.ಗೆ ಆಟೋ ಪ್ರಯಾಣ ದರ ಕನಿಷ್ಠ ರೂ.30ರಿಂದ ರೂ. 36ಕ್ಕೆ, ನಂತರದ ಪ್ರತಿ ಕಿ.ಮೀ.ಗೆ ರೂ.15ರಿಂದ ರೂ.18ಕ್ಕೆ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ಆಟೊ ಪ್ರಯಾಣ ದರ ನಿಗದಿ ಕಡತಕ್ಕೆ ಸೀಮಿತವಾಗಿದ್ದು ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುವುದು ಮುಂದುವರಿದಿದೆ ಎಂದು ಹಲವು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪರಿಷ್ಕೃತ ದರವಿರಲಿ, ಹಳೆಯ ದರವಿರಲಿ... ಮೀಟರ್ ಹಾಕಿದರೆ ತಾನೆ ಅನ್ವಯವಾಗುವುದು. ಮೀಟರ್ ಹಾಕುವವರೇ ಕಾಣುತ್ತಿಲ್ಲ. ಆ್ಯಪ್ ಆಧಾರಿತ ಅಗ್ರಿಗೇಟರ್ ಕಂಪನಿಗಳ ಅಡಿಯಲ್ಲಿ ಸಂಚರಿಸುವ ಆಟೊಗಳಲ್ಲಿ ಕನಿಷ್ಠ ದರ ಇಲ್ಲವೇ ಇಲ್ಲ ಎಂದು ತಿಳಿಸಿದ್ದಾರೆ.

ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಮೊದಲ ಎರಡು ಕಿ.ಮೀ.ಗೆ ಆಟೊ ಪ್ರಯಾಣ ದರ ಕನಿಷ್ಠ ರೂ.30ರಿಂದ ರೂ.36ಕ್ಕೆ ಮತ್ತು ನಂತರದ ಪ್ರತಿ ಕಿ.ಮೀ.ಗೆ ರೂ.15ರಿಂದ ರೂ.18ಕ್ಕೆ ಹೆಚ್ಚಳ ಮಾಡಿ ಪರಿಷ್ಕರಿಸಲಾಗಿತ್ತು. ಆದರೆ, ಅನುಷ್ಠಾನ ಮಾಡದೇ ಇರುವುದರಿಂದ ಪ್ರಯಾಣಿಕರಿಗೆ ಯಾವುದೇ ಪ್ರಯೋಜನವಿಲ್ಲ ಎಂದು ಅಭಿಪ್ರಾಯಪಟ್ಟರು. ನಾವು ಕರೆದ ಕಡೆಗೆ ಆಟೊಗಳು ಬರುವುದಿಲ್ಲ. ಬಂದರೂ ಕನಿಷ್ಠ ದರ ತೆಗೆದುಕೊಳ್ಳುವುದಿಲ್ಲ. ಅವರು ಹೇಳಿದಷ್ಟು ನೀಡಬೇಕಾಗುತ್ತದೆ. ಕನಿಷ್ಠ ರೂ.30 ಇರುವಾಗ ರೂ.40 ತೆಗೆದುಕೊಳ್ಳುತ್ತಿದ್ದರು. ಈಗ ರೂ.36 ಆದ ಮೇಲೆ ಇನ್ನೂ ಹೆಚ್ಚು ಕೇಳುತ್ತಿದ್ದಾರೆ ಎಂದು ಬಸವೇಶ್ವರ ನಗರದ ವಿ.ಗಿರಿಜಾ ತಿಳಿಸಿದರು.

''ಓಲಾ, ಉಬರ್‌ನಲ್ಲಿ ಇದಕ್ಕಿಂತಲೂ ಹೆಚ್ಚಿನ ದರ ಇದೆ. ಮಳೆ ಬಂದಾಗ ಬುಕ್ ಮಾಡಲು ಹೊರಟರೆ ವಿಪರೀತ ದರ ತೋರಿಸುತ್ತಾರೆ. ನನ್ನಲ್ಲಿ ಸ್ಕೂಟಿ ಇದೆ. ಮಕ್ಕಳನ್ನು ಅದರಲ್ಲಿಯೇ ಶಾಲೆಗೆ ಬಿಟ್ಟು ಬರುತ್ತೇನೆ. ಎರಡು ದಿನಗಳ ಹಿಂದೆ ಸಂಜೆ ಮಳೆ ಬಂದಿತ್ತು. ಅದಕ್ಕೆ ಸ್ಕೂಟಿ ಬದಲು ಆಟೊ ಬುಕ್ ಮಾಡಲು ಹೊರಟರೆ ಕನಿಷ್ಠ ದರದ ಮೂರು ಪಟ್ಟು ಆ್ಯಪ್‌ನಲ್ಲಿ ತೋರಿಸಿತು' ಎಂದು ಅವರು ಅನುಭವ ತೆರೆದಿಟ್ಟರು. ವಯಸ್ಸಾದ ಚಾಲಕರು ಹೆಚ್ಚು ವಸೂಲಿ ಮಾಡಲು ಹೋಗುವುದಿಲ್ಲ. ಉಳಿದವರದ್ದೇ ಸಮಸ್ಯೆ ಎಂದು ಅವರು ಹೇಳಿದರು.

**ಕೆಲವರಿಂದ ಎಲ್ಲರಿಗೂ ಕೆಟ್ಟ ಹೆಸರು:** ಯುಪಿಐ ಮೂಲಕ ಪಾವತಿಸುವವರು ಕನಿಷ್ಠ ದರ ಎಷ್ಟಿದೆಯೋ ಅಷ್ಟೇ ನೀಡುತ್ತಾರೆ. ನಗದು ಪಾವತಿಸುವಾಗ ರೂ.36 ತೆಗೆದುಕೊಳ್ಳಲು ಚಿಲ್ಲರೆ ಇರುವುದಿಲ್ಲ. ಹಾಗಾಗಿ ಪ್ರಯಾಣಿಕರೇ ರೂ.4 ಅನ್ನು ಬಿಟ್ಟು ಹೋಗುತ್ತಾರೆ' ಎಂದು ಆಟೊ ಚಾಲಕ ಕಾಮಾಕ್ಷಿ ಪಾಳ್ಯದ ದುಷ್ಯಂತ್ ತಿಳಿಸಿದರು.

ಎಲ್ಲಾ ರಂಗದಲ್ಲಿ ಇರುವಂತೆ ಇಲ್ಲಿಯೂ ಶೇ 30ರಷ್ಟು ಚಾಲಕರು ಪ್ರಾಮಾಣಿಕವಾಗಿ ಮೀಟರ್ ಪ್ರಕಾರ ನಿಗದಿತ ದರವನ್ನೇ ಪಡೆಯುತ್ತಿದ್ದಾರೆ. ಇನ್ನು ಶೇ 40ರಷ್ಟು ಚಾಲಕರು ಹೆಚ್ಚು ಸಿಕ್ಕಿದರೆ ಹೆಚ್ಚು ಪಡೆಯುತ್ತಾರೆ. ಚೌಕಾಸಿ ನಡೆಸಿದಾಗ ನಿಗದಿತ ದರಕ್ಕೂ ಬರುತ್ತಾರೆ. ಇನ್ನು ಉಳಿದ ಶೇ 30ರಷ್ಟು ಚಾಲಕರು ಅಧಿಕ ವಸೂಲಿ ಮಾಡುತ್ತಾರೆ' ಎಂದು ಅವರು ವಿವರಿಸಿದರು. 'ಓಲಾದಲ್ಲಿ ಕನಿಷ್ಠ ದರ ರೂ. 45 ಉಬರ್‌ನಲ್ಲಿ ಕನಿಷ್ಠ ದರ ರೂ. 53 ಇದೆ. ಎಲ್ಲೋ ಇರುವವರು ಪಿಕ್‌ಅಪ್ ಪಾಯಿಂಟ್‌ಗೆ ಬಂದು ಕರೆದುಕೊಂಡು ಹೋಗಬೇಕಾಗುತ್ತದೆ. ಸ್ವಲ್ಪ ಹೆಚ್ಚುಕಡಿಮೆ ಇದು ಸರ್ಕಾರ ನಿಗದಿಪಡಿಸಿದ ದರದಷ್ಟೇ ಇದೆ' ಎಂದು ಅವರು ಮಾಹಿತಿ ನೀಡಿದರು.



**'ನಾವು ನಗರದ ಹೊರವಲಯದಲ್ಲಿ ಇರುವುದು. ಇಲ್ಲಿ ದರ ಪರಿಷ್ಕರಣೆಗೂ ಆಟೊ ದರಕ್ಕೂ ಸಂಬಂಧವೇ ಇಲ್ಲ. ಮೀಟರ್ ಹಾಕುವುದೇ ಇಲ್ಲ. ರೂ.50, ರೂ.100, ರೂ.150 ಎಂದು ದರ ಹೇಳುತ್ತಾರೆ. ಓಲಾ, ಉಬರ್ ಬುಕ್ ಮಾಡಲು ಹೋದರೆ ಅಲ್ಲಿಯೂ ಬುಕ್ ಆಗುವುದಿಲ್ಲ. ಅದರಲ್ಲಿ ಟಿಪ್ಸ್ ಎಂಬ ಆಯ್ಕೆಯೊಂದು ಇದೆ. ಟಿಪ್ಸ್ ನೀಡಲು ಒಪ್ಪಿದರಷ್ಟೇ ಬುಕ್ ಆಗುತ್ತದೆ' ಎಂದು ಹೆಸರುಘಟ್ಟದ ಎಂ.ಆರ್. ರೂಪಾ ತಿಳಿಸಿದರು.**

### ಅಧಿಕ ವಸೂಲಿ ಮಾಡಿದರೆ ಕ್ರಮ

**ನಿಗದಿತ ದರಕ್ಕಿಂತ ಅಧಿಕ ದರ ವಸೂಲಿ ಮಾಡಬಾರದು. ಅಗ್ರಿಗೇಟರ್‌ಗಳು ಸರ್ಕಾರ ನಿಗದಿಪಡಿಸಿದ ಕನಿಷ್ಠ ದರಕ್ಕಿಂತ ಶೇ 10ರಷ್ಟು ಅಧಿಕ ಶುಲ್ಕ ವಿಧಿಸಲು ಅವಕಾಶವಿದೆ. ಅದಕ್ಕಿಂತ ಹೆಚ್ಚು ವಸೂಲಿ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.**

**ಆಟೊ ಚಾಲಕರಲ್ಲಿ ಪ್ರಯಾಣಿಕರಿಂದ ಅಧಿಕ ವಸೂಲಿ ಮಾಡುವವರೂ, ಮಾನವೀಯತೆಯಿಂದ ನಡೆದುಕೊಳ್ಳುವವರೂ ಇರುತ್ತಾರೆ. ನಮ್ಮ ಮನೆಯ ಪಕ್ಕದ ಆಟೊದವರು ಕನಿಷ್ಠ ದರಕ್ಕೆ ಕರೆದುಕೊಂಡು ಹೋಗುತ್ತಾರೆ. ಇತ್ತೀಚೆಗೆ ಮೆಜೆಸ್ಟಿಕ್‌ನಿಂದ ಚಿಕ್ಕಪೇಟೆಗೆ ಹೋಗಬೇಕಿತ್ತು. ಕಾಲ್ನಡಿಗೆಯಲ್ಲಿಯೇ ಸಾಗಬಹುದಾಗಿದ್ದ ಚಿಕ್ಕಪೇಟೆಗೆ ಹೋಗಲು ಆಟೊದವರನ್ನು ಕರೆದರೆ ರೂ.150 ಹೇಳಿದರು. ಎಷ್ಟೇ ಚೌಕಾಸಿ ನಡೆಸಿದರೂ ರೂ.100ಕ್ಕಿಂತ ಕಡಿಮೆಗೆ ಬರಲಿಲ್ಲ. ಇಂಥವರಿಂದಲೇ ಪ್ರಾಮಾಣಿಕ ಆಟೊ ಚಾಲಕರಿಗೂ ಕೆಟ್ಟ ಹೆಸರು' ಎಂದು ಕುರುಬರಹಳ್ಳಿಯ ಬಿ.ಜಿ. ರಾಧಾ ತಿಳಿಸಿದರು.**

# ಪಾದಚಾರಿ ಮಾರ್ಗದಲ್ಲೇ ಬಸ್ ನಿಲುಗಡೆ

## ಬಾಗೇಪಲ್ಲಿಯ ಡಿವಿಜಿ ಮುಖ್ಯ ರಸ್ತೆಯಲ್ಲಿ ಖಾಸಗಿ ಬಸ್‌ಗಳ ನಿಲುಗಡೆಯಿಂದ ಸಂಚಾರ ದಟ್ಟಣೆ

• **ಉದಯವಾಹಿನಿ ಬಾಗೇಪಲ್ಲಿ**

ತಾಲ್ಲೂಕು ಕೇಂದ್ರದಲ್ಲಿ ಖಾಸಗಿ ಬಸ್‌ಗಳಿಗೆ ಪ್ರತ್ಯೇಕ ನಿಲ್ದಾಣವೇ ಇಲ್ಲ. ಇದರಿಂದಾಗಿ ಪಟ್ಟಣದ ಡಿವಿಜಿ ಮುಖ್ಯರಸ್ತೆ, ಸಾರಿಗೆ ಬಸ್ ನಿಲ್ದಾಣದ ಮುಂಭಾಗದ ಪಾದಚಾರಿ ಮಾರ್ಗದಲ್ಲೇ ಖಾಸಗಿ ಬಸ್‌ಗಳನ್ನು ನಿಲ್ಲಿಸಲಾಗುತ್ತಿದೆ.

ಇದರಿಂದ ಜನಸಾಮಾನ್ಯರ ಓಡಾಟಕ್ಕೆ ತುಂಬಾ ತೊಂದರೆಯಾಗಿದೆ. ತಾಲ್ಲೂಕು ಕೇಂದ್ರದಲ್ಲಿ ಖಾಸಗಿ ಬಸ್ ನಿಲ್ದಾಣ, ಆಟೊ, ಕಾರು, ಟ್ಯಾಕ್ಸಿಗಳ ನಿಲ್ದಾಣ, ಮಾರುಕಟ್ಟೆ, ಶೌಚಾಲಯ, ನೀರು, ಆಸ್ಪತ್ರೆ, ಶಾಲೆ, ಉದ್ಯಾನವನ, ಅಂಗನವಾಡಿ ಕಟ್ಟಡಗಳಿಗೆ ನಿವೇಶನ ಕಲ್ಪಿಸುವುದು ಪುರಸಭೆ ಜವಾಬ್ದಾರಿ. ಆದರೆ, ತಾಲ್ಲೂಕು ಕೇಂದ್ರದಲ್ಲಿ ಖಾಸಗಿ ಬಸ್‌ಗಳ ನಿರ್ಮಾಣಕ್ಕೆ ನಿವೇಶನ ಗುರುತಿಸಿಲ್ಲ.

ಬಾಗೇಪಲ್ಲಿ ಪಟ್ಟಣ ಪಂಚಾಯಿತಿ ಆಗಿದ್ದಾಗ ಸಿವಿಲ್ ನ್ಯಾಯಾಲಯದ ಮುಂದೆ ಖಾಸಗಿ ಬಸ್ ನಿಲ್ದಾಣ ಮಾಡುವ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚೆಯಾಗಿತ್ತು. ಆದರೆ, ಬಸ್ ನಿಲ್ದಾಣದಿಂದ ನ್ಯಾಯಾಲಯದ ಕಲಾಪಗಳಿಗೆ ತೊಂದರೆ ಆಗಲಿದೆ ಎಂಬ ಕಾರಣಕ್ಕೆ ಖಾಸಗಿ ಬಸ್ ನಿಲ್ದಾಣ ಮಾಡಲಿಲ್ಲ. ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಅವರು ಪಟ್ಟಣದ ಕೊರ್ಲಕುಂಟೆ ಬಳಿ ಇರುವ ಪುರಸಭೆ ಜಾಗದಲ್ಲಿ ಖಾಸಗಿ ಬಸ್ ನಿಲ್ದಾಣ ಮಾಡಲು ಮುಂದಾಗಿದ್ದರು. ಆದರೆ, ಅವರು ಚುನಾವಣೆಯಲ್ಲಿ ಸೋಲು ಕಂಡ ಕಾರಣ, ಖಾಸಗಿ ಬಸ್ ನಿಲ್ದಾಣ ವಿಚಾರವು ನನೆಗುದಿಗೆ



ಬಿದ್ದಿದೆ. ಪಟ್ಟಣಕ್ಕೆ ಆಂಧ್ರಪ್ರದೇಶದ ಕದಿರಿ, ಅನಂತಪುರ ಸೇರಿದಂತೆ ತಾಲ್ಲೂಕಿನ ಚೇಳೂರು, ಬಿಳ್ಳೂರು, ಚಾಕವೇಲು, ಗೂಳೂರು, ಚಿಂತಾಮಣಿ, ಕೋಲಾರ ಕಡೆಗಳಿಂದ 48ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಸಂಚರಿಸುತ್ತವೆ. ಆದರೆ, ಸೂಕ್ತ ಬಸ್ ನಿಲ್ದಾಣವೇ ಇಲ್ಲದಿರುವುದು ಪ್ರಯಾಣಿಕರು ಮತ್ತು ಪಾದಚಾರಿಗಳ ನಿದ್ದೆಗೆಡಿಸಿದೆ.

ಬಸ್ ನಿಲ್ದಾಣ ಇಲ್ಲದಿರುವುದರಿಂದ ಪ್ರಯಾಣಿಕರು ಅಂಗಡಿಗಳ ಮುಂದೆಯೇ ಬಸ್‌ಗಳಿಗಾಗಿ ಗಂಟೆಗಟ್ಟಲೇ ಕಾಯಬೇಕಿದೆ. ಕೂರಲು, ನಿಲ್ಲಲು ಜಾಗ ಇಲ್ಲ. ಇದೇ ಜಾಗದಲ್ಲಿ ಬೀದಿಬದಿ ವ್ಯಾಪಾರಸ್ಥರು ತಳ್ಳುವ ಬಂಡಿಗಳನ್ನು ಇಟ್ಟಿದ್ದಾರೆ. ದ್ವಿಚಕ್ರ ವಾಹನಗಳು ಸೇರಿದಂತೆ ಕಾರುಗಳು, ಆಟೊಗಳು ನಿಂತಿರುತ್ತವೆ. ಅಂಗಡಿಗಳ ಮುಂದೆ ನಿಲ್ಲಲು ಸ್ಥಳಾವಕಾಶವೇ ಇರುವುದಿಲ್ಲ. ಅಂಗಡಿಗಳ ಮುಂದೆ ನಿಲ್ಲಬೇಡಿ ಎಂದು ಮಾಲೀಕರು ಗದರುತ್ತಾರೆ. ಇದರಿಂದ ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು ಪ್ರಯಾಸ ಪಡುವಂತಾಗಿದೆ.

> ತಾಲ್ಲೂಕು ಕೇಂದ್ರಗಳಲ್ಲಿ ಖಾಸಗಿ ಬಸ್‌ಗಳಿಗೆ ಸ್ಥಳೀಯ ಆಡಳಿತವು ಪ್ರತ್ಯೇಕ ನಿಲ್ದಾಣ ಮಾಡಿದೆ. ಆದರೆ ಪಟ್ಟಣದ ಪುರಸಭೆಯು ತಾಲ್ಲೂಕು ಕೇಂದ್ರದಲ್ಲಿ ಖಾಸಗಿ ಬಸ್‌ಗಳ ನಿಲ್ದಾಣ ಮಾಡಿಲ್ಲ. ಈ ಬಗ್ಗೆ ಪುರಸಭೆ ಆಡಳಿತದ ಅಧಿಕಾರಿಗಳು, ಆಡಳಿತ ಮಂಡಳಿ, ಶಾಸಕರು ಗಮನ ಹರಿಸಬೇಕು ಎಂದು ಖಾಸಗಿ ಬಸ್ ಮಾಲೀಕ ನಿಜಾಮುದ್ದೀನ್ ಮನವಿ ಮಾಡಿದ್ದಾರೆ. ಪಟ್ಟಣದಲ್ಲಿ ಖಾಸಗಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಜಾಗ ಮಂಜೂರು ಮಾಡುವಂತೆ ಖಾಸಗಿ ಬಸ್‌ಗಳ ಮಾಲೀಕರು ಜನರಿಂದ ಮನವಿ ಬಂದರೆ, ಈ ಬಗ್ಗೆ ಆಡಳಿತ ಸಭೆಯಲ್ಲಿ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ಎಂ. ಶ್ರೀನಿವಾಸ್ ತಿಳಿಸಿದ್ದಾರೆ.

ಖಾಸಗಿ ಬಸ್‌ಗಳು ಪಾದಚಾರಿ ಮಾರ್ಗದಲ್ಲಿ ನಿಲ್ಲುವುದರಿಂದ ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗಿದೆ. ಪಾದಚಾರಿಗಳು ರಸ್ತೆ ಮಧ್ಯೆ ನಡೆದು ಹೋಗುವ ಅನಿವಾರ್ಯತೆ ಎದುರಾಗಿದ್ದು, ವೇಗವಾಗಿ ಬರುವ ವಾಹನಗಳು ಡಿಕ್ಕಿ ಹೊಡೆಯುವ ಆತಂಕವಿದೆ ಎನ್ನುತ್ತಾರೆ ಕೆಲವು ಪಾದಚಾರಿಗಳು. ಪಟ್ಟಣದ ಸಿವಿಲ್ ನ್ಯಾಯಾಲಯದಿಂದ, ನ್ಯಾಷನಲ್ ಕಾಲೇಜಿನವರಿಗೆ ಪಟ್ಟಣದ ಪುರಸಭೆಯ ವ್ಯಾಪ್ತಿಯಲ್ಲಿ, ಖಾಸಗಿ ಬಸ್ ನಿಲ್ದಾಣ ಮಾಡಲು ಸೂಕ್ತವಾದ ಜಾಗ ಇಲ್ಲ. ಪುರಸಭೆಯಿಂದ ಡಿಸಿಸಿ ಬ್ಯಾಂಕಿನ ಪಕ್ಕದಲ್ಲಿ

> **ಡಿವಿಜಿ ಮುಖ್ಯರಸ್ತೆಯ ಪಾದಚಾರಿ ರಸ್ತೆಯಲ್ಲಿ ಖಾಸಗಿ ಬಸ್‌ಗಳು ನಿಲ್ಲುತ್ತವೆ. ಪಾದಚಾರಿಗಳ ಸಂಚಾರಕ್ಕೆ ತೊಂದರೆ ಆಗಿದೆ. ಮಹಿಳೆಯರು ಮಕ್ಕಳು ವೃದ್ಧರು ನಡು ರಸ್ತೆಯಲ್ಲಿ ಪ್ರಾಣ ಭಯದಲ್ಲಿ ಸಂಚರಿಸುವಂತಾಗಿದೆ.**
> **ಮಂಜುಳಮ್ಮ ಮಹಿಳೆ**

> **ಡಿವಿಜಿ ಮುಖ್ಯರಸ್ತೆಯ ಖಾಸಗಿ ಬಸ್‌ಗಳು ನಿಲ್ಲುವ ಜಾಗದಲ್ಲಿ ತಂಗುದಾಣ ಮಾಡಿಲ್ಲ. ಶೌಚಾಲಯಗಳು ಇಲ್ಲ. ಬಸ್ ಬರುವವರೆಗೆ ಕುಳಿತುಕೊಳ್ಳಲು ಜಾಗವೇ ಇಲ್ಲ. ರಸ್ತೆಯಲ್ಲೇ ಗಂಟೆಗಟ್ಟಲೇ ನಿಂತು ಬಸ್‌ಗಾಗಿ ಕಾಯಬೇಕಾಗಿದೆ.**
> **ವಾಣಿ ಕಾಲೇಜು ವಿದ್ಯಾರ್ಥಿನಿ**

ಅವೈಜ್ಞಾನಿಕವಾಗಿ, ಗಾಳಿ ಬೆಳಕು ಇಲ್ಲದೇ ನಿರ್ಮಿಸಿದ ಮಳಿಗೆಗಳು ಹೂವು, ಹಣ್ಣು ವ್ಯಾಪಾರಸ್ಥರಿಗೆ ಬಳಕೆ ಆಗಿಲ್ಲ. ಸಂತೇಮೈದಾನದಲ್ಲಿ ಸಾಕಷ್ಟು ಪುರಸಭೆ ಜಾಗ ಇದೆ. ಆದರೆ ಪಟ್ಟಣದ ಹೊರಗೆ ಇದೆ. ಪ್ರಯಾಣಿಕರು ಹೋಗಿ ಬರಲು ತೊಂದರೆ ಇದೆ. ಇದರಿಂದ ಪಟ್ಟಣದ ಮುಖ್ಯರಸ್ತೆಯ ಇಕ್ಕೆಲಗಳಲ್ಲಿನ ಪುರಸಭೆಯ ಜಾಗದಲ್ಲಿ ಖಾಸಗಿ ಬಸ್‌ಗಳ ನಿಲ್ದಾಣ ಮಾಡಿ, ಅನುಕೂಲ ಮಾಡಬೇಕು ಎಂದು ಪ್ರಯಾಣಿಕರು ಮನವಿ ಮಾಡಿದ್ದಾರೆ.

## ಚಿಂತಾಮಣಿ: ಸ್ಮಶಾನಕ್ಕೆ ನಡೆಸುತ್ತಿದ್ದ ಹೋರಾಟ ಅಂತ್ಯ

• **ಉದಯವಾಹಿನಿ ಚಿಂತಾಮಣಿ**

ತಾಲ್ಲೂಕಿನ ಅಂಬಾಜಿದುರ್ಗ ಹೋಬಳಿಯ ಮಿಟ್ಟಹಳ್ಳಿ ಗ್ರಾಮ ಪಂಚಾಯಿತಿಯ ರಂಗೇನಹಳ್ಳಿ ಗ್ರಾಮದಲ್ಲಿ ಪುರಾತನ ಕಾಲದಿಂದ ಇದ್ದ ಸ್ಮಶಾನವನ್ನು ಒತ್ತುವರಿ ಮಾಡಿ ಅಂತ್ಯಕ್ರಿಯೆ ನಡೆಸಲು ಅವಕಾಶ ನೀಡದಿರುವುದನ್ನು ಖಂಡಿಸಿ ರಸ್ತೆಯಲ್ಲಿ ಶವವಿಟ್ಟು ನಡೆಸುತ್ತಿದ್ದ ಪ್ರತಿಭಟನೆ ಅಂತ್ಯಗೊಂಡಿದೆ.

ಗ್ರಾಮದ ಸರ್ವೆ ನಂ 8ರಲ್ಲಿ ಸ್ಮಶಾನವಿದೆ. ಇತ್ತೀಚೆಗೆ ಕೆಲವು ವ್ಯಕ್ತಿಗಳು ಸ್ಮಶಾನ ಒತ್ತುವರಿ ಮಾಡಿಕೊಂಡಿದ್ದಾರೆ. ಗ್ರಾಮಸ್ಥರು ಮೃತಪಟ್ಟಾಗ ಅಲ್ಲಿ ಅಂತ್ಯಕ್ರಿಯೆ ನಡೆಸಲು ಅವಕಾಶ ನೀಡುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಗ್ರಾಮದಲ್ಲಿ ಕೊಂಡಪ್ಪ (60) ಎಂಬುವರು ಮೃತಪಟ್ಟಿದ್ದು ಅವರ ಅಂತ್ಯಕ್ರಿಯೆ ನಡೆಸಲು ಜಮೀನಿನಲ್ಲಿ ಗುಣಿ ತೋಡಲು ಹೋದಾಗ ಅಡ್ಡಿಪಡಿಸಿದರು. ಎರಡು ಗುಂಪಿನವರಿಗೂ ವಾಗ್ವಾದ ನಡೆದಿತ್ತು. ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಭೂ ಮಾಪನ ಇಲಾಖೆ



ಅಧಿಕಾರಿಗಳು ಪೊಲೀಸರ ಬಂದೋಬಸ್ತ್‌ನಲ್ಲಿ ಸ್ಥಳಕ್ಕೆ ಬಂದು ಸ್ಮಶಾನ ಜಾಗ ಗುರುತಿಸಿ ಕೊಡಲು ಸರ್ವೆ ಕಾರ್ಯ ನಡೆಸಿದರು. ತಹಶೀಲ್ದಾರ್, ಡಿವೈಎಸ್‌ಪಿ ಸ್ಥಳಕ್ಕೆ ಭೇಟಿ ನೀಡಿ ಸರ್ವೇ ಪ್ರಕಾರ ಸರ್ವೆ ನಂ 8 ಹಿಡುವಳಿ ಜಮೀನಾಗಿದೆ. ಅದರ ಪಕ್ಕದಲ್ಲಿರುವ ಸರ್ಕಾರಿ ಜಮೀನಿನಲ್ಲಿ 10 ಗುಂಟೆ ಜಾಗವನ್ನು ಸ್ಮಶಾನಕ್ಕಾಗಿ ಮಂಜೂರು ಮಾಡಿ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ. ಅಲ್ಲಿ ಅಂತ್ಯಕ್ರಿಯೆ ಎಂದು ಸಮಾಧಾನಪಡಿಸಿದರು. ಪ್ರತಿಭಟನಾಕಾರರು ಅಸಮ್ಮತಿ ಸೂಚಿಸಿದರು. ಕೊನೆಗೆ ಮೃತರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಿದರು. ಮೃತರ ಕುಟುಂಬಸ್ಥ ಚಲಪತಿ, ಹರೀಶ್ ಮಾತನಾಡಿ, ಅಧಿಕಾರಿಗಳು ಸೂಕ್ತ ರೀತಿಯಲ್ಲಿ ನ್ಯಾಯ ಕೊಡಿಸದೆ ಇರುವ ಹಿನ್ನೆಲೆಯಲ್ಲಿ ಸ್ಮಶಾನಕ್ಕಾಗಿ ನಮ್ಮ ಹೋರಾಟ ನಿಲ್ಲುವುದಿಲ್ಲ. ಹೋರಾಟವನ್ನು ಕಾನೂನು ಬದ್ಧವಾಗಿ ಮುಂದುವರಿಸುತ್ತೇವೆ ಎಂದು ಹೇಳಿದರು.

## ಹಿಪ್ಪುನೇರಳೆ: ರೋಗ ನಿಯಂತ್ರಣ ಪ್ರಾತ್ಯಕ್ಷಿಕೆ

• **ಉದಯವಾಹಿನಿ ರಾಮನಗರ**

ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಹಿಪ್ಪುನೇರಳೆ ಬೆಳೆಯಲ್ಲಿ ಕಾಣಿಸಿಕೊಂಡಿರುವ ನುಸಿರೋಗ ಮತ್ತು ಎಲೆಸುರುಳಿ ರೋಗ ನಿಯಂತ್ರಣ ಕುರಿತ ಜಾಗೃತಿ ಕಾರ್ಯಕ್ರಮ ತಾಲ್ಲೂಕಿನ ತಿಮ್ಮೇಗೌಡನದೊಡ್ಡಿ ಗ್ರಾಮದ ರೈತರ ತೋಟದಲ್ಲಿ ರೇಷ್ಮೆ ಇಲಾಖೆ ವತಿಯಿಂದ ಜರುಗಿತು. ಲಕ್ಷ್ಮೀಪುರದ ತಾಂತ್ರಿಕ ಸೇವಾ ಕೇಂದ್ರದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಇಲಾಖೆಯ ಉಪ ನಿರ್ದೇಶಕ ಚಂದ್ರಪ್ಪ, ಸಹಾಯ ನಿರ್ದೇಶಕರಾದ ಎಂ.ಪಿ. ಉಮೇಶ್, ವಿಜ್ಞಾನಿಗಳಾದ ಡಾ. ಮಧುಸೂದನ್, ಲಕ್ಷ್ಮೀಪುರ ತಾಂತ್ರಿಕ ಸೇವಾ ಕೇಂದ್ರದ ವಿಸ್ತರಣಾಧಿಕಾರಿ ಗೋಪಾಲ್ ಭಾಗವಹಿಸಿದ್ದರು.

ಅಧಿಕಾರಿಗಳು ರೋಗ ನಿಯಂತ್ರಣ ಔಷಧವನ್ನು ಸಿಂಪಡಿಸುವ ಮೂಲಕ ಪ್ರಾತ್ಯಕ್ಷಿಕೆ ನೀಡಿದರು.

ನುಸಿರೋಗ ಮತ್ತು ಎಲೆಸುರುಳಿ ರೋಗ ನಿಯಂತ್ರಣಕ್ಕೆ ವೆಟಬಲ್ ಸಲ್ಫರ್ ಅನ್ನು ಒಂದು ಲೀಟರ್‌ಗೆ 3 ಗ್ರಾಂ, ಬೇವಿನ ಎಣ್ಣೆ ಒಂದು ಲೀಟರ್ ನೀರಿಗೆ 5 ಎಂಎಲ್, ನೀಮ್ ಪೌಂಡರ್ ಹಾಗೂ ಇಂಟಡ್ಡರ್ ಅದನ್ನು ಸಕಾಲದಲ್ಲಿ ಸೂಕ್ತ ಪ್ರಮಾಣದಲ್ಲಿ ಬಳಸಬೇಕು. ಇದರಿಂದ ರೋಗ ಹತೋಟಿಗೆ ಬಂದು ಉತ್ತಮ ಇಳವರಿ ದೊರೆಯಲಿದೆ



> **ರೋಗ ನಿಯಂತ್ರಣಕ್ಕಾಗಿ ರೈತರು ಔಷಧ ಖರೀದಿಗೂ ಮುನ್ನ ಇಲಾಖೆ ಅಧಿಕಾರಿಗಳ ಸಲಹೆ ಪಡೆಯಬೇಕು. ಮಾರುಕಟ್ಟೆಯಲ್ಲಿ ಸಿಗುವ ಔಷಧವನ್ನು ತಂದು ಅದರ ಬಾಧಕಗಳನ್ನು ಅರಿಯದೆ ಸಿಂಪಡಿಸಿದರೆ ಸಮಸ್ಯೆಯಾಗಲಿದೆ. ಇದರಿಂದ ಬೆಳೆ ಜೊತೆಗೆ ರೈತರ ಆರೋಗ್ಯದ ಮೇಲೂ ಪರಿಣಾಮ ಬೀರಲಿದೆ. ಹಾಗಾಗಿ, ಔಷಧಿ ಸಿಂಪರಣೆ ಕುರಿತು ಇಲಾಖೆ ಮಾರ್ಗಸೂಚಿಯನ್ನು ಪಾಲಿಸಬೇಕು ಎಂದು ಹೇಳಿದರು.**

ಎಂದು ಅಧಿಕಾರಿಗಳು ಸಲಹೆ ನೀಡಿದರು.

## ಆಯುರ್ವೇದ ಆಸ್ಪತ್ರೆಗೆ ಬೇಕಿದೆ ಚಿಕಿತ್ಸೆ!

• **ಉದಯವಾಹಿನಿ ತುಮಕೂರು**

ಆಯುಷ್ ಇಲಾಖೆಯು ವೈದ್ಯರು, ಸಿಬ್ಬಂದಿ, ಅಗತ್ಯ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿದ್ದು, ಅರ್ಧಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ರೋಗಿಗಳಿಗೆ ಚಿಕಿತ್ಸೆ ನೀಡಬೇಕಾದ ಆಯುರ್ವೇದ ಆಸ್ಪತ್ರೆಗಳಿಗೆ ಚಿಕಿತ್ಸೆ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಜಿಲ್ಲೆಯಲ್ಲಿ 4 ಆಯುರ್ವೇದ ಆಸ್ಪತ್ರೆ, 24 ಆಯುರ್ವೇದ ಚಿಕಿತ್ಸಾಲಯಗಳಿವೆ. ಒಟ್ಟು 113 ಹುದ್ದೆಗಳು ಮಂಜೂರಾಗಿದ್ದು, 75 ಹುದ್ದೆ ಭರ್ತಿಯಾಗಿಲ್ಲ. ಹಲವು ವರ್ಷಗಳಿಂದ ಈ ಸಮಸ್ಯೆ ಕಾಡುತ್ತಿದ್ದು, ತಜ್ಞ ವೈದ್ಯರ ಕೊರತೆ ಮಧ್ಯೆ ಇಲಾಖೆ ಕಾರ್ಯಗಳು ನಡೆಯುತ್ತಿವೆ. 36 ವೈದ್ಯರ ಪೈಕಿ 22 ಮಂದಿ ಕೆಲಸ ಮಾಡುತ್ತಿದ್ದಾರೆ. 14 ಕಡೆಗಳಲ್ಲಿ ಚಿಕಿತ್ಸೆ ನೀಡಲು ವೈದ್ಯರೇ ಇಲ್ಲ. ಒಬ್ಬರು ಎರಡು ಆಸ್ಪತ್ರೆ, ಚಿಕಿತ್ಸಾಲಯ ನಿರ್ವಹಣೆಯ ಹೊರೆ ಹೊರಬೇಕಿದೆ.

ತುಮಕೂರು, ಮಧುಗಿರಿ, ತಿಪಟೂರು, ಚಿಕ್ಕನಾಯಕನಹಳ್ಳಿಯಲ್ಲಿ ಆಯುರ್ವೇದ ಆಸ್ಪತ್ರೆಗಳಿವೆ. ಯಾವುದೇ ಆಸ್ಪತ್ರೆಯಲ್ಲಿ 24X7 ಚಿಕಿತ್ಸೆ ನೀಡಲು ಆಗುತ್ತಿಲ್ಲ. ದಿನ ಪೂರ್ತಿ ಕೆಲಸ ಮಾಡಲು ಬೇಕಾದ ಸಿಬ್ಬಂದಿ ನೇಮಕವಾಗಿಲ್ಲ. ಹೀಗಾಗಿ ಸಂಜೆ 4.30 ಗಂಟೆಗೆ ಆಸ್ಪತ್ರೆಯ ಬಾಗಿಲು ಮುಚ್ಚುತ್ತಿದ್ದಾರೆ. ಸಂಜೆಯ ನಂತರ ಚಿಕಿತ್ಸೆ ಅಗತ್ಯ ಇರುವವರು ಖಾಸಗಿ ಆಸ್ಪತ್ರೆ ಅಥವಾ ಮರು ದಿನದವರೆಗೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ಆಯುರ್ವೇದ ಆಸ್ಪತ್ರೆಗೆ ಪ್ರತ್ಯೇಕ ಕಟ್ಟಡವಿಲ್ಲ. ಕಟ್ಟಡ ನಿರ್ಮಿಸಿ, ರೋಗಿಗಳ ಆರೈಕೆಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂಬ ಹಲವು ವರ್ಷಗಳ ಬೇಡಿಕೆಗೆ ಈವರೆಗೆ ಸರಿಯಾದ ಸ್ಪಂದನೆ ಸಿಕ್ಕಿಲ್ಲ. ಕನಿಷ್ಠ ಜಾಗ ಗುರುತಿಸುವ ಕಾರ್ಯವೂ ನಡೆದಿಲ್ಲ. ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡಿ ಸಂಜೆಯ ನಂತರ ವಾಪಸ್ ಕಳುಹಿಸುತ್ತಾರೆ. ಇಲ್ಲಿಯೇ ದಾಖಲಿಸಿಕೊಂಡು ಚಿಕಿತ್ಸೆ ಮುಂದುವರಿಸಲು ಬೇಕಾದ ವ್ಯವಸ್ಥೆಯೇ ಇಲ್ಲ. ಮಧುಗಿರಿಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಈ ಹಿಂದೆ ವೈದ್ಯರೇ ಇರಲಿಲ್ಲ. ಈಗ ಒಬ್ಬರನ್ನು ನಿಯೋಜಿಸಲಾಗಿದೆ.

ಜಿಲ್ಲಾ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಲ್ಲಿ ರೋಗ ವಾಸಿಯಾಗದಿದ್ದರೆ ಕೊನೆಯ ಪ್ರಯತ್ನ ಎಂಬಂತೆ ರೋಗಿಗಳು ಆಯುರ್ವೇದ ಆಸ್ಪತ್ರೆ ಮೊರೆ ಹೋಗುತ್ತಾರೆ. ಇಲ್ಲಿನ ವೈದ್ಯರು ರೋಗ ಪತ್ತೆ ಹಚ್ಚಿ, ಸುಧಾರಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸುತ್ತಾರೆ. ಆಸ್ಪತ್ರೆಗೆ ಹೋದರೆ ಕಾಯಿಲೆ ನಿಯಂತ್ರಣಕ್ಕೆ



### ಚಿಕಿತ್ಸಾಲಯ ನಾಮಕಾವಸ್ತೆ

**24 ಆಯುರ್ವೇದ ಚಿಕಿತ್ಸಾಲಯ ಪೈಕಿ 14ರಲ್ಲಿ ವೈದ್ಯರಿಲ್ಲ. 5 ಕಡೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ತಿಪಟೂರಿನ ಮೂರು ಚಿಕಿತ್ಸಾಲಯಗಳಲ್ಲಿ ಕಾಯಂ ವೈದ್ಯರ ನೇಮಕವಾಗಿಲ್ಲ. ಚಿಕಿತ್ಸಾಲಯ ನಾಮಕಾವಸ್ತೆ ಎಂಬಂತೆ ನಡೆಯುತ್ತಿವೆ. ಜನರಿಗೆ ಚಿಕಿತ್ಸೆ ನೀಡುವುದು ಆಯುರ್ವೇದ ಚಿಕಿತ್ಸೆ ಬಗ್ಗೆ ಅರಿವು ಮೂಡಿಸುವುದು ರೋಗ ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ತಿಳಿಸುವುದು ಮನೆ ಮದ್ದಿನ ಬಗ್ಗೆ ಸೂಚಿಸುವುದು ಚಿಕಿತ್ಸಾಲಯದ ಪ್ರಮುಖ ಕಾರ್ಯ, ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಆಯುರ್ವೇದ ಚಿಕಿತ್ಸೆ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಆದರೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ನಿರೀಕ್ಷೆಗೆ ತಕ್ಕಂತೆ ಕೆಲಸ ನಡೆಯುತ್ತಿಲ್ಲ. 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳುತ್ತಿದ್ದಾರೆ. ಬಹುತೇಕ ಆಸ್ಪತ್ರೆಗಳಲ್ಲಿ ಜನರಿಗೆ ಅಗತ್ಯ ಚಿಕಿತ್ಸೆಯೇ ಸಿಗುತ್ತಿಲ್ಲ. ಮೊದಲು ವೈದ್ಯರು ಸಿಬ್ಬಂದಿ ನಿಯೋಜಿಸಲಿ' ಎಂದು ಬೆಳ್ಳಾವಿಯ ಶಂಕರಮೂರ್ತಿ ಒತ್ತಾಯಿಸಿದರು.**

ಬರುತ್ತದೆ ಎಂಬ ನಂಬಿಕೆ ಜನರಲ್ಲಿದೆ.

ಇದೇ ಕಾರಣಕ್ಕೆ ಆಯುರ್ವೇದ ಆಸ್ಪತ್ರೆ ಹುಡುಕಿಕೊಂಡು ಹೋಗುವವರ ಸಂಖ್ಯೆಯೂ ಹೆಚ್ಚಿದೆ. ಆದರೆ, ಅವರಿಗೆ ಮಾರ್ಗದರ್ಶನ ನೀಡುವ ವೈದ್ಯರೇ ಸಿಗುತ್ತಿಲ್ಲ. ಪ್ರತಿ ತಾಲ್ಲೂಕಿನಲ್ಲಿ ಒಂದು ಆಯುರ್ವೇದ ಆಸ್ಪತ್ರೆ ಆರಂಭಿಸಬೇಕು ಎಂಬುದು ಜಿಲ್ಲೆಯ ಜನರ ಒತ್ತಾಯ. ಜನಪ್ರತಿನಿಧಿ, ಅಧಿಕಾರಿ ವರ್ಗ ಇತ್ತ ಗಮನ ಹರಿಸಿಲ್ಲ ಎಂದು ಜನರು ಆರೋಪಿಸುತ್ತಿದ್ದಾರೆ.

## 8 ಮನೆಗೆ ಕನ್ನ: ಆರೋಪಿ ಬಂಧನ

• **ಉದಯವಾಹಿನಿ, ಕೋಲಾರ**

2018ರಲ್ಲಿ ಕೊಲಾರ ನಗರದ 8 ಮನೆಗಳಲ್ಲಿ ನಡೆದ ಕನ್ನ ಹಾಗೂ ಕಳವು ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಯನ್ನು ಕೋಲಾರ ನಗರ ಪೊಲೀಸರು ಬಂಧಿಸಿದ್ದಾರೆ.ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಮದುಗೆರೆ ಗ್ರಾಮದ ಸಂತೋಷ್ ಅಲಿಯಾಸ್ ಐಪಿಎಲ್ ಸಂತೋಷ್ (38) ಬಂಧಿತ ಆರೋಪಿ. ಈತನ ವಿರುದ್ಧ ಒಟ್ಟು ಎಂಟು ಪ್ರಕರಣಗಳು ದಾಖಲಾಗಿವೆ.

ಆರೋಪಿಯ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ., ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಆರ್. ರವಿಶಂಕರ್, ಎಚ್.ಸಿ.ಜಗದೀಶ್ ಹಾಗೂ ಡಿವೈಎಸ್ಪಿ ಎಂ.ಎಚ್.ನಾಗೆ ಮಾರ್ಗದರ್ಶನದಲ್ಲಿ ತಂಡ ರಚಿಸಲಾಗಿತ್ತು.

ಶೋಧ ಕಾರ್ಯಾಚರಣೆ ಕೈಗೊಂಡಿದ್ದ ಕೋಲಾರ ನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಸದಾನಂದ, ಅವರ ತಂಡದ ಮಹೇಶ್, ಶೇಖರ್, ರಮೇಶ್ ಗುಪ್ತ ಮಾಹಿತಿದಾರರ ಸಹಕಾರದೊಂದಿಗೆ ಆರೋಪಿಯ ಇರುವಿಕೆ ಬಗ್ಗೆ ಖಚಿತ ಮಾಹಿತಿ ಕಲೆಹಾಕಿದ್ದರು.

ಆಗಸ್ಟ್ 1ರಂದು ಹಾಸನ ಜಿಲ್ಲೆಯ ಸಕಲೇಶಪುರ ನಗರದ ಬೆಂಗಳೂರು ಬೈಪಾಸ್ ರಸ್ತೆಯಲ್ಲಿ ಆರೋಪಿಯನ್ನು ಬಂಧಿಸಿ ಕರೆ ತಂದಿದ್ದಾರೆ. ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಯಶಸ್ವಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಅಧಿಕಾರಿ ಹಾಗೂ ಸಿಬ್ಬಂದಿಯ ಕಾರ್ಯವನ್ನು ಎಸ್‌ಪಿ ನಿಖಿಲ್ ಶ್ಲಾಘಿಸಿದ್ದಾರೆ.

## ಸಿಪಿಐ ತಾಲ್ಲೂಕು ಸಮ್ಮೇಳನದಲ್ಲಿ ಸೂರಿಗಾಗಿ ಸಮರ ಹೋರಾಟ

• **ಉದಯವಾಹಿನಿ, ಕೆಜಿಎಫ್**

ರಾಬರ್ಟಸನ್‌ಪೇಟೆಯ ಕಿಂಗ್ ಜಾರ್ಜ್ ಸಭಾಂಗಣದಲ್ಲಿ ನಡೆದ ಸಿಪಿಐ ತಾಲ್ಲೂಕು ಸಮ್ಮೇಳನದಲ್ಲಿ ಸೂರಿಗಾಗಿ ಸಮರ ಎಂಬ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ತಾಲ್ಲೂಕಿನಲ್ಲಿ ನಿವೇಶನ ಹಾಗೂ ಮನೆ ಇಲ್ಲದವರಿಗೆ ಸೂರು ಒದಗಿಸಬೇಕಾಗಿದೆ. ಬಿಜಿಎಂಎಲ್ ಪ್ರದೇಶದಲ್ಲಿ ಕಾರ್ಮಿಕರು ವಾಸ ಮಾಡುತ್ತಿರುವ ಮನೆಗಳನ್ನು ಅವರಿಗೆ ನೀಡಬೇಕು. ಈ ವಿಷಯವಾಗಿ ನ್ಯಾಯಾಲಯದ ತೀರ್ಪನ್ನು ಕೂಡ ಸರ್ಕಾರ ಪಾಲಿಸುತ್ತಿಲ್ಲ. ಆದ್ದರಿಂದ ಸೂರಿಗಾಗಿ ಸಮರ ಎಂಬ ಧ್ಯೆಯ ವಾಕ್ಯದೊಡನೆ ಹೋರಾಟ ಪ್ರಾರಂಭಿಸಲಾಗುವುದು ಎಂದು ಜಿಲ್ಲಾ ಘಟಕದ ಕಾರ್ಯದರ್ಶಿ ಜ್ಯೋತಿ ಬಸು ತಿಳಿಸಿದರು ಬೆಮಲ್‌ಗುತ್ತಿಗೆ ಕಾರ್ಮಿಕರು ಬೇಡಿಕೆ ಈಡೇರಿಕೆಗಾಗಿ 26 ದಿನ ಹೋರಾಟ ನಡೆಸಿದರು ಯಾವುದೇ ಪ್ರಯೋಜನವಾಗಲಿಲ್ಲ. ಬೆಮಲ್ ಆಡಳಿತ ವರ್ಗ ತನ್ನ ವಾಗ್ದಾನವನ್ನು ಈಡೇರಿಸಿಲ್ಲ. ಹಾಗಾಗಿ ಸಿಪಿಐ ಕಾರ್ಮಿಕರ ಪರವಾಗಿ ಹೋರಾಟವನ್ನು ಮುಂದುವರಿಸುವುದು ಎಂದರು.

ರಾಬರ್ಟ್‌ನ್ ಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಕಾಯಕಲ್ಪ ಬೇಕಾಗಿದೆ. ರೋಗಿಗಳಿಗೆ ಕನಿಷ್ಠ ಸೌಲಭ್ಯ ಸಿಗುತ್ತಿಲ್ಲ. ತಜ್ಞ ವೈದ್ಯರ ಚಿಕಿತ್ಸೆ ದೊರೆಯುತ್ತಿಲ್ಲ. ಈ ವಿಚಾರವಾಗಿ ಸಿಪಿಐ ಮುಂದಿನ ದಿನಗಳಲ್ಲಿ ಸರ್ಕಾರದ ಗಮನ ಸೆಳೆಯಲು ಹೋರಾಟ ನಡೆಸುತ್ತದೆ ಎಂದು ತಿಳಿಸಿದರು.

ಈ ವೇಳೆ ತಾಲ್ಲೂಕು ಕಾರ್ಯದರ್ಶಿಯಾಗಿ ಶ್ರೀಕುಮಾರ್, ಸಹಾಯಕ ಕಾರ್ಯದರ್ಶಿಯಾಗಿ ರಣದೀವ್ ಹಾಗೂ ಖಜಾಂಚಿಯಾಗಿ ಮಾದೇಶ್ ಆಯ್ಕೆಯಾದರು.





> **ನಗರಸಭೆಯಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರ ನಡೆಯುತ್ತಿದೆ. ಕಳೆದ ಐದು ವರ್ಷದಿಂದ ನಗರದ 35 ವಾರ್ಡ್‌ಗಳಲ್ಲಿ ಯಾವುದೇ ಅಭಿವೃದ್ಧಿ ಆಗಿಲ್ಲ. ನಗರದಾದ್ಯಂತ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಒಂದೂವರೆ ಕೋಟಿ ಖರ್ಚು ಮಾಡಲಾಗಿದೆ. ಎಲ್ಲಿ ಕೂಡ ಸಿಸಿಟಿವಿ ಕೆಲಸ ಮಾಡುತ್ತಿಲ್ಲ ಎಂದು ದೂರಿದರು. ತಾಲ್ಲೂಕಿನ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲು ಆಗಸ್ಟ್ 17ರಂದು ಬೆಂಬಲ ನಗರದಲ್ಲಿ ಸಭೆ ನಡೆಸಲಾಗುವುದು ಎಂದು ತಿಳಿಸಿದರು.**

**ಸೂರಿಗಾಗಿ ಸಮರ' ಹೋರಾಟ**

## ಮಿನಿ ನ್ಯೂಸ್

### ಅಕ್ಕೂರು: ಬೋನಿಗೆ ಬಿದ್ದ ಚಿರತೆ

• **ಉದಯವಾಹಿನಿ, ರಾಮನಗರ**

ತಾಲ್ಲೂಕಿನ ಕೂಟಗಲ್ ಹೋಬಳಿಯ ಅಕ್ಕೂರು ಗ್ರಾಮದಲ್ಲಿ ಎರಡು ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಸೆರೆಯಾಗಿದೆ. ಗ್ರಾಮದ ಆಸುಪಾಸಿನ ಬೆಟ್ಟಗುಡ್ಡಗಳಲ್ಲಿ ಚಿರತೆಗಳು ವಾಸಿಸುತ್ತಿವೆ. ಸಂಜೆಯಾದರೆ ಆಹಾರ ಅರಸಿ ಗ್ರಾಮದೊಳಗೆ ಬಂದು ಕುರಿ, ಹಸುವಿನ ಕರು, ಮೇಕೆ, ಕೋಳಿ, ಸಾಕು ನಾಯಿಗಳ ಮೇಲೆ ದಾಳಿ ನಡೆಸಿ ಹೊತ್ತೊಯ್ಯುತ್ತಿದ್ದವು. ನಸುಕಿನಲ್ಲಿ ಜನರ ಕಣ್ಣಿಗೂ ಬಿದ್ದಿದ್ದ ಚಿರತೆ ಗ್ರಾಮಸ್ಥರಲ್ಲಿ ಆತಂಕ ಹುಟ್ಟಿಸಿತ್ತು. ಜನರು ಸಂಜೆ ಮತ್ತು ನಸುಕಿನಲ್ಲಿ ಹೊರಗೆ ಬರಲು ಭಯಪಡುತ್ತಿದ್ದರು. ಆತಂಕ ಹುಟ್ಟಿಸಿರುವ ಚಿರತೆ ಸೆರೆಗೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು. ಆ ಹಿನ್ನೆಲೆಯಲ್ಲಿ ಗ್ರಾಮದ ಚನ್ನಪ್ಪ ಎಂಬುವರ ಮನೆ ಹಿಂಭಾಗ ಇಲಾಖೆಯವರು ಮೂರು ದಿನಗಳ ಹಿಂದೆ ಬೋನು ಇಟ್ಟಿದ್ದರು. ಆಹಾರ ಅರಸಿ ಬಂದಿದ್ದ ಚಿರತೆ ಬೋನಿನಲ್ಲಿ ಕೂಡಿ ಹಾಕಿದ್ದ ಕೋಳಿಗಳನ್ನು ತಿನ್ನಲು ಬೋನಿನೊಳಕ್ಕೆ ನುಗ್ಗಿ ಸೆರೆಯಾಗಿದೆ. ಚಿರತೆ ಸೆರೆಯಾಗಿರುವ ವಿಷಯವನನ್ಉ ಗ್ರಾಮಸ್ಥರು ಅರಣ್ಯ ಇಲಾಖೆಗೆ ಅಧಿಕಾರಿಗಳಿಗೆ ತಿಳಿಸಿದರು. ಸ್ಥಳಕ್ಕೆ ಬಂದ ಅಧಿಕಾರಿಗಳು ಬೋನು ಸಮೇತ ಚಿರತೆಯನ್ನು ಅರಣ್ಯದೊಳಕ್ಕೆ ಕೊಂಡೊಯ್ದು ಬಿಟ್ಟು ಬಂದರು.

### ಅಲೀಪುರದಲ್ಲಿ 2,500 ಕೆ.ಜಿ ದನದ ಮಾಂಸ ವಶ

• **ಉದಯವಾಹಿನಿ, ಗೌರಿಬಿದನೂರು**

ಬೆಂಗಳೂರಿನಲ್ಲಿ ಮಾರಾಟ ಮಾಡಲು ತಾಲ್ಲೂಕಿನ ಅಲೀಪುರದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 2,500 ಕೆ.ಜಿ ದನದ ಮಾಂಸವನ್ನು ಮಂಚೇನಹಳ್ಳಿ ಪೊಲೀಸರು' ವಶಕ್ಕೆ ಪಡೆದಿದ್ದಾರೆ. ಇದರ ಒಟ್ಟು ಮೌಲ್ಯ ರೂ.4.80 ಲಕ್ಷ ಎಂದು ಅಂದಾಜಿಸಲಾಗಿದೆ.ಖಚಿತ ಮಾಹಿತಿ ಮೇರೆಗೆ ಪೊಲೀಸರು ಬೆಳಗಿನ ಜಾವ ದಾಳಿ ಅಲೀಪುರದ ಬಾಕ್ರಿ ಮೊಹಲ್ಲಾ ಗಲ್ಲಿಯ ಎರಡು ಶೆಡ್‌ಗಳ ಮೇಲೆ ದಾಳಿ ನಡೆಸಿದರು. ಪೊಲೀಸರನ್ನು ಕಂಡ ತಕ್ಷಣವೇ ಶೆಡ್ ಮಾಲೀಕರು ಮತ್ತು ಕೆಲಸಗಾರರು ಪರಾರಿ ಆದರು. ಅಲ್ಲಿದ್ದ 25 ದನಗಳ ಮಾಂಸವನ್ನು ಪೊಲೀಸರು ವಶಪಡಿಸಿಕೊಂಡರು. ಶೆಡ್ ಮಾಲೀಕರಾದ ಅಬ್ಬಾಸ್, ಖಾಲು, ಸೈಯದ್ ಸಕ್ಸೆನ್ ಮತ್ತು ಲಾಲು ವಿರುದ್ಧ ಮಂಚೇನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

### ಒಂದೇ ಕಡೆ 20 ನವಿಲುಗಳು ಅನುಮಾನಾಸ್ಪದ ಸಾವು?

• **ಉದಯವಾಹಿನಿ, ಮಧುಗಿರಿ**

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಹೋಬಳಿ ಹನುಮಂತಪುರ ಗ್ರಾಮದಲ್ಲಿ ಅನುಮಾನಾಸ್ಪದ ರೀತಿಯಲ್ಲಿ 20 ನವಿಲುಗಳು ಸಾವನ್ನಪ್ಪಿವೆ. ಹನುಮಂತಪುರದ ಗೋಮಾಳ ಜಾಗದಲ್ಲಿ 3 ಗಂಡು, 17 ಹೆಣ್ಣು ನವಿಲುಗಳು ಮೃತಪಟ್ಟಿವೆ. ಈ ಭಾಗದ ಅಕ್ಕ ಪಕ್ಕ ಮುಸುಕಿನ ಜೋಳದ ಬೆಳೆ ಹಾಕಿದ್ದಾರೆ. ಬೆಳೆ ನಾಶ ಮಾಡುತ್ತವೆ ಎಂದು ಮುಸಕಿನ ಜೋಳಕ್ಕೆ ವಿಷ ಹಾಕಿದ್ದಾರೆ. ಇದರಿಂದಲೇ ನವಿಲುಗಳು ಮೃತಪಟ್ಟಿವೆ ಎಂದು ಗ್ರಾಮಸ್ಥರು ದೂರಿದ್ದಾರೆ. ಮೃತಪಟ್ಟ ನವಿಲುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಮೇಲೆ ಸಾವಿಗೆ ಕಾರಣ ಗೊತ್ತಾಗಲಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು. ಅರಣ್ಯ ಇಲಾಖೆಯ ಎಸಿಎಫ್ ಮಲ್ಲಿಕಾರ್ಜುನ್, ವಲಯ ಅರಣ್ಯಾಧಿಕಾರಿ ಸುರೇಶ್, ಉಪ ಅರಣ್ಯ ವಲಯಾಧಿಕಾರಿ ಮುತ್ತುರಾಜು, ಮಹೇಶ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

### ಕನ್ನಡ ಸಾಹಿತ್ಯ ಪರಿಷತ್ತಿನ ನಡೆ-ಯುವ ಜನತೆಯ ಕಡೆ ಕಾರ್ಯಕ್ರಮ

• **ಉದಯವಾಹಿನಿ, ತುಮಕೂರು**

ಜಿಲ್ಲೆಯಲ್ಲಿ 176 ಜನಪದ ಕಲಾ ಪ್ರಕಾರಗಳಿವೆ. ಓದಲು, ಬರೆಯಲು ಬಾರದವರ ಸಾಹಿತ್ಯ ಭಂಡಾರ ಜನಪದ ಸಾಹಿತ್ಯ ಎಂದು ಜಾನಪದ ಕಲಾವಿದ ಸಣ್ಣಹೊನ್ನಯ್ಯ ಕಂಟಲಗೆರೆ ಹೇಳಿದರು.ತಾಲ್ಲೂಕಿನ ನಾಗವಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ 'ಕನ್ನಡ ಸಾಹಿತ್ಯ ಪರಿಷತ್ತಿನ ನಡೆ–ಯುವ ಜನತೆಯ ಕಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಿಕ್ಕಬೆಳ್ಳಾವಿ ಶಿವಕುಮಾರ್, ಪರಿಷತ್ತು ಕನ್ನಡ ಭಾಷೆ, ಇತಿಹಾಸವ ತಿಳಿಸುವ ಕಾರ್ಯ ಮಾಡುತ್ತಿದೆ. ಇದರ ಉದ್ದೇಶವನ್ನು ಯುವ ಸಮೂಹ ಅರ್ಥ ಮಾಡಿಕೊಳ್ಳಬೇಕು. ಸಾಹಿತ್ಯ ಪ್ರಕಾರದಲ್ಲಿನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೂಳೂರು ಹೋಬಳಿಯ ಅಧ್ಯಕ್ಷರಾಗಿ ತೋಪಯ್ಯ, ಹೆಬ್ಬೂರು ಹೋಬಳಿ ಅಧ್ಯಕ್ಷರಾಗಿ ವಾಸು ಅವರನ್ನು ನೇಮಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಎಸ್. ಸಿದ್ದರಾಜು, ಸಾಹಿತ್ಯ ಪರಿಷತ್ತಿನ ಶಶಿಕುಮಾರ್, ದೇವರಾಜು, ಸಂಪತ್ ಕುಮಾರ್ ಇತರರು ಹಾಜರಿದ್ದರು.

# ಪ್ರಯಾಣಿಕರ ಅನುಕೂಲಕ್ಕೆ 1,059 ಪರ್ಯಾಯ ವಾಹನ; ಜಿಲ್ಲಾಧಿಕಾರಿ

## ಒಂದು ವೇಳೆ ಮುಷ್ಕರ ನಡೆದರೂ ಜಿಲ್ಲೆಯಲ್ಲಿ ಸಾರಿಗೆ ಸೇವೆಯಲ್ಲಿ ವ್ಯತ್ಯಯ ಆಗದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ನೌಕರರು ಆ.5ರ ಬೆಳಿಗ್ಗೆ 6ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಒಂದು ವೇಳೆ ಮುಷ್ಕರ ನಡೆದರೂ ಜಿಲ್ಲೆಯಲ್ಲಿ ಸಾರಿಗೆ ಸೇವೆಯಲ್ಲಿ ವ್ಯತ್ಯಯ ಆಗದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ ತಿಳಿಸಿದರು. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ನಿಗಮದ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದೆ ಎಂದರು.

ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರು ನಿಗಮಗಳ ಸಂಘಟನೆಗಳ ಮುಖಂಡರು ಹಾಗೂ ಪದಾಧಿಕಾರಿಗಳೊಂದಿಗೆ ಆ.4ರಂದು ಬೆಂಗಳೂರಿನಲ್ಲಿ ಮಾತುಕತೆ ನಡೆಸಲಿದೆ. ಮಾತುಕತೆ



ಯಶಸ್ವಿಯಾಗಿ ಮುಷ್ಕರವನ್ನು ಸಂಘಟನೆಗಳು ಕೈ ಬಿಟ್ಟನ ನಿಗಮಗಳ ಸಾರಿಗೆ ವ್ಯವಸ್ಥೆಯು ಯಥಾ ಸ್ಥಿತಿಯಲ್ಲಿ ಮುಂದುವರೆಯಲಿದೆ. ಇಲ್ಲವಾದಲ್ಲಿ ಸಾರಿಗೆ ನಿಗಮಗಳ ಬಸ್‌ಗಳ ಸಂಚಾರ ಸ್ಥಗಿತಗೊಳ್ಳಲಿದೆ ಎಂದರು. ಆದ್ದರಿಂದ ಸಾರ್ವಜನಿಕ ಸಾರಿಗೆಯಲ್ಲಿ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಪರ್ಯಾಯವಾಗಿ ಸಾರಿಗೆ ವ್ಯವಸ್ಥೆಯನ್ನು ಜಿಲ್ಲೆಯಲ್ಲಿ ಒದಗಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ನೋಂದಾಯಿಸಲಾಗಿರುವ ಮಜಲು ವಾಹನಗಳು, ಒಪ್ಪಂದದ ವಾಹನಗಳು, ಖಾಸಗಿ ಸೇವಾ ವಾಹನಗಳು ಮತ್ತು ಶಾಲ್ ವಾಹನಗಳು ಸೇರಿದಂತೆ ಒಟ್ಟು 1059 ವಾಹನಗಳನ್ನು ಪ್ರಯಾಣಿಕರ ಅನುಕೂಲಕ್ಕಾಗಿ ಮುನ್ನೆಚ್ಚರಿಕೆ ಕ್ರಮವಾಗಿ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು.

ಕೆಎಸ್‌ಆರ್‌ಟಿಸಿ ಚಿಕ್ಕಬಳ್ಳಾಪುರ ವಿಭಾಗೀಯ ನಿಯಂತ್ರಣಾಧಿಕಾರಿ ವಿ.ಬಸವರಾಜು, ಪ್ರಾದೇಶಿಕ ಸಾರಿಗೆ ಅಧಿಕಾರಿ ನಾಗರಾಜಚಾರಿ, ಚಿಂತಾಮಣಿಯ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಂ. ಬೈರಾರೆಡ್ಡಿ ವಿವಿಧ ಇಲಾಖೆಯ ಅಧಿಕಾರಿಗಳು ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

> **ವಾಹನಗಳು ನಿಗಮದ ಬಸ್ ನಿಲ್ದಾಣಗಳಿಂದಲೇ ಕಾರ್ಯಾಚರಣೆ ಮಾಡಲು ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ. ಒಪ್ಪಂದದ ವಾಹನಗಳನ್ನು ಬೆಂಗಳೂರು, ಕೋಲಾರ, ಚಿಂತಾಮಣಿ, ಬಾಗೇಪಲ್ಲಿ ಮತ್ತು ಗೌರಿಬಿದನೂರು ನಗರಗಳಿಗೆ ಕಾರ್ಯಚರಣೆ ಮಾಡಲು ಕ್ರಮವಹಿಸಲಾಗುವುದು. ಮ್ಯಾಕ್ಸಿಕ್ಯಾಬ್ ಮತ್ತು ಆಟೊಗಳು ಜಿಲ್ಲೆಯ ಗ್ರಾಮಗಳಿಂದ ಕಾರ್ಯಾಚರಣೆ ನಡೆಸಲಿವೆ ಎಂದು ಹೇಳಿದರು.**

> **ಜಿಲ್ಲೆಯಲ್ಲಿರುವ 581 ಖಾಸಗಿ ಶಾಲಾ ಬಸ್‌ಗಳನ್ನು ಸಹ ಪ್ರಯಾಣಿಕರ ಅನುಕೂಲಕ್ಕೆ ಬಳಸಿಕೊಳ್ಳಲಾಗುವುದು. ಆಟೊಗಳು ಸ್ಥಳೀಯ ಗ್ರಾಮಗಳಿಂದ ಕಾರ್ಯಾಚರಣೆ ನಡೆಸಲಿವೆ. ಈ ಎಲ್ಲಾ ಖಾಸಗಿ ವಾಹನಗಳಲ್ಲಿ ಕೆಎಸ್‌ಆರ್‌ಟಿಸಿ ವಾಹನಗಳ ದರಗಳನ್ನೇ ಪಾವತಿಸಿ ಪ್ರಯಾಣಿಕರು ಪ್ರಯಾಣ ಮಾಡಬಹುದು. ಜಿಲ್ಲೆಯಲ್ಲಿ ಸಂಚಾರ ಮಾಡುವ ಪ್ರಯಾಣಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವಂತಿಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಮಾತನಾಡಿ, ಜಿಲ್ಲೆಯಲ್ಲಿ ಸಾರಿಗೆ ನೌಕರರ ಮುಷ್ಕರ ನಡೆದರೂ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಗತ್ಯ ಮುನ್ನೆಚ್ಚರಿಕೆ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.**

ಅಂತರಾಳದಿಂದ... EDITORIAL

# ಕುಡಿಯುವ ನೀರಿಗೆ ವಿಷ: ಯಾರು ಹೊಣೆ?

ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ದೇಶವಿರೋಧಿ, ಜೀವವಿರೋಧಿ ಶಕ್ತಿಗಳು ಎಸಗಿರುವ ಕೃತ್ಯಕ್ಕೆ ನಾಡು ಬೆಚ್ಚಿ ಬಿದ್ದಿದೆ. ಇಲ್ಲಿನ ಸರಕಾರಿ ಶಾಲೆಯೊಂದರ ಕುಡಿಯುವ ನೀರಿನ ಟ್ಯಾಂಕ್‌ಗೆ ದುಷ್ಕರ್ಮಿಗಳು ವಿಷ ಬೆರೆಸಿದ್ದಾರೆ. ಈ ನೀರನ್ನು ಕುಡಿದ ಹಲವು ಮಕ್ಕಳು ಅಸ್ವಸ್ಥರಾಗಿದ್ದಾರೆ. ತನಿಖೆ ನಡೆದಾಗ ಹೊರ ಬಿದ್ದ ಸತ್ಯ ಇನ್ನಷ್ಟು ಭೀಕರವಾಗಿದೆ. ಈ ದುಷ್ಕೃತ್ಯದ ನೇತೃತ್ವ ವಹಿಸಿದಾತ ಶ್ರೀರಾಮಸೇನೆ ಸಂಘಟನೆಯ ಮುಖಂಡ ಪ್ರಮುಖ ಆರೋಪಿ ಸಂಘಟನೆಯ ತಾಲೂಕು ಅಧ್ಯಕ್ಷ. ಈತನ ಕೃತ್ಯಕ್ಕೆ ನೆರವಾದರು ಆ ಸಂಘಟನೆಯ ಉಳಿದ ಕಾರ್ಯಕರ್ತರು. ಈ ಸರಕಾರಿ ಶಾಲೆಯ ಮುಖ್ಯೋಪಾಧ್ಯಾಯ ಮುಸ್ಲಿಮ್ ಧರ್ಮಕ್ಕೆ ಸೇರಿರುವುದೇ ಕೃತ್ಯ ಎಸಗಲು ಮುಖ್ಯ ಕಾರಣ. 13 ವರ್ಷದಿಂದ ಮುಖ್ಯ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ಸುಲೈಮಾನ್ ಎಂಬವರನ್ನು ಕೆಲಸದಿಂದ ವಜಾಗೊಳಿಸುವುದಕ್ಕಾಗಿ ದುಷ್ಕರ್ಮಿಗಳು ನೀರಿಗೆ ವಿಷ ಬೆರೆಸಿದ್ದಾರೆ. ತುಸು ಏರು ಪೇರಾಗಿದ್ದರೂ ಅಷ್ಟೂ ಮಕ್ಕಳು ಸಾಯಬೇಕಾಗಿತ್ತು. ತನಿಖೆ ನಡೆಸಿದ ಪೊಲೀಸರು ಎಲ್ಲಾ ಆರೋಪಿಗಳನ್ನು ಬಂಧಿಸಿದ್ದಾರೆ. ಶ್ರೀರಾಮನ ಹೆಸರಿನಲ್ಲಿ ನಾಡಿಗೆ ದ್ವೇಷದ ವಿಷವನ್ನು ಹಂಚುತ್ತಾ ಬಂದಿರುವ ಪ್ರಮೋದ್ ಮುತಾಲಿಕ್ ನೇತೃತ್ವದ ಶ್ರೀ ರಾಮಸೇನೆ ಸಂಘಟನೆಯ ಕಾರ್ಯಕರ್ತರು ಶಾಲೆಯೊಂದರ ಕುಡಿಯುವ ನೀರಿಗೆ ವಿಷ ಹಾಕುವುದು ಆಘಾತಕಾರಿ ವಿಷಯವೇನೂ ಅಲ್ಲ. ಆ ಸಂಘಟನೆಯ ಕಾರ್ಯಕರ್ತರು ತಮ್ಮ ದುರುದ್ದೇಶ ಸಾಧಿಸಲು ಎಂತಹ ಹೀನ ಕೃತ್ಯಕ್ಕೂ ಇಳಿಯಬಲ್ಲರು ಎನ್ನುವುದು ಪದೇ ಪದೇ ಸಾಬೀತಾಗಿದೆ. ಈ ಸಂಘಟನೆಯನ್ನು ಕಟ್ಟಿರುವುದೇ ಜನರಿಗೆ ಧರ್ಮ, ಕೋಮುವಿನ ಹೆಸರಿನಲ್ಲಿ ದ್ವೇಷದ ವಿಷವನ್ನು ಉಣಿಸಲು. ನೀರಿಗೆ ವಿಷ ಹಾಕುವ ಮೂಲಕ, ವಿದ್ಯಾರ್ಥಿಗಳನ್ನು ಬಲಿಕೊಟ್ಟು ಸಮಾಜದಲ್ಲಿ ಉದ್ವಿಗ್ನ ವಾತಾವರಣ ನಿರ್ಮಿಸುವುದು ಇವರ ಅಂತಿಮ ಉದ್ದೇಶವಾಗಿತ್ತು. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ 'ಇದೊಂದು ಆಘಾತಕಾರಿ ಘಟನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿಕೆ ನೀಡಿದ್ದಾರೆ. ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷ ಬಿತ್ತಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ನಾಯಕರು ಈಗ ಏನು ಹೇಳುತ್ತಾರೆ? ಎಂದು ಅವರು ಕೇಳಿದ್ದಾರೆ. ಆದರೆ ಮೊದಲು ಶ್ರೀರಾಮ ಸೇನೆ ಸಂಘಟನೆ ಮತ್ತು ಅದರ ಮುಖಂಡರ ವಿರುದ್ಧ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಇದನ್ನು ಒಂದು ಕ್ರಿಮಿನಲ್ ಪ್ರಕರಣವಾಗಿಯಷ್ಟೇ ನೋಡುತ್ತದೆಯೋ ಅಥವಾ ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕೆಡಿಸಲು ಸಂಚು ಹೂಡಿದ ಆರೋಪದಲ್ಲಿ ಶ್ರೀ ರಾಮಸೇನೆ ಸಂಘಟನೆಯ ವಿರುದ್ಧ ಕ್ರಮ ತೆಗೆದುಕೊಳ್ಳುತ್ತದೆಯೋ ಎಂದು ಜನರು ಕೇಳುತ್ತಿದ್ದಾರೆ. ನಾಡಿಗೆ ದ್ರೋಹ ಬಗೆಯುವ ಇಂತಹ ಅಮಾನವೀಯ ಕೃತ್ಯಗಳಲ್ಲಿ ಈ ಹಿಂದೆಯೂ ಶ್ರೀ ರಾಮಸೇನೆ ಗುರುತಿಸಿಕೊಂಡಿದೆ. ಹುಬ್ಬಳ್ಳಿಯ ನ್ಯಾಯಾಲಯದ ಆವರಣದಲ್ಲಿ ಸ್ಫೋಟ ನಡೆಸಿ ಬಳಿಕ ಅದನ್ನು ಅಮಾಯಕ ಮುಸ್ಲಿಮರ ತಲೆಗೆ ಕಟ್ಟುವ ಪ್ರಯತ್ನವನ್ನು ಶ್ರೀ ರಾಮಸೇನೆ ಹಿಂದೆ ನಡೆಸಿತ್ತು. ಈ ಸಂಬಂಧ ಜಂಬಗಿ ಮತ್ತು ಆತನ ಸಹಚರರನ್ನು ವರ್ಷಗಳ ಬಳಿಕ ಬಂಧಿಸಲಾಗಿತ್ತು. ಹೆದ್ದಾರಿ ದರೋಡೆ, ಕೊಲೆ ಮೊದಲಾದ ಕ್ರಿಮಿನಲ್ ಕೃತ್ಯಗಳಲ್ಲಿ ಇವರು ಭಾಗವಹಿಸಿರುವುದು ಆಗ ತನಿಖೆಯಿಂದ ಬೆಳಕಿಗೆ ಬಂದಿದ್ದವು. ಸಿಂಧಗಿಯಲ್ಲಿ ಶ್ರೀ ರಾಮಸೇನೆಯ ಕಾರ್ಯಕರ್ತರು ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದರು. ಬಳಿಕ ಅದೇ ಶ್ರೀ ರಾಮಸೇನೆಯ ಕಾರ್ಯಕರ್ತರು ಸಿಂಧಗಿಯ ತಹಶೀಲ್ದಾರ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ, ಸ್ಥಳೀಯ ಮುಸ್ಲಿಮರ ವಿರುದ್ಧ ದ್ವೇಷ ಕಾರಿದ್ದರು. ಆದರೆ ತನಿಖೆಯಲ್ಲಿ ಪಾಕಿಸ್ತಾನ ಧ್ವಜ ಹಾರಿಸಿದ್ದು ಶ್ರೀರಾಮಸೇನೆ ಕಾರ್ಯಕರ್ತರು ಎನ್ನುವುದು ಬೆಳಕಿಗೆ ಬಂತು.

> **ಸಮಾಜಕ್ಕೆ ಸದಾ ವಿಷ ಉಣಿಸುತ್ತಾ ಬಂದಿರುವ ಪ್ರಮೋದ್ ಮುತಾಲಿಕ್ ಪಾಲಿಗೆ ಈ ಕೃತ್ಯ ಹೆಮ್ಮೆ ಪಡುವಂತಹದು. ಅವರು ಸಂಘಟನೆಯನ್ನು ಕಟ್ಟಿರುವುದೇ ಇಂತಹ ದುಷ್ಕೃತ್ಯಗಳನ್ನು ಎಸಗಿ, ಒಂದು ಧರ್ಮದ ವಿರುದ್ಧ ಇನ್ನೊಂದು ಧರ್ಮವನ್ನು ಎತ್ತಿ ಕಟ್ಟುವುದಕ್ಕಾಗಿ, ನೀರಿಗೆ ವಿಷ ಬೆರೆಸುವಂತಹ ಮನಸ್ಥಿತಿಯನ್ನು ತನ್ನ ಕಾರ್ಯಕರ್ತರಲ್ಲಿ ಬೆಳೆಸಿದ್ದು ಪ್ರಮೋದ್ ಮುತಾಲಿಕ್. ಈತನ ದ್ವೇಷಪೂರಿತವಾದ ಮಾತುಗಳಿಂದ ಪ್ರೇರಣೆ ಪಡೆದು ಅವರು ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ಕೊಲ್ಲುವ ಪ್ರಯತ್ನ ನಡೆಸಿದ್ದಾರೆ.**

ಇತ್ತೀಚೆಗಷ್ಟೇ ಬೆಳಗಾವಿಯಲ್ಲಿ ಶ್ರೀ ರಾಮಸೇನೆ ಸಂಘಟನೆ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುವ ಆರೋಪ ಕೇಳಿ ಬಂದಿತ್ತು. ಯುವಕರು ಕೋವಿ ಹಿಡಿದು ತರಬೇತಿ ಪಡೆಯುತ್ತಿರುವ ಚಿತ್ರಗಳು ಮಾಧ್ಯಮಗಳಲ್ಲೂ ಪ್ರಕಟವಾಗಿದ್ದವು. ಈ ಬಗ್ಗೆ ಪೊಲೀಸ್ ಇಲಾಖೆಗೆ ದೂರನ್ನು ನೀಡಿ, ಶ್ರೀ ರಾಮಸೇನೆ ಸಂಘಟನೆಯನ್ನು ನಿಷೇಧಿಸಲು ಆಗ್ರಹಿಸಲಾಗಿತ್ತು. ಆದರೆ ಸರಕಾರ ಕಣ್ಣಿದ್ದೂ ಕುರುಡನಂತೆ ವರ್ತಿಸುತ್ತಾ ಬಂದಿದೆ. ನೀರಿಗೆ ವಿಷ ಹಾಕಿದ ಕೃತ್ಯದ ಹೊಣೆಯನ್ನು ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೊರುತ್ತಾರೆಯೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದ್ದಾರೆ. ಈ ಪ್ರಕರಣದಲ್ಲಿ ಪ್ರಮೋದ್ ಮುತಾಲಿಕ್ ಆರೋಪಿಗಳಲ್ಲಿ ಒಬ್ಬ ಎನ್ನುವುದನ್ನು ಸರಕಾರ ಅರ್ಥ ಮಾಡಿಕೊಳ್ಳಬೇಕು. ಆತನಿಂದ ನೈತಿಕ ಹೊಣೆಯನ್ನು ನಿರೀಕ್ಷಿಸುವುದೇ ಮೂರ್ಖತನವಾಗುತ್ತದೆ. ಈ ಕೃತ್ಯದ ನೈತಿಕ ಹೊಣೆಯನ್ನು ಹೊರಬೇಕಾದದ್ದು ಗೃಹ ಸಚಿವರು. ಯಾಕೆಂದರೆ ರಾಮಸೇನೆ ಒಂದರ ಮೇಲೆ ಒಂದರಂತೆ ದೇಶದ ವಿರೋಧಿ, ಜನ ವಿರೋಧಿ ಕೃತ್ಯಗಳನ್ನು ಎಸಗುತ್ತಾ ಬಂದರೂ ಅದರ ವಿರುದ್ಧ ಯಾವುದೇ ನಿರ್ಬಂಧವನ್ನು ಹೇರದ, ಕ್ರಿಮಿನಲ್ ಆರೋಪಗಳಿದ್ದರೂ ಆತನನ್ನು ಈವರೆಗೆ ಬಂಧಿಸದ ಸರಕಾರವೇ ರಾಮಸೇನೆಯ ಕಾರ್ಯಕರ್ತರ ಅಮಾನವೀಯ ಕೃತ್ಯಕ್ಕೆ ಹೊಣೆಯಾಗಿದೆ.

# ರಾಮಾಯಣ



**ಶ್ರೀ ರಾಮನು ಆಯೋಧ್ಯೆಗೆ ಬರುವುದಿಲ್ಲವೆಂದು ಹೇಳಿದ್ದು**

• ಹಿಂದಿನ ಸಂಚಿಕೆಯಿಂದ

## 111 ನೆಯ ಅಧ್ಯಾಯ

ಆ ಮಾತನ್ನು ಕೇಳಿ ಶ್ರೀರಾಮನು ವಸಿಷ್ಠ ಮುನೀಶ್ವರನನ್ನು ಕುರಿತು ಮಹರ್ಷಿಗಳೆ, ಲೋಕದಲ್ಲಿ ಮಗನಾದವನು ತಾಯಿತಂದೆಗಳು ಹೇಳಿದ ರೀತಿಯಲ್ಲಿರುವುದೇ ಕೃತ್ಯವಲ್ಲದೆ ಮತ್ತೊಂದಲ್ಲ. ಹಾಗಿಲ್ಲದಿದ್ದರೆ ದಶರಥರಾಯನು ನನ್ನ ಶರೀರವನ್ನು ಬಹು ಬಗೆಯಲ್ಲಿ ಪೋಷಣೆ ಮಾಡಿ ರಕ್ಷಿಸಿದ್ದಕ್ಕೆ ನಾನು ಏನು ಮಾಡಿದಂತಾಯಿತು ತನ್ನ ಶಸ್ತ್ರನುಸಾರವಾಗಿ ಕೊಟ್ಟು ಹೊದಿಕೆ ಗಳಿಂದಲೂ ಹಾಸಿಗೆಗಳಿಂದಲೂ ಪ್ರಿಯವಚನಗಳಿಂದಲೂ ಲಾಲಿಸಿ ರಕ್ಷಿಸಿದ ತಂದೆಯ ಮಾತನ್ನು ಮೀರಬಾರದು. ದಶರಥರಾಯನಾ ನನಗೆ ತಂದೆಯು ಅರಸನು. ಆವಕಾರಣ ಆತನ ಸಂಮುಖದಲ್ಲಿ ನಾನು ಮಾಡಿದ ಪ್ರತಿಜ್ಞೆಯು ವ್ಯರ್ಥವಾಗಬಾರದು ಎಂದು ನುಡಿದನು. ಅದನ್ನು ಕೇಳಿ ಭರತನು, ಶ್ರೀರಾಮನು ವನವಾಸದ ಮಿತಿಯು ತೀರುವ ಪರ್ಯಂತ ಆಯೋಧ್ಯಾವಟ್ಟಣಕ್ಕೆ ತಿರುಗಿ ಬರನೆಂದು ತಿಳಿದು ಮನಸ್ಸಿನಲ್ಲಿ ಅತ್ಯಂತ ವ್ಯಥೆವಟ್ಟು ತನ್ನ ಸಾರಥಿಯಾದ ಸುಮಂತ್ರನನ್ನು ಕುರಿತು ಎಲೈ ಸುಮಂತ್ರ, ಶ್ರೀರಾಮನ ಸಂಮುಖದಲ್ಲಿ ನೆಲದ ಮೇಲೆ ದರ್ಭೆಯ ಹಾಸಿಗೆಯಲ್ಲಿ ಆತನು ಕೃಪೆಮಾಡುವ ಪರ್ಯಂತ ದರಿದ್ರನಾದ ಬ್ರಾಹ್ಮಣನಂತೆ ಆಹಾರವನ್ನು ಬಿಟ್ಟು ಮಲಗಿರುವನು. ದರ್ಭೆಯನ್ನು ನೆಲದ ಮೇಲೆ ಹರಡು ಎಂದು ನುಡಿದನು. ಸುಮಂತ್ರನು ರಾಮನ ಮುಖವನ್ನು ನೋಡುತ್ತ ಸುಮ್ಮನೆ ನಿಂತನು.

ಆಗ ಭರತನು ಖಿನ್ನನಾಗಿ ತಾನೇ ದರ್ಭೆಗಳನ್ನು ನೆಲದಮೇಲೆ ಹಾಸಿ ಅದರಲ್ಲಿ ಕುಳಿತನು. ಅದನ್ನು ನೋಡಿ ರಾಜರ್ಷಿಯಾದ ಶ್ರೀರಾಮನು ಭರತನನ್ನು ಕುರಿತು ಭರತ, ನಾನು ತಂದೆಯ ಮಾತನ್ನು ಮೀರದಿದ್ದರೆ ನೀನು ಉಪವಾಸ ಮಾಡಲು ಹಠಮಾಡುವುದು ಸರಿಯಲ್ಲ. ಪಟ್ಟಾಭಿಷೇಕಕ್ಕೆ ಯೋಗ್ಯನಾದ ರಾಜಕುಮಾರನು ಹಠದಿಂದ ಪ್ರಾಯೋಪವೇಶವನ್ನು ಮಾಡಬಾರದು. ರಾಜಕುಮಾರ, ಉಗ್ರವಾದ ವ್ರತವನ್ನು ಬಿಟ್ಟೇಳು. ರಾಜಧಾನಿಯಾದ ಆಯೋಧ್ಯಾಪಟ್ಟಣಕ್ಕೆ ಶೀಘ್ರದಲ್ಲಿ ತೆರಳು ಎಂದು ನುಡಿದನು. ಭರತನು ವರ್ಧಾಸನದ ಮೇಲೆ ಕುಳಿತುಕೊಂಡು ಪುರಜನರನ್ನು ಕುರಿತು ಎಲೈ ಜನಗಳಿರಾ, ನೀವೆಲ್ಲರೂ ಸುಮ್ಮನೆ ಇರಬಹುದೆ ಶ್ರೀರಾಮನಿಗೆ ಹಿತವಚನವನ್ನು ಹೇಳಿರಿ ಎಂದನು. ಆ ಜನರು ಭರತ, ಶ್ರೀರಾಮನ ಅಭಿಪ್ರಾಯವನ್ನು ತಿಳಿದೆವು. ಈ ಮಹಾತ್ಮನು ಒಳ್ಳೆಯ ಮಾರ್ಗವನ್ನೇ ಅನುಸರಿಸಿದ್ದಾನೆ. ತನ್ನ ತಂದೆಯಾದ ದಶರಥರಾಯನ ಆಜ್ಞೆಯಲ್ಲಿದ್ದಾನೆ. ಆವಕಾರಣ ಈತನನ್ನು ಆಯೋಧ್ಯಾಪಟ್ಟಣಕ್ಕೆ ತಿರುಗಿಸುವುದಕ್ಕೆ ನಾವು ಸಮರ್ಥರಲ್ಲ ಎಂದು ನುಡಿದರು. ಶ್ರೀರಾಮನು ಆ ಜನರು ಹೇಳಿದ ಮಾತನ್ನು ಕೇಳಿ ಭರತನನ್ನು ಕುರಿತು ಭರತ, ಕೇಳಿದೆಯಾ ಈ ಧಾರ್ಮಿಕ ಮಿತ್ರರಾಡುವ ಮಾತನ್ನು ಮೇಲೇಳು. ಎದ್ದು ನನ್ನನ್ನೂ ಪವಿತ್ರವಾದ ನೀರನ್ನೂ ಮುಟ್ಟು ಎಂದನು. ಅನಂತರ ಭರತನು ಎದ್ದು ನೀರನ್ನು ಮುಟ್ಟಿ ಎಲ್ಲರನ್ನೂ ನೋಡಿ ಪ್ರರಜನರೇ, ನಮ್ಮ ತಂದೆಯ ಮಾತನ್ನು ಮೀರದೆ ವನವಾಸ ಮಾಡಲೇಬೇಕಾದಲ್ಲಿ ನನ್ನ ಅಣ್ಣನಿಗೆ ಬದಲಾಗಿ ನಾನು ಹದಿನಾಲ್ಕು ವರುಷಗಳ ಪರ್ಯಂತ ವನವಾಸವನ್ನು ಮಾಡುತ್ತೇನೆ.

ಮುಂದುವರಿಯುವುದು...

☛ ವಿಶ್ವಾಸ್.ಡಿ.ಗೌಡ

# ಬಾಲ ಬಾಪು

## ಉಪವಾಸದ ಬಾಲಪಾಠ



ರಾತ್ರಿಯಿಡೀ ಮಳೆ ಮಳೆ ಸುರಿದಿತ್ತು. ಮಳೆನೀರಿನಲ್ಲಿ ಆಟವಾಡುವುದೆಂದರೆ ಮೋನು ಪಾಪುವಿಗೆ ಬಹಳ ಇಷ್ಟ. ಆದರೆ, ಅವನು ನೀರಿನಲ್ಲಿ ಆಟವಾಡುತ್ತಿರುವುದು ರಂಭತೆಯ ಕಣ್ಣಿಗೇನಾದರೂ ಬಿತ್ತು ಅಂದರೆ ಮುಗಿಯಿತು.

ರಟ್ಟೆ ಹಿಡಿದು ದರದರನೆ ಎಳೆದು ಕೊಂಡು ಹೋಗಿ, ಒದ್ದೆಯಾಗಿದ್ದ ಕೈಕಾಲುಗಳನ್ನು ಒರಸಿ ಮಂಚದ ಮೇಲೆ ಮಲಗಿಸಿ ಬಾಗಿಲು ಮುಚ್ಚಿ, ಹೊರಗಿನಿಂದ ಚಿಲಕ ಹಾಕಿಬಿಡುತ್ತಿದ್ದಳು. ಇವತ್ತೂ ಹಾಗೇ ಆಯಿತು.

**ಆದರೆ, ಮೋನು ಪಾಪು ಅಳಲಿಲ್ಲ;** ಚೀರಾಡಲಿಲ್ಲ. ಆದರೆ, ಸಂಜೆಯ ಹೊತ್ತು ರಂಭತ್ತೆ ಲೋಟದಲ್ಲಿ ಹಾಲು ತುಂಬಿಸಿಕೊಂಡು ಕುಡಿಯೋ ಕಂದಾ, ಎನ್ನುತ್ತಾ ಹತ್ತಿರ ಬಂದಾಗ ಮಾತ್ರ ಅವರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ ತನ್ನ ಕೋಪವನ್ನು ತೋರಿಸಿಬಿಟ್ಟಿದ್ದ. ಮೋನು ಪಾಪು ಯಾವಾಗಲೂ ಹಾಗೆಯೇ. ತನ್ನ ಇಷ್ಟದಂತೆ ನಡೆಯದಾಗ ಅವನು ಎಂದೂ ಅಳುತ್ತಿರಲಿಲ್ಲ. ಗಲಾಟೆ ಮಾಡುತ್ತಿರಲಿಲ್ಲ. ಆ ದಿನವಿಡೀ ಉಪವಾಸ ಇದ್ದು ತನ್ನ ಪ್ರತಿಭಟನೆಯನ್ನು ತೋರಿಸುತ್ತಿದ್ದ.

**ಎಷ್ಟೇ ಕಷ್ಟ ಬಂದರೂ ಸುಳ್ಳು ಹೇಳಲಾರೆ :** ಮೋನುವಿನ ತಾಯಿ ಪುತಲೀಬಾಯಿಯವರು ಪ್ರತಿ ಮಳೆಗಾಲದ ಚಾತುರ್ಮಾಸದಲ್ಲಿ ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸುತ್ತಿದ್ದರು. ಜ್ವರ ಬಂದ ದಿನಗಳಲ್ಲೂ ಸೂರ್ಯೋದಯವನ್ನು ಕಾಣದೆ ಆಹಾರ ಮುಟ್ಟುತ್ತಿರಲಿಲ್ಲ.



ಒಂದು ದಿನ ಆಕಾಶದಲ್ಲಿ ದಟ್ಟ ಮೋಡಗಳು ತೇಲುತ್ತಿದ್ದವು. ಸೂರ್ಯೋದಯದ ಸಮಯವಾಗಿದ್ದರೂ ಸೂರ್ಯ ಕಾಣಿಸುತ್ತಿರಲಿಲ್ಲ. ತಾಯಿಯನ್ನು ಬೇಗ ಊಟ ಮಾಡಿಸುವ ಒಂದೇ ಆಸೆಯಿಂದ ಮೋನು ಪಾಪು ಉಪಾಯ ಮಾಡಿದ. ತಾಯಿಗೆ ಕೇಳಿಸುವಂತೆ ಗಟ್ಟಿಯಾಗಿ, ಓ ಸೂರ್ಯ ಕಾಣಿಸಿದ ಸೂರ್ಯ ಉದಯಿಸಿದ ಎಂದು ಸುಳ್ಳೇ ಸುಳ್ಳು ಕಿರುಚುತ್ತಾ ಒಳಕೋಣೆಗೆ ಧಾವಿಸಿ ಬಂದ, ಆದರೆ ಮಗ ಸುಳ್ಳು ಹೇಳುತ್ತಿದಾನೆಂಬುದು ತಾಯಿ ತಿಳಿದುಬಿಟ್ಟಿತ್ತು, ಮಳೆಗಾಲದ ದಿನಗಳಲ್ಲಿ, ಕಪ್ಪು ಮೋಡಗಳು ಕವಿದಿರುವಾಗ ಸೂರ್ಯ ಕಾಣಲು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ಮಗನಿಗೆ ಬುದ್ಧಿ ಕಲಿಸಲು ಅವರೂ ಒಂದು ಉಪಾಯ ಮಾಡಿದರು. ತಮ್ಮ ಬಲಗೈಯನ್ನು ಮುಂದಕ್ಕೆ ಚಾಚಿ ಹೇಳಿದರು, ಮೋನು, ನನ್ನ ಬಲಗೈಯನ್ನು ಚಾಚಿಕೊಂಡು ಕಣ್ಣು ನಾನು ಮುಚ್ಚಿಕೊಳ್ಳುವೆ. ಸೂರ್ಯ ಉದಯಿಸಿದ್ದನ್ನು ನೀನು ನೋಡಿದ್ದು ನಿಜವಾಗಿದ್ದರೆ ನನ್ನ ಕೈಯ್ಯನ್ನು ನಿನ್ನ ಬಲಗೈಯಲ್ಲಿ ಮುಟ್ಟಬೇಕು. ಸುಳ್ಳು ಹೇಳಿದ್ದರೆ ಎಡಗೈಯ್ಯಲ್ಲಿ ಮುಟ್ಟಬೇಕು. ನೀನು ಹೇಳಿದ್ದು ನಿಜವೋ ಸುಳ್ಳೋ ಎಂಬುದು ಕಣ್ಣು ಮುಚ್ಚಿಕೊಂಡಿರುವ ನನಗೆ ಕಾಣಿಸುವುದಿಲ್ಲ' ಎಂದು ಹೇಳಿ ಕಣ್ಣು ಮುಚ್ಚಿಕೊಂಡರು. ಮೋನು ಪಾಪುವಿಗೆ ತನ್ನ ತಪ್ಪಿನ ಅರಿವಾಗಿತ್ತು. ತಾಯಿಯ ಕೈ ಮುಟ್ಟಲು ಭಯವಾಯಿತು. ಬಹಳ ಹೊತ್ತಾದರೂ ಮೋನು ಪಾಪು ತಮ್ಮ ಕೈಯ್ಯನ್ನು ಮುಟ್ಟದಿದ್ದಾಗ ತಾಯಿಗೆ ಸಂತೋಷವಾಯಿತು. ತಪ್ಪನ್ನು ಒಪ್ಪಿಕೊಂಡ ಮಗನ ಬಗ್ಗೆ ಹೆಮ್ಮೆ ಅನ್ನಿಸಿತು. ಮುಚ್ಚಿದ್ದ ತಮ್ಮ ಕಣ್ಣುಗಳನ್ನು ತೆರೆದು, ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಗು ಎಂದು ಹೇಳಿ ಪಾಪುವನ್ನು ಎದೆಗೆ ಅಪ್ಪಿಕೊಂಡರು.

ಮೋನುಪಾಪ ಅಂದೆ ಶಪಥ ಮಾಡಿಬಿಟ್ಟಿದ್ದನು. ಎಷ್ಟೇ ಕಷ್ಟ ಎದುರಾದರೂ ಇನ್ನು ಮುಂದೆ ಸುಳ್ಳು ಹೇಳುವುದಿಲ್ಲ

**ಪರೀಕ್ಷೆಯಲ್ಲಿ ನಕಲು ಮಾಡಲಾರೆ:** ಮೋಹನನು ರಾಜಕೋಟೆಯಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲೊಮ್ಮೆ ಗೈಲ್ಸ್ ಶಿಕ್ಷಣಾಧಿಕಾರಿಯು ಶಾಲೆಯ ತಪಾಸಣೆಗೆಂದು ಬಂದಿದ್ದರು. ಎಂಬ ಬ್ರಿಟಿಷ್ ವಿದ್ಯಾರ್ಥಿಗಳ ಅಕ್ಷರ ಜ್ಞಾನವನ್ನು ಪರಿಶೀಲಿಸುವ ಸಲುವಾಗಿ ಐದು ಇಂಗ್ಲಿಷ್ ಪದಗಳನ್ನು ಹೇಳಿ, ತಪ್ಪಿಲ್ಲದೆ ಬರೆಯುವಂತೆ ಸೂಚಿಸಿದ್ದರು. ಮೋಹನನಿಗೆ ಕೆಟಲ್ KETTLE ಎಂಬ ಇಂಗ್ಲಿಷ್ ಪದವನ್ನು ಸರಿಯಾಗಿ ಬರೆಯಲು ಬರುತ್ತಿದ್ದರೂ, ಬರೆಯುವಾಗ ಒಂದು ಅಕ್ಷರವನ್ನು ತಪ್ಪಾಗಿ ಬರೆದುಬಿಟ್ಟಿದ್ದನು. ಅವನು ತಪ್ಪಾಗಿ ಬರೆದಿರುವುದು ತರಗತಿಯ ಶಿಕ್ಷಕರ ಕಣ್ಣಿಗೆ ಬಿದ್ದಿತ್ತು. ತನ್ನ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಸಿರುವೆ ಎಂಬುದಾಗಿ ಆ ಬ್ರಿಟಿಷ್ ಶಿಕ್ಷಣಾಧಿಕಾರಿಯವರಿಗೆ ಗೊತ್ತು ಮಾಡಿ ಮೆಚ್ಚುಗೆ ಗಳಿಸಬಯಸಿದ್ದರು ಆ ಶಿಕ್ಷಕರು, ಅವರು ಮೋಹನನ ಬಳಿಗೆ ಬಂದು ನಿಂತರು. ತಮ್ಮ ಕಾಲಿನ ಬೆರಳುಗಳ ತುದಿಯಿಂದ ಮೋಹನನ ಕಾಲನ್ನು ತಡವಿ, ಪಕ್ಕದ ಹುಡುಗನ ಬರಹವನ್ನು ನೋಡಿ ತಪ್ಪಾಗಿ ಬರೆದ ಪದವನ್ನು ತಿದ್ದಿಕೊಳ್ಳುವಂತೆ ಕಣ್ಣುಗಳಲ್ಲಿ– ಸೂಚಿಸಿದ್ದರು. ಆದರೆ, ಬೇರೆಯವರ ಉತ್ತರಪತ್ರಿಕೆಯಿಂದ ನಕಲು ಮಾಡಲು ಮೋಹನನು ಒಪ್ಪಲಿಲ್ಲ.

ತಮ್ಮ ಸಲಹೆಯನ್ನು ತಿರಸ್ಕರಿಸಿದ ಮೋಹನನ ಬಗ್ಗೆ ಶಿಕ್ಷಕರಿಗೆ ಬಹಳ ಸಿಟ್ಟು ಬಂದಿತ್ತು.ಪರೀಕ್ಷೆ ಮುಗಿದ ಬಳಿಕ ಮೋಹನನನ್ನು ಕರೆಸಿಕೊಂಡು ಗದರಿಸಿದ್ದರು. ಆದರೆ, ಮೋಹನನಿಗೆ ಮಾತ್ರ ಶಿಕ್ಷಕರ ಮೇಲಿನ ಗೌರವ ಕಡಮೆಯಾಗಲಿಲ್ಲ. ಯಾಕೆಂದರೆ, ಹಿರಿಯರ ಒಳ್ಳೆಯತನವನ್ನು ಮಾತ್ರ ಕಲಿಯಬೇಕೇ ಹೊರತು, ಅವರ ಗುಣಾವಗುಣಗಳನ್ನು ಅಲ್ಲ' ಎಂದು ತಾಯಿ ಹೇಳುತ್ತಿದ್ದ ಮಾತನ್ನು ಮೋಹನನು ಚಾಚು ತಪ್ಪದೆ ಪಾಲಿಸುತ್ತಿದ್ದನು.

# ರಾಷ್ಟ್ರ ಧ್ವಜವು ರಾಷ್ಟ್ರದ ಭಾವೈಕ್ಯದ ಸಂಕೇತ



• ಉದಯವಾಹಿನಿ, ಬೆಂಗಳೂರು


ರಾಷ್ಟ್ರ ಧ್ವಜವು ರಾಷ್ಟ್ರದ ಭಾವೈಕ್ಯದ ಸಂಕೇತವಾಗಿದೆ ಆಗಸ್ಟ್ 15 ರಂದು 79ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ ರಾಷ್ಟ್ರಧ್ವಜವನ್ನು ಪ್ರತಿ ಮನೆಯಲ್ಲಿ, ಶಾಲೆಗಳಲ್ಲಿ ಹೆಮ್ಮೆಯಿಂದ ಪ್ರದರ್ಶಿಸಲಾಗುತ್ತದೆ; ಆದರೆ ಅದೇ ದಿನ, ಅದೇ ಕಾಗದದ/ಪ್ಲಾಸ್ಟಿಕ್‌ನ ಸಣ್ಣ ಸಣ್ಣ ರಾಷ್ಟ್ರಧ್ವಜಗಳು ರಸ್ತೆಗಳು, ಕಸ ಮತ್ತು ಚರಂಡಿಗಳಲ್ಲಿ ಹರಿದ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬರುತ್ತದೆ. ಪ್ಲಾಸ್ಟಿಕ್ ಧ್ವಜಗಳು ಬೇಗನೇ ನಾಶವಾಗುವುದಿಲ್ಲ, ಆದ್ದರಿಂದ ಅನೇಕ ದಿನಗಳವರೆಗೆ ಈ ರಾಷ್ಟ್ರಧ್ವಜಗಳ ಅವಮಾನವನ್ನು ನೋಡಬೇಕಾಗುತ್ತದೆ. ಹಾಗಾಗಿ ಸರಕಾರದ ಅಧಿನಿಯಮಗಳನ್ನು ಧಿಕ್ಕರಿಸಿ ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡುವ ಮಾರಾಟಗಾರರು ಹಾಗೂ ಧ್ವಜ ಸಂಹಿತೆ ಪ್ರಕಾರ ಧ್ವಜವನ್ನು ಗೌರವಿಸದ ಜನರು, ಸಂಸ್ಥೆಗಳು ಮತ್ತು ಗುಂಪುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಬೆಂಗಳೂರಿನ ಜಿಲ್ಲಾಧಿಕಾರಿಗಳಿಗೆ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಮನವಿಯನ್ನು ನೀಡಲಾಯಿತು. ಈ ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅಡ್ವೋಕೇಟ್ ಕೃಷ್ಣಸ್ವಾಮಿ ಕಣವೆ, ಅಡ್ವೋಕೇಟ್ ಶಕುಂತಲಾ ಶೆಟ್ಟಿ, ಹಿಂದೂ ಜನಜಾಗೃತಿ ಸಮಿತಿಯ ಸೌ. ಭವ್ಯ ಗೌಡ, ರಾಷ್ಟ ರಕ್ಷಣಾಪಡೆಯ ಶ್ರೀ ಪ್ರವೀಣ್, ಶ್ರೀ ಸೂರ್ಯ, ಶ್ರೀರಾಮಸೇನೆಯ ಪ್ರಮುಖರು, ವಕೀಲರು ಸೇರಿದಂತೆ ಹಲವಾರು ಹಿಂದುತ್ವನಿಷ್ಠರು ಉಪಸ್ಥಿತರಿದ್ದರು.

# ನಾಡ ಜನತೆಯ ದಿಕ್ಕು ತಪ್ಪಿಸುವುದು ಸಲ್ಲ

■ ಶ್ರೀ. ಮೋಹನ ಗೌಡ

ಸಚಿವ ಹೆಚ್ ಸಿ ಮಹದೇವಪ್ಪನವರು ಮಂಡ್ಯದ ಶ್ರೀರಂಗಪಟ್ಟಣದ ಕಾರ್ಯಕ್ರಮವೊಂದರಲ್ಲಿ ಮಾತನಾಡಿ ಕನ್ನಂಬಾಡಿ ಕಟ್ಟೋದಕ್ಕೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ರು. ಆದರೆ, ಈಗ ಅದನ್ನು ಹೇಳೋಕೆ ಯಾರಿಗೂ ಧೈರ್ಯ ಇಲ್ಲ. ಕೆ.ಆರ್. ಎಸ್ ಗೇಟ್ ಹೆಬ್ಬಾಗಿಲಿನಲ್ಲಿ ಈಗಲೂ ಅದನ್ನು ಕಾಣಬಹುದು ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಇಂದು ಈ ಹೇಳಿಕೆಗೆ ನಾಡಿನಾದ್ಯಂತ ವಿರೋಧ ವ್ಯಕ್ತವಾಗುತ್ತಿರುವಾಗ ಇಂದು ಪುನಃ ಅವರ ಹೇಳಿಕೆಯನ್ನು ತಿರುಚಿ 1911 ರಲ್ಲಿ ಕೃಷ್ಣರಾಜ ಒಡೆಯರ್ ಅಣೆಕಟ್ಟು ಕಟ್ಟುವಾಗ ಅಲ್ಲಿ 1794 ರ ಪರ್ಷಿಯನ್ ಭಾಷೆಯ ಕಲ್ಲು ಸಿಗುತ್ತದೆ, ಅದನ್ನು ನೋಡಿದಾಗ ಟಿಪ್ಪುರವರಿಗೆ ಆಗಲೇ ಹೊಲಗಳಿಗೆ ನೀರು ಕೊಡಬೇಕೆಂಬ ಚಿಂತನೆ ಇದ್ದಿರಬಹುದು ಎಂದು ತಿರುಚಿದ್ದಾರೆ. ಸಚಿವರ ಈ ಹೇಳಿಕೆ 'ಕಳ್ಳನಿಗೊಂದು ಪಿಳ್ಳೆ ನೆವ'ದಂತಿದ್ದು ಚಿಕ್ಕ ಮಕ್ಕಳು ಕೇಳಿದರೂ ನಗೆಪಾಟಲಿಗೀಡಾಗುವಂತಿದೆ. ರಾಜ್ಯದ ಇಂತಹ ಮಹತ್ತರ ಸ್ಥಾನದಲ್ಲಿದ್ದುಕೊಂಡು ಜನರನ್ನು ಈ ರೀತಿ ಮೂರ್ಖರನ್ನಾಗಿಸುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಸಚಿವರ ನಡೆ ಅತ್ಯಂತ ಖಂಡನೀಯ, ಸಚಿವರು ಇದಕ್ಕೆ ಕೂಡಲೇ ಕ್ಷಮೆಯಾಚಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರರಾದ ಶ್ರೀ. ಮೋಹನ ಗೌಡ ಖಂಡಿಸಿದ್ದಾರೆ.



ಸಚಿವರು ತಮ್ಮ ಹೇಳಿಕೆಯಲ್ಲಿ, ಟಿಪ್ಪು ಸುಲ್ತಾನನು ಮಸೀದಿಯ ಅಜಾನ್ ಜೊತೆಗೆ ಒಂದು ಕಡೆ ದೇವಸ್ಥಾನದ ಘಂಟೆಯ ನಾದವನ್ನು ಸಹ ಕೇಳುತ್ತಿದ್ದನು, ಅವನು ಧರ್ಮ ಸಹಿಷ್ಣುವಾಗಿದ್ದ ಎಂದಿದ್ದಾರೆ. ಅಸಲಿಗೆ ಟಿಪ್ಪು ಸುಲ್ತಾನ್ ಒಬ್ಬ ಮತಾಂಧ ಆಗಿದ್ದ, ಅವನು ಶ್ರೀರಂಗಪಟ್ಟಣದ ಮೂಡಲ ಆಂಜನೇಯ ಸ್ವಾಮಿ ದೇವಸ್ಥಾನವನ್ನು ನಾಶ ಮಾಡಿ ಆ ಮೂರ್ತಿಯನ್ನು ನದಿಗೆ ಎಸೆದು ಜಾಮಿಯಾ ಮಸೀದಿ ನಿರ್ಮಾಣ ಮಾಡಿದ್ದ. ಅದೇ ರೀತಿಯಲ್ಲಿ ಕೊಡಗಿನ ಮೇಲೆ ದಾಳಿ ಮಾಡಿ ಭಾಗಮಂಡಲದ ಅನೇಕ ದೇವಸ್ಥಾನಗಳು ನಾಪೋಕಲಿನ ಹಲವು ದೇವಸ್ಥಾನಗಳನ್ನು ನಾಶ ಮಾಡಿದ್ದ.

> **ಸಾವಿರಾರು ಹಿಂದೂಗಳನ್ನು ಶ್ರೀರಂಗಪಟ್ಟಣಕ್ಕೆ ಕರೆತಂದು ಮತಾಂತರ ಮಾಡಿದ್ದ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಳಿ ಮಾಡಿ ಅನೇಕ ಹಿಂದೂ ದೇವಸ್ಥಾನಗಳನ್ನು ಅದಲ್ಲದೆ ಚರ್ಚ್‌ಗಳನ್ನು ನಾಶ ಮಾಡಿದ್ದ. ತನ್ನ ಆಡಳಿತ ಭಾಷೆ ಕನ್ನಡ ತೆಗೆದು ಉರ್ದು ಮತ್ತು ಪರ್ಷಿಯನ್ ಭಾಷೆಯನ್ನಾಗಿ ಮಾಡಿದ್ದ, ಹೀಗೆ ಮತಾಂಧ, ದೇವಸ್ಥಾನಗಳ ಮೂರ್ತಿ ಭಂಜಕ ಟಿಪ್ಪು ಸುಲ್ತಾನನ ವೈಭವೀಕರಣ ಮಾಡುವುದು ನಾಡಿನ ಇತಿಹಾಸಕ್ಕೆ ಮಾಡಿದ ಅಪಮಾನವಾಗಿದೆ. ಹೆಚ್ ಸಿ ಮಹದೇವಪ್ಪರವರ ಹೇಳಿಕೆ, 'ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬಂತಿದೆ, ಈ ರೀತಿ ನಾಡಿನ ಜನತೆಯ ದಿಕ್ಕು ತಪ್ಪಿಸಲು ಸಾಧ್ಯವಿಲ್ಲ, ಕೂಡಲೇ ಕ್ಷಮೆಯಾಚಿಸಬೇಕು**

# ಕಾಲ್ಬೆರಳ ಉಗುರು ಹಳದಿಯಾಗೋದು ಯಾಕೆ?

ಕೆಲವರ ಕಾಲಿನ ಉಗುರು ಹಳದಿಯಾಗಿರೋದನ್ನು ನೀವು ಗಮನಿಸಿರಬಹುದು. ಉಗುರು ಈ ರೀತಿಯಾಗಲು ಕಾರಣವೇನು, ಇದರಿಂದ ಉಗುರುಗಳನ್ನು ಯಾವ ರೀತಿ ರಕ್ಷಿಸಬಹುದು ಎನ್ನುವುದನ್ನು ತಿಳಿಯೋಣ. ಮಳೆಗಾಲದಲ್ಲಿ ನಿಮ್ಮ ಕಾಲ್ಬೆರಳ ಉಗುರುಗಳು ಹಳದಿ, ಮೃದು ಅಥವಾ ಸ್ವಲ್ಪ ವಿಭಿನ್ನವಾಗಿ ಕಾಣುವುದನ್ನು ನೀವು ಗಮನಿಸಿದ್ದೀರಾ? ಇದು ಅನೇಕ ಜನರು ಅನುಭವಿಸುವ ಸಂಗತಿಯಾಗಿದೆ, ವಿಶೇಷವಾಗಿ ಒದ್ದೆಯಾದ ಬೂಟುಗಳು ಸಾಕ್ಸ್‌ಗಳಲ್ಲಿ ಪಾದಗಳು ಹೆಚ್ಚು ಕಾಲ ತೇವವಾಗಿರುವಾಗ. ಎಲ್ಲಾ ಕೊಚ್ಚೆಗುಂಡಿಗಳು, ಆರ್ದ್ರತೆ ಮತ್ತು ಮುಚ್ಚಿದ ಪಾದರಕ್ಷೆಗಳೊಂದಿಗೆ, ಮಳೆಗಾಲವು ನಿಮ್ಮ ಕಾಲ್ಬೆರಳ ಉಗುರು ಆರೋಗ್ಯದ ಮೇಲೆ ಸದ್ದಿಲ್ಲದೆ ಪರಿಣಾಮ ಬೀರಬಹುದು. ನಿಮ್ಮ ಉಗುರುಗಳು ದುರ್ಬಲವಾಗಿದ್ದರೆ ಅಥವಾ ಬಣ್ಣದಲ್ಲಿ ಬದಲಾಗುತ್ತಿದ್ದರೆ, ಅದು ಕೇವಲ ಕಾಲೋಚಿತ ಬದಲಾವಣೆಗಿಂತ ಹೆಚ್ಚಾಗಿರಬಹುದು, ಅದು ನಿಮ್ಮ ದೇಹವು ಸ್ವಲ್ಪ ಗಮನವನ್ನು ಕೇಳುತ್ತಿದೆ.

**ಕಾಲ್ಬೆರಳ ಉಗುರು-ಶಿಲೀಂಧ್ರ-ಸೋಂಕು:** ನಿಮ್ಮ ಉಗುರುಗಳು ಕೆರಾಟಿನ್‌ನಿಂದ ಮಾಡಲ್ಪಟ್ಟಿದೆ. ನೀರನ್ನು ಹೀರಿಕೊಳ್ಳುವ ಸಾಧ್ಯತೆಯನ್ನುಂಟು ಮಾಡುತ್ತದೆ. ಮಳೆಗಾಲದಲ್ಲಿ, ನಿಮ್ಮ ಪಾದಗಳು ಹೆಚ್ಚಾಗಿ ನೀರಿಗೆ ಒಡ್ಡಿಕೊಂಡಾಗ, ಕೊಚ್ಚೆಗುಂಡಿಗಳು ಮತ್ತು ಮಣ್ಣಿಗೆ ಒಡ್ಡಿಕೊಳ್ಳುತ್ತದೆ. ಬೆವರು ಮತ್ತು ಇಕ್ಕಟ್ಟಾದ ಬೂಟುಗಳು, ಉಗುರುಗಳು ಮೃದುವಾಗುತ್ತವೆ, ಬಣ್ಣ ಕಳೆದುಕೊಳ್ಳುತ್ತವೆ ಮತ್ತು ಸೋಂಕಿನ ಅಪಾಯದಲ್ಲಿರುತ್ತವೆ. ಒನಿಕೊಮೈಕೋಸಿಸ್ ನಂತಹ ಶಿಲೀಂಧ್ರ ಸೋಂಕುಗಳು ಸಾಮಾನ್ಯವಾಗಿ ಮಳೆಗಾಲದಲ್ಲಿ ಉಲ್ಬಣಗೊಳ್ಳುತ್ತವೆ. ಇದು ಉಗುರನ್ನು ದಪ್ಪವಾಗಿಸುತ್ತದೆ, ಹಳದಿ ಅಥವಾ ಕಂದು ಬಣ್ಣಕ್ಕೆ ತಿರುಗಿಸುತ್ತದೆ.

> **ನೀವು ಯಾವಾಗ ಚಿಂತಿಸಬೇಕು?**
> **ಕಾಲ್ಬೆರಳ ಉಗುರು ಸೋಂಕು ಕಾಲ್ಬೆರಳ ಉಗುರುಗಳು ಹಳದಿ, ಹಸಿರು ಅಥವಾ ಕಂದು ಬಣ್ಣಕ್ಕೆ ತಿರುಗುವುದು ಉಗುರುಗಳು ದಪ್ಪವಾಗುವುದು, ಪುಡಿಪುಡಿಯಾಗುವುದು ಉಗುರಿನಿಂದ ನಿರಂತರ ದುರ್ವಾಸನೆ ಕಾಲ್ಬೆರಳ ಉಗುರಿನ ಬಳಿ ನೋವು ಅಥವಾ ಮೃದುತ್ವ ಸುತ್ತಮುತ್ತಲಿನ ಚರ್ಮದಿಂದ ತುರಿಕೆ, ಕೆಂಪು ಅಥವಾ ಕೀವು ಸ್ರವಿಸುವಿಕೆ ಇವು ಶಿಲೀಂಧ್ರ ಅಥವಾ ಬ್ಯಾಕ್ಟೀರಿಯಾದ ಸೋಂಕಿನ ಲಕ್ಷಣಗಳಾಗಿರಬಹುದು ಚಿಕಿತ್ಸೆ ನೀಡದಿದ್ದರೆ ಅದು ಹೆಚ್ಚಾಗಬಹುದು.**



**ಮುಚ್ಚಿದ ಬೂಟುಗಳು:** 2022ರ ಅಧ್ಯಯನದ ಪ್ರಕಾರ, ತೇವಾಂಶ ಮತ್ತು ಮುಚ್ಚಿದ ಟೋ ಬೂಟುಗಳಿಗೆ ಒಡ್ಡಿಕೊಳ್ಳುವುದರಿಂದ ಉಗುರು ಶಿಲೀಂಧ್ರದ ಅಪಾಯ ಗಮನಾರ್ಹವಾಗಿ ಹೆಚ್ಚಾಗುತ್ತದೆ. ಆರ್ದ್ರ ವಾತಾವರಣವು ಉಗುರಿನ ಕೆರಾಟಿನ್ ರಚನೆಯನ್ನು ಮೃದುಗೊಳಿಸುತ್ತದೆ, ಶಿಲೀಂಧ್ರಗಳು ಹೆಚ್ಚು ಸುಲಭವಾಗಿ ಭೇದಿಸಿ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ. ಮಳೆ ಇಲ್ಲದಿರುವಾಗಲೂ, ಉಸಿರಾಡಲು ಸಾಧ್ಯವಾಗದ ಬೂಟುಗಳಲ್ಲಿ ದಿನವಿಡೀ ನಡೆಯುವುದರಿಂದ ಬೆವರು ಸಂಗ್ರಹವಾಗುತ್ತದೆ. ಇದು ಉಗುರು ಚರ್ಮವನ್ನು ಮೃದುಗೊಳಿಸುತ್ತದೆ, ಅವುಗಳನ್ನು ಸೋಂಕಿಗೆ ಗುರಿಯಾಗಿಸುತ್ತದೆ.

**ಕಳಪೆ ಪಾದದ ಆರೈಕೆ:** ಒದ್ದೆಯಾದ ಸಾಕ್ಸ್ ಬೂಟುಗಳು ಶಿಲೀಂಧ್ರಕ್ಕೆ ಸಂತಾನೋತ್ಪತ್ತಿ ಮಾಡುವ ನೆಲವನ್ನು ಸೃಷ್ಟಿಸುತ್ತವೆ. ಶಿಲೀಂಧ್ರಗಳು ಕತ್ತಲೆಯಾದ, ತೇವಾಂಶವುಳ್ಳ, ಬೆಚ್ಚಗಿನ ವಾತಾವರಣದಲ್ಲಿ ಬೆಳೆಯುತ್ತವೆ. ನಿಮ್ಮ ಪಾದಗಳನ್ನು ಸಂಪೂರ್ಣವಾಗಿ ಒಣಗಿಸಲು ವಿಫಲವಾಗುವುದು, ಪಾದದ ನೈರ್ಮಲ್ಯವನ್ನು ನಿರ್ಲಕ್ಷಿಸುವುದು ಅಥವಾ ಪ್ರತಿದಿನ ಅದೇ ಒದ್ದೆಯಾದ ಬೂಟುಗಳನ್ನು ಬಳಸುವುದು ಉಗುರು ಹಾನಿ ಸೋಂಕಿನ ಅಪಾಯವನ್ನು ಹೆಚ್ಚಿಸಬಹುದು.

# ಕೆಎಂಎಫ್ ಪಟ್ಟ: ಸಿಎಂ- ಡಿಸಿಎಂ ಬಣ ಕಣ್ಣು

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದ ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಸಿದ್ದರಾಮಯ್ಯ, ಡಿಕೆಶಿ ಬಣದ ನಡುವೆ ಪೈಪೋಟಿ ನಡೆಯುವ ಲಕ್ಷಣಗಳು ಕಂಡುಬರುತ್ತಿವೆ. ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಅಧ್ಯಕ್ಷ ಡಿ.ಕೆ. ಸುರೇಶ್, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಹಾಲು ಒಕ್ಕೂಟದ (ರಾಬಕೊವಿ) ಅಧ್ಯಕ್ಷ ರಾಘವೇಂದ್ರ ಹಿಟ್ನಾಳ್, ಕೋಲಾರ ಹಾಲು ಒಕ್ಕೂಟದ (ಕೋಮುಲ್) ಅಧ್ಯಕ್ಷ ಕೆ.ವೈ. ನಂಜೇಗೌಡ ಅವರು ಕೆಎಂಎಫ್ ಅಧ್ಯಕ್ಷ ಪಟ್ಟಕ್ಕೆ ಪ್ರಬಲ ಆಕಾಂಕ್ಷಿಗಳಾಗಿ ಮುಂಚೂಣಿಯಲ್ಲಿದ್ದಾರೆ. ಮೇಲ್ನೋಟಕ್ಕೆ ಈ ಮೂವರ ನಡುವೆ ತ್ರಿಕೋನ ಪೈಪೋಟಿಯಂತೆ ಕಂಡರೂ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಕೆಶಿ ಸಹೋದರ ಡಿ.ಕೆ. ಸುರೇಶ್ ಮತ್ತು ಸಿದ್ದರಾಮಯ್ಯ ಅವರ ಆಪ್ತ ರಾಘವೇಂದ್ರ ಹಿಟ್ನಾಳ್ ನಡುವೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಯುವುದು ಬಹುತೇಕ ಖಚಿತ. ರಾಜಕೀಯ ಅಂಗಳದ ಶೀತಲ ಸಮರ ಈ ಚುನಾವಣೆ ಮೂಲಕ ಸಹಕಾರ ರಂಗಕ್ಕೂ ಕಾಲಿಡುವಂತೆ ಕಾಣುತ್ತಿದೆ ಎಂದು ಮೂಲಗಳು ಹೇಳಿವೆ.




• ಉದಯವಾಹಿನಿ, ಬೆಂಗಳೂರು

# ಗುರುರಾಯರ 354ನೇ ಆರಾಧನಾ ಮಹೋತ್ಸವಕ್ಕೆ ಕ್ಷಣಗಣನೆ

ಕಲಿಯುಗ ಕಾಮಧೇನು ಶ್ರೀ ರಾಘವೇಂದ್ರ, ಗುರು ಸಾರ್ವಭೌಮರ 354ನೇ ಆರಾಧನಾ ಸಪ್ತರಾತ್ರೋತ್ಸವದ ಮಹೋತ್ಸವವನ್ನು ಅತ್ಯಂತ ಸಂಭ್ರಮ ವೈಭವದಿಂದ ಆಚರಿಸಲು ಪರಮ ಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಗ್ರಹದ ಮೇರೆಗೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಶ್ರೀಮಠದ ಸಿಬ್ಬಂದಿಗಳ ಸ್ವಯಂ ಸೇವಕರ, ಭಕ್ತರ ಸಹಕಾರದೊಂದಿಗೆ ನೆರವೇರಲಿದೆ.

ಇತ್ತೀಚೆಗೆ ಸ್ವಯಂ ಸೇವಕರ ಸಭೆಯಲ್ಲಿ ವಿಶೇಷ ಮಾಹಿತಿಗಳನ್ನು ಚರ್ಚಿಸಲಾಗಿ ಒಂದು ವಾರಗಳ ಕಾಲ ನಡೆಯುವ ಸಪ್ತರಾತ್ರೋತ್ಸವ ಆರಾಧನಾ ಮಹೋತ್ಸವಕ್ಕೆ ಸಹಸ್ರಾರು ಭಕ್ತರು ಸನ್ನಿಧಿಗೆ ಆಗಮಿಸುವುದರಿಂದ ಪೋಲಿಸ್ ಬಂದೋ ಬಸ್ತ್ ವ್ಯವಸ್ಥೆಗಾಗಿ ಕೋರಲಾಗಿದೆ ಹಾಗೂ ಭಕ್ತರಿಗಾಗಿ ಗುರುರಾಯರ ದರ್ಶನ ಪಡೆಯಲು ಮತ್ತು ಪ್ರಸಾದವನ್ನು ಸ್ವೀಕರಿಸಲು ಅಚ್ಚುಕಟ್ಟಾದ (ಕ್ಯೂ ಸಿಸ್ಟಮ್ಸ್ ) ಸಾಲಾಗಿ ಬರಲು ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಹಾಗೂ ಗುರುರಾಯರ ಸೇವೆಗಾಗಿ ಭಕ್ತರೊಬ್ಬರ ಸಹಕಾರದಿಂದ ಹೊರಬಾಗಿಲಿನ ಮುಂಭಾಗದ ದ್ವಾರದ ಬಲಭಾಗದಲ್ಲಿ ಎಲ್ ಇ ಡಿ ಬಿಗ್ ಸ್ಕ್ರೀನ್ ನಲ್ಲಿ ಗುರುರಾಯರ ದರ್ಶನ ಪಡೆಯಲು ಭಕ್ತರಿಗಾಗಿ ಅಳವಡಿಸಲಾಗುತ್ತಿದೆ ಎಂದು ಆರ್ ಕೆ ವಾದಿಂದ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು. ಈ ಆರಾಧನಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ: ಧಾರ್ಮಿಕ ಕಾರ್ಯಕ್ರಮಗಳು:



ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರಿಂದ ಆಗಸ್ಟ್ 6 ರಿಂದ 8ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಶ್ರೀಮದ್ರಾಮಾಯಣ ಪ್ರವಚನ. ಆಗಸ್ಟ್ 8 ರಂದು ಸಂಜೆ 6:30ಕ್ಕೆ ಶ್ರೀಪಾದಂಗಳವರಿಂದ ಆರಾಧನಾ ಸಪ್ತರಾತ್ರೋತ್ಸವದ ಉದ್ಘಾಟನೆ, ಗೋಪೂಜೆ ಶ್ರೀ ಲಕ್ಷ್ಮೀ ಪೂಜೆ, ಧನ ಧಾನ್ಯ ಪೂಜೆ ನೆರವೇರಲಿದೆ. ಆಗಸ್ಟ್ 9 ರಂದು ಬೆಳಿಗ್ಗೆ 6ಕ್ಕೆ ಋಗ್ವೇದ, ಯಜುರ್ವೇದ ಹಾಗೂ ನೂತನ ಉಪಾಕರ್ಮ ನಂತರ ಹುಣ್ಣಿಮೆಯ ಪ್ರಯುಕ್ತ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ನಡೆಯಲಿದೆ.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಪ್ರತಿದಿನ ಸಂಜೆ 7-00ಕ್ಕೆ) ಆಗಸ್ಟ್ 9- ಶ್ರೀ ಜಯತೀರ್ಥ ತಾಸಗಾಂವ್ ಮತ್ತು ಸಂಗಡಿಗರಿಂದ ದಾಸವಾಣಿ, ಆಗಸ್ಟ್ 10-ಕು|| ದಿವ್ಯ ಶ್ರೀ ರಂಗನಾಥನ್ ಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ವಾದನ, ಆಗಸ್ಟ್ 11-ಶ್ರೀಮತಿ ದೀಪಾ ಕಾಸರವಳ್ಳಿ ಮತ್ತು ಸಂಗಡಿಗರಿಂದ ದಾಸ ತರಂಗಿಣಿ, ಆಗಸ್ಟ್ 12-ಮೈಸೂರಿನ ಶ್ರೀಮತಿ ರಮಾಮಣಿ ಗುರುಪ್ರಸಾದ್ ಮತ್ತು ಸಂಗಡಿಗರಿಂದ ದಾಸರ್ಝೇಂಕಾರ, ಆಗಸ್ಟ್ 13-ಡಾ|| ರಾಯಚೂರು ಶೇಷಗಿರಿದಾಸ್ ಮತ್ತು ಸಂಗಡಿಗರಿಂದ ದಾಸಲಹರಿ, ಆಗಸ್ಟ್ 14-ಪ್ರಭಾತ್ ಆರ್ಟ್ಸ್ ಇಂಟರ್ನ್ಯಾಷನಲ್ ನ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ. ವಿಶೇಷವಾಗಿ

> **ರಾಜಬೀದಿ ಉತ್ಸವ**
> **ಆಗಸ್ಟ್ 12, ಬೆಳಗ್ಗೆ 8-00ಕ್ಕೆ ಜಯನಗರದ ರಾಜಬೀದಿಯಲ್ಲಿ ಶ್ರೀ ಗುರುರಾಯರ ಮಹಾರಥೋತ್ಸವವೂ ನೆರವೇರಲಿದೆ ಎಂದು ಶ್ರೀ ನಂದಕಿಶೋರ ಆಚಾರ್ಯರು ತಿಳಿಸಿದ್ದಾರೆ. ಈ ಆರಾಧನಾ ಸಂದರ್ಭದಲ್ಲಿ ಗುರುರಾಯರ ಸೇವೆಯಲ್ಲಿ ಭಾಗವಹಿಸುವಂತಹ ಭಕ್ತರು ಶ್ರೀಮಠದ ಆನ್‌ಲೈನ್ ಈ ವಾಟ್ಸಪ್ 9449133929 ನಂಬರ್ ಮುಖಾಂತರ ಸೇವೆ ಸಲ್ಲಿಸಿ ರಾಯರ ಶೇಷ ವಸ್ತ್ರಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿ ರಾಯರ ಪೂಜೆಯಲ್ಲಿ ಭಾಗವಹಿಸಿ ಗುರುರಾಯರ ಮಹಾರಥೋತ್ಸವ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಭಾಗವಹಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾಗಬಹುದು,**

# ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನಗರಸಭೆ ವತಿಯಿಂದ ವಿದ್ಯಾರ್ಥಿ ವೇತನ ವಿತರಣೆ

• ಉದಯವಾಹಿನಿ, ಅರಸೀಕೆರೆ




ಉದಯವಾಹಿನಿ ಚಿತ್ರ

2025 26 ನೇ ಸಾಲಿನ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ಎಸ್ ಎಫ್ ಸಿ ಯೋಜನೆ ಅನುದಾನದ ಅಡಿಯಲ್ಲಿ ಪರಿಶಿಷ್ಟ ಜಾತಿ ಮಕ್ಕಳ 74 ವಿದ್ಯಾರ್ಥಿಗಳ 4,36,500 ರೂಗಳು, ಪರಿಶಿಷ್ಟ ಪಂಗಡದ 11 ವಿದ್ಯಾರ್ಥಿಗಳಿಗೆ ಒಟ್ಟು 48,000 ರೂಗಳ ಸಹಾಯಧನ ಒಟ್ಟು 85 ವಿದ್ಯಾರ್ಥಿಗಳಿಗೆ ಒಟ್ಟು 4,84,500 ಅತಿ ಹೆಚ್ಚು ಅಂಕಗಳನ್ನುಗಳಿಸಿ ಉತ್ತೀರ್ಣರಾಗಿದ್ದ ಮಕ್ಕಳಿಗೆ ಅರಸೀಕೆರೆ ನಗರಸಭೆ ವತಿಯಿಂದ ದಾಖಲೆ ಪ್ರಮಾಣದ ಹಣವನ್ನು ವಿದ್ಯಾರ್ಥಿ ವೇತನವನ್ನಾಗಿ ನಗರದ ಮಕ್ಕಳು ಇನ್ನೂ ಹೆಚ್ಚಿನ ರೀತಿಯಲ್ಲಿ ಅಂಕಗಳನ್ನು ಪಡೆದು ಉತ್ತೀರ್ಣರಾಗಲು ನಗರಸಭೆ ವತಿಯಿಂದ ಸ್ಫೂರ್ತಿ ತುಂಬಲಾಗಿದೆ ಎಂದು ಅರಸಿಕೆರೆ ನಗರಸಭೆ ಅಧ್ಯಕ್ಷರಾದ ಎಮ್ ಸಮೀವುಲ್ಲಾ ಹೇಳಿದರು. ನಗರಸಭೆಯ ಕಚೇರಿ ಆವರಣದಲ್ಲಿ ವಿದ್ಯಾರ್ಥಿ ವೇತನ ವಿತರಣೆ

**ಮಕ್ಕಳು, ಪೋಷಕರಿಗೆ ಕಿವಿ ಮಾತು**

ಮಾಡಿ ಮಾತನಾಡಿದ ಅವರು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಕನಸು ನನಸು ಮಾಡಲು ಸಮಾಜದ ಅತ್ಯಂತ ಕೆಳಮಟ್ಟದ ಮಕ್ಕಳು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಮುಂದೆ ಬರಲು ಸಹಕಾರಿಯಾಗಬೇಕು ಹೀಗಾಗಿ ನಗರಸಭೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ ಅವರೊಂದಿಗೂ ಚರ್ಚಿಸಿ ಅರಸೀಕೆರೆ ನಗರದ ಮಕ್ಕಳಿಗೆ ಸಹಾಯವಾಗುವಂತೆ ಈ ಹೆಚ್ಚಿನ ಹಣವನ್ನು ನೀಡುತ್ತಿರುವುದಾಗಿ ಮುಂದೆ ಬರುವ ನಗರಸಭೆ ಅಧಿಕಾರಿಗಳಾಗಲಿ, ನಗರ ಸಭೆಯ ಅಧಿಕಾರ ನಡೆಸುವ ಸಂಬಂಧಪಟ್ಟವರಾಗಲಿ ಈ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯನ್ನು ಮುಂದೆ ಮುಂದುವರಿಸಿಕೊಂಡು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಕನಸು ನನಸು ಮಾಡಬೇಕೆಂದು ಎಮ್. ಸಮೀವುಲ್ಲಾ ತಿಳಿಸಿದರು. ನಗರ ಸಭೆ


ಉದಯವಾಹಿನಿ ಚಿತ್ರ

ಉಪಾಧ್ಯಕ್ಷರಾದ ಮನೋಹರ್, ಸದಸ್ಯರುಗಳಾದ ಅನ್ನಪೂರ್ಣ ಅವಿನಾಶ್ ಸುಬ್ರಹ್ಮಣ್ಯ ರೋಷನ್, ನಗರಸಭೆ ನಾಮನಿರ್ದೇಶಿತ ಸದಸ್ಯರಾದ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷರಾದ ಕಿರಣ್, ನಗರಸಭೆಯ ಪ್ರಭಾರಿ ಲೆಕ್ಕಾಧಿಕಾರಿಗಳಾದ ಜಮೀಲ್ ಸಮುದಾಯ ಸಂಘಟನಾಧಿಕಾರಿಗಳಾದ ಎಂ ಹೆಚ್ ರಾಜಶೇಖರ್ ಹಲವಾರು ನಗರಸಭಾ ಸದಸ್ಯರುಗಳು ಸಿಬ್ಬಂದಿಗಳು ವಿದ್ಯಾರ್ಥಿ ವೇತನ ಪಡೆಯಲು ಬಂದಿದ್ದ ಪೋಷಕರು ಉಪಸ್ಥಿತರಿದ್ದರು.

> **ಎಸ್ಎಸ್ಎಲ್ಸಿ ಪಿಯುಸಿ ಸ್ನಾತಕೋತ್ತರ ಪದವಿ ಪಿಎಚ್‌ಡಿ ಸೇರಿದಂತೆ ವಿವಿಧ ಹಂತಗಳಲ್ಲಿ ಬಡತನ ರೇಖೆಯಿಂದ ಕಷ್ಟಪಟ್ಟು ವಿದ್ಯಾಭ್ಯಾಸ ನಡೆಸುತ್ತ ತಮ್ಮ ಮುಂದಿನ ಹಂತದ ವಿದ್ಯಾಭ್ಯಾಸದಲ್ಲಿ ಸಹಾಯವಾಗಿ ಅರಸೀಕೆರೆ ನಗರದ ಕೀರ್ತಿಯನ್ನು ಹೆಚ್ಚಿಸಲು ಮಕ್ಕಳು ಮುಂದಾಗಬೇಕು.**
> **-ಎಮ್. ಸಮೀವುಲ್ಲಾ, ನಗರಸಭೆ ಅಧ್ಯಕ್ಷ**

# ನೂತನ ವಸತಿ ನಿಲಯ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹುಣಸಗಿ

ತಾಲ್ಲೂಕಿನ ಅಭಿವೃದ್ಧಿಯೇ ನಮ್ಮ ಗುರಿ ನಮ್ಮ ತಂದೆಯವರು ಜನಪರ ಕೆಲಸ ಮಾಡುತ್ತ ಬಂದಿದ್ದಾರೆ ಅದೇ ಮಾರ್ಗದಲ್ಲಿಯೇ ನಾವು ಸಹ ಜನಪರ ಕೆಲಸಗಳನ್ನು ಮಾಡುತ್ತಿದ್ದೇವೆ ಎಂದು ಸುರಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ರಾಜಾವೇಣುಗೋಪಾಲ ನಾಯಕ ಹೇಳಿದರು. ಪಟ್ಟಣದ ಆಶ್ರಯ ಕಾಲೋನಿ ಹತ್ತಿರ ಕೆಕೆಆರ್‌ಡಿಬಿ ಅನುದಾನದ ಅಡಿಯಲ್ಲಿ 5 ರೂ. ಕೋಟಿ ವೆಚ್ಚದ, ಡಿ ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ನೂತನ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ಮಾಡಿ ಮಾತನಾಡಿದ ಅವರು, ಹುಣಸಗಿ ತಾಲ್ಲೂಕು ಶೈಕ್ಷಣಿಕವಾಗಿ ಮುಂದುವರೆಯಲು ವಸತಿ ನಿಲಯ ಅವಶ್ಯವಾಗಿವೆ. ವಿದ್ಯಾಭ್ಯಾಸ ಮಾಡಲು ತಾಲ್ಲೂಕಿನ ಸುತ್ತಮುತ್ತ ಗ್ರಾಮಗಳಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳು ಅನುಕೂಲವಾಗುತ್ತವೆ. ಸರ್ಕಾರಿ ಡಿಗ್ರಿ ಕಾಲೇಜಿನ ನೂತನ ಕಟ್ಟಡವು ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ತಾಲ್ಲೂಕಿಗೆ ಪ್ರಮುಖವಾಗಿ ಬಿಇಒ ಕಚೇರಿ, ಬಸ್ ಡಿಪೋ, ಕ್ರೀಡಾಂಗಣ ಸೇರಿದಂತೆ ಹಲವಾರು ಕಾಮಗಾರಿಗಳ ಪ್ರಾರಂಭಕ್ಕೆ ಶೀಘ್ರವೇ ಕೈಗೊಳ್ಳಲಾಗುವುದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ಬಡ ಜನರ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ನೀಡಿದೆ ಮತ್ತು ಜನಪರ ಕೆಲಸಗಳನ್ನು ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯಾದಗಿರಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಸದಾಶಿವ ನಾರಾಯಣ ಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ಎನ್ ದಂಡಿನ್, ಯಾದಗಿರಿ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾಜಶೇಖರಗೌಡ ಪಾಟೀಲ ವಜ್ಜಲ, ಕೆಪಿಸಿಸಿ ಸದಸ್ಯರಾದ ಸಿದ್ದಣ್ಣ ಮಲಗಲದಿನ್ನಿ, ಪ.ಪಂ ಅಧ್ಯಕ್ಷ ತಿಪ್ಪಣ್ಣ ನಾಯ್ಕ ರಾಠೋಡ, ಉಪಾಧ್ಯಕ್ಷ ಶಾಂತಣ್ಣ ಮಲಗಲದಿನ್ನಿ, ಮಲ್ಲಣ್ಣ ಸಾಹುಕಾರ ಮುಧೋಳ, ಚೆನ್ನಯ್ಯ ಸ್ವಾಮಿ ಹಿರೇಮಠ, ಪ.ಪಂ ಸದಸ್ಯರು ಶರಣು ದಂಡಿನ್, ಸಿದ್ದರಾಮಪ್ಪ ಮುದುಗಲ್, ಆರ್.ಎಂ ರೇವಡಿ, ಮಲ್ಲಣ್ಣ ಬಾಕ್ಲಿ, ಕಾಸಿಂಸಾಬ ಟ್ಟೋಣ್ಣೂರು, ಕಾಸಿಂಸಾಬ ಚೌದರಿ, ಮಲ್ಲನಗೌಡ ಅಮಲಿಹಾಳ, ಬಸವರಾಜ ಸಾಹುಕಾರ ಬಳಿ, ಮುದಿಗೌಡ ಕುಪ್ಪಿ ,ರವಿ ಮಲಗಲದಿನ್ನಿ, ಇಇ ಶ್ರೀದೇವಿ ಪಾಟೀಲ, ಸುರಪುರ ತಾಲ್ಲೂಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ತಿಪ್ಪಾರೆಡ್ಡಿ ಹಾಗೂ ಸಿಬ್ಬಂದಿಗಳು ಇತರರು ಇದ್ದರು.

# 100 ಟಿಎಂಸಿಗೂ ಅಧಿಕ ನೀರು ಆಂಧ್ರಕ್ಕೆ ಹರಿವು

## ಟಿಬಿ ಡ್ಯಾಂಗೆ ಭರ್ಜರಿ ನೀರು ಹರಿದು ಬಂದ್ರೂ ನದಿ ಪಾಲು: ಕ್ರಸ್ಟ್‌ಗೇಟ್ ದುರ್ಬಲದ ಕಾರಣ

• ಉದಯವಾಹಿನಿ, ಹೊಸಪೇಟೆ

ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಗೇಟ್‌ಗಳು ಶಿಥಿಲಗೊಂಡಿರುವ ಕುರಿತು ತಜ್ಞರ ವರದಿ ಆಧಾರದ ಮೇಲೆ ಗರಿಷ್ಠ ಸಂಗ್ರಹ ಮಟ್ಟದಲ್ಲಿ ನೀರು ಸಂಗ್ರಹಿಸದಿರಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಡ್ಯಾಂ ಭರ್ತಿಯಾಗದಿದ್ದರೂ ನೂರಾರು ಟಿಎಂಸಿ ನೀರು ವ್ಯರ್ಥವಾಗಿ ನದಿಗೆ ಹರಿದು ಹೋಗುತ್ತಿದೆ. ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಹಾಗೂ ನೆರೆಯಆಂಧ್ರ ಮತ್ತು ತೆಲಂಗಾಣದ ಜಿಲ್ಲೆಗಳ ಪಾಲಿಗೆ ತುಂಗಭದ್ರಾ ಜಲಾಶಯ ಜೀವನಾಡಿಯಾಗಿದೆ. ಕುಡಿವ ನೀರು, ಕೃಷಿ, ಕಾರ್ಖಾನೆಗಳಿಗೆ ಜಲಾಶಯ ನೀರು ಅವಲಂಬಿಸಲಾಗಿದೆ. ಪ್ರತಿ ವರ್ಷ ಡ್ಯಾಂಗೆ ಬರುವ ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತದೆ.

**ಡ್ಯಾಂಗೆ 200 ಟಿಎಂಸಿ ನೀರು**

ಆದರೆ, ಈ ಬಾರಿ ಡ್ಯಾಂ ಭರ್ತಿ ಮಾಡದಿರಲು ಟಿಬಿ ಬೋರ್ಡ್ ನಿರ್ಧರಿಸಿ, ಗೇಟುಗಳು ದುರ್ಬಲವಾಗಿರುವ ಪರಿಣಾಮ 105 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯ ಜಲಾಶಯದಲ್ಲಿ 80 ಟಿಎಂಸಿ ನೀರು ಮಾತ್ರ ಸಂಗ್ರಹಿಸಲಾಗಿದೆ. ಕಳೆದ ಒಂದು ತಿಂಗಳಲ್ಲಿ ಡ್ಯಾಂನಿಂದ ನೂರು ಟಿಎಂಸಿಗೂ ಅಧಿಕ ನೀರನ್ನು ನದಿಗೆ ಹರಿಸಲಾಗಿದೆ. ಬಹುತೇಕ ಆಗಸ್ಟ್‌ನಲ್ಲಿ ಹೆಚ್ಚುವರಿ, ಇಷ್ಟು ಪ್ರಮಾಣದ ನೀರು ನದಿಗೆ ಹರಿದುಹೋಗುತ್ತಿತ್ತು. ಆದರೆ, ಈ ಬಾರಿ ಮುಂಗಾರು ಆರಂಭದಲ್ಲೇ ಅಪಾರ ಪ್ರಮಾಣದ ನೀರು ಹರಿದು ಹೋಗಿರುವುದು ಇದೇ ಮೊದಲು. 133 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ 28 ಟಿಎಂಸಿಯಷ್ಟು


ಉದಯವಾಹಿನಿ ಚಿತ್ರ

> **ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳನ್ನು ಬದಲಿಸುವ ಬದಲು ವಿನಾಕಾರಣ ವಿಳಂಬ ಮಾಡಿದ ಪರಿಣಾಮ ರೈತರು ನೋವು ಅನುಭವಿಸಬೇಕಾಗಿದೆ. ಮೇಲ್ಭಾಗದಿಂದ ಬರುವ ನೀರನ್ನು ಸರಿಯಾಗಿ ನಿರ್ವಹಣೆ ಮಾಡುವುದಿಲ್ಲ. ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ.**
> **– ಸಿ.ಎ.ಗಾಳೆಪ್ಪ, ಜಿಲ್ಲಾಧ್ಯಕ್ಷ ರೈತ ಸಂಘ, ವಿಜಯನಗರ.**

ಹೂಳು ತುಂಬಿದ್ದರಿಂದ 105.788 ಟಿಎಂಸಿ ನೀರು ಮಾತ್ರ ಸಂಗ್ರಹವಾಗುತ್ತಿತ್ತು. ಆದರೆ, ಕಳೆದ 2024ರ ಆಗಸ್ಟ್ 10ರಂದು ರಾತ್ರಿ ಗರಿಷ್ಠ ಸಂಗ್ರಹ ಮಟ್ಟ ದಾಖಲಾಗಿದ್ದ ದಿನವೇ 19ನೇ ಕ್ರಸ್ಟ್‌ಗೇಟ್ ಕೊಚ್ಚಿಹೋಗಿತ್ತು. ಈ ವೇಳೆ 40 ಟಿಎಂಸಿ ನೀರು ನದಿ ಮೂಲಕ ಆಂಧ್ರದ ಪಾಲಾಗಿತ್ತು. ಕಳೆದ ವರ್ಷ ಜಲಾಶಯ ಭರ್ತಿಯಾದ ಮೇಲೆ ನದಿಗೆ ನೀರು ಹರಿಸಲಾಗಿತ್ತು. ಈ ವರ್ಷ120 ಟಿಎಂಸಿ ನೀರು ಮಾತ್ರ ಬಳಕೆಗೆ ಸಿಗುವ ಅಂದಾಜು ಮಾಡಲಾಗಿದೆ.

### 80 ಟಿಎಂಸಿ ಸಂಗ್ರಹ

**ಕಳೆದ ಬಾರಿ ಒಟ್ಟು 250 ಟಿಎಂಸಿ ನೀರು ನದಿ ಪಾಲಾಗಿತ್ತು. ಈ ಬಾರಿ ಮುಂಗಾರು ಆರಂಭದ ಜೂನ್ ಅಂತ್ಯದಲ್ಲೇ ಜಲಾಶಯಕ್ಕೆ 75 ಟಿಎಂಸಿಯಷ್ಟು ನೀರು ಸಂಗ್ರಹಗೊಂಡಿದೆ. ಒಳಹರಿವು ಉತ್ತಮವಾಗಿದ್ದರಿಂದ ಜು.2ರಿಂದ ನದಿಗೆ ನೀರು ಹರಿಸಲಾಗಿದ್ದು, ಜು.10ರಿಂದ ಕಾಲುವೆಗಳಿಗೆ ನೀರು ಹರಿಸಲು ಆರಂಭಿಸಲಾಗಿದೆ. ಕಾಲುವೆಗಳಿಗೆ ಈವರೆಗೆ 18ರಿಂದ 20 ಟಿಎಂಸಿ ನೀರು ಹರಿಸಿರಬಹುದು. ಡ್ಯಾಂಗೆ ಈ ವರ್ಷ ಈವರೆಗೆ ಬಂದಿರುವ 200 ಟಿಎಂಸಿ ನೀರಿನಲ್ಲಿ ಸದ್ಯ 80 ಟಿಎಂಸಿ ಸಂಗ್ರಹವಿದೆ. ಆ.03 ವರೆಗೆ ನದಿ ಮೂಲವೇ 100 ಟಿಎಂಸಿಗೂ ಅಧಿಕ ನೀರು ಆಂಧ್ರದ ಪಾಲಾಗಿದೆ.**

**ಅಪಾರ ನೀರು:** ಸದ್ಯ ಟಿಬಿ ಡ್ಯಾಂಗೆ 44 ಸಾವಿರ ಕ್ಯುಸೆಕ್ ಒಳಹರಿವಿದ್ದು, 24 ಸಾವಿರ ಕ್ಯುಸೆಕ್ ನೀರು ಹೊರಹರಿಸಲಾಗುತ್ತಿದೆ. 2 ಕ್ರಸ್ಟ್‌ಗೇಟ್‌ಗಳ ಮೂಲಕ 10 ಸಾವಿರ ಕ್ಯುಸೆಕ್ ನದಿಗೆ ಹರಿದು ಹೋಗುತ್ತಿದೆ. ಕಳೆದ ವಾರದಲ್ಲಿ 1.30 ಲಕ್ಷ ಕ್ಯುಸೆಕ್ ವರೆಗೆ ನೀರು ನದಿಗೆ ಹರಿಸಲಾಗಿತ್ತು. ತುಂಗಾ ಮತ್ತು ಭದ್ರಾ ನದಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆ ಆಗುತ್ತಿರುವ ಹಿನ್ನೆಲೆ ಪ್ರತಿದಿನ ತುಂಗಾಭದ್ರಾ ಜಲಾಶಯಕ್ಕೆ ಅಪಾರ ನೀರು ಹರಿದು ಬಂದಿದೆ.

# ಹದಗೆಟ್ಟ ಬಳ್ಳೂರ್ಗಿ-ಹಳಿಯಾಳ ರಸ್ತೆ; ಜನರ ಪರದಾಟ

• ಉದಯವಾಹಿನಿ, ಅಫಜಲಪುರ

ತಾಲ್ಲೂಕಿನ ಬಳ್ಳೂರ್ಗಿ ಗ್ರಾಮದಿಂದ ಹಳ್ಯಾಳ ಗ್ರಾಮದವರೆಗೆ ಸಂಚರಿಸುವ ಸುಮಾರು 4 ಕಿಲೋ ಮೀಟರ್ ರಸ್ತೆ, ಸಂಪೂರ್ಣ ಹಾಳಾಗಿದ್ದು, ಜನರು ಮತ್ತು ರೈತರು ಸಂಚರಿಸಲು ನಿತ್ಯ ಪರದಾಡುವಂತಾಗಿದೆ. ಬಳ್ಳೂರ್ಗಿ ಗ್ರಾಮದಿಂದ ಹಲ್ಯಾಳ ಗ್ರಾಮಕ್ಕೆ ಸಂಚರಿಸುವ ರಸ್ತೆ ಸಂಪೂರ್ಣ ಹಾಳಾಗಿದೆ.

ಮಳೆ ಬಂದರೆ ಸಂಚಾರ ಸ್ಥಗಿತವಾಗುತ್ತದೆ. ಯಾವುದೇ ವಾಹನಗಳು ಸಂಚಾರ ಮಾಡಲು ಸಾಧ್ಯವಾಗುವುದಿಲ್ಲ. ಈ ರಸ್ತೆಯಲ್ಲಿಯೇ ಬಳ್ಳೂರ್ಗಿ ಗ್ರಾಮದ ರೈತರ ಜಮೀನುಗಳಿದ್ದು ಪ್ರತಿದಿನ ಜಮೀನು ಕೆಲಸಕ್ಕಾಗಿ ಸಂಚರಿಸಲು ಸಾಧ್ಯವಾಗುತ್ತಿಲ್ಲ.


ಉದಯವಾಹಿನಿ ಚಿತ್ರ

ತೋಟದ ಬೆಳೆಯನ್ನು ಮಾರುಕಟ್ಟೆಗೆ ಸಾಗಾಟ ಮಾಡಲು ಸಾಧ್ಯವಾಗುತ್ತಿಲ್ಲ. ಜನರು ಮಳೆ ಬಂದಾಗ ತಲೆ ಮೇಲೆ ಹೊತ್ತು ಹುಟ್ಟುವಳಿಗಳನ್ನು ಸಾಗಾಟ ಮಾಡುತ್ತಾರೆ. ಜನಪ್ರತಿನಿಧಿಗಳು ತಕ್ಷಣ ರಸ್ತೆಯನ್ನು ದುರಸ್ತಿ ಮಾಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಬಳ್ಳೂರ್ಗಿ ಗ್ರಾಮದಿಂದ ಹಳ್ಯಾಳದವರೆಗೆ ರಸ್ತೆ ಹದಗೆಟ್ಟಿದ್ದು, ಮಳೆಗಾಲ ಮುಗಿಯುವವರೆಗೆ ಗರ್ಸುಹಾಕಿ ರಸ್ತೆ ದುರಸ್ತಿ ಮಾಡಬೇಕು ಎಂದು ರೈತ ಮುಖಂಡರಾದ ಶ್ರೀಮಂತ ಪಾಟೀಲ್, ಸದ್ದಾಂ ಅತ್ತಾರ್ ಒತ್ತಾಯಿಸಿದ್ದಾರೆ.

# ಸಾರಿಗೆ ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ

• ಉದಯವಾಹಿನಿ, ಕೊಪ್ಪಳ

ಮಂಗಳವಾರ ಸಾರಿಗೆ ನೌಕರರು ಮುಷ್ಕರ ಕೈಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಸಾರ್ವಜನಿಕರ ಪ್ರಯಾಣಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸಲಹೆ ಮಾಡಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಾರಿಗೆ ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ಅಧಿಕಾರಿಗಳು ಮತ್ತು ಖಾಸಗಿ ವಾಹನ ಚಾಲಕರ ಅಸೋಶಿಯೇಶನ್ ಅವರೊಂದಿಗೆ ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಸರಕಾರದ ಕಾರ್ಯದರ್ಶಿಗಳು ನಿರ್ದೇಶನ ನೀಡಿದ್ದಾರೆ. ಪ್ರತಿ ದಿನ ಕೊಪ್ಪಳ ಜಿಲ್ಲೆಯಲ್ಲಿ 1400ಕ್ಕೂ ಟ್ರಿಪ್‌ಗಳಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಸುಮಾರು 320 ಬಸ್ ಸಂಚರಿಸುತ್ತಿದ್ದು, ಮುಷ್ಕರದಿಂದಾಗಿ ಸಾರ್ವಜನಿಕರ ಪ್ರಯಾಣದಲ್ಲಿ ವ್ಯತ್ಯಯ ಉಂಟಾಗಬಹುದು. ಇದರ ನಿರ್ವಹಣೆಗಾಗಿ ಸೂಕ್ತ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದರು.

ಕ.ಕ.ಸಾ.ನಿ ಕೊಪ್ಪಳ ವಿಭಾಗದಲ್ಲಿರುವ ಹೊರಗುತ್ತಿಗೆ ನೌಕರರ ಪಟ್ಟಿಯನ್ನು ಸಿದ್ದಪಡಿಸಿ ಜಿಲ್ಲಾಡಳಿತಕ್ಕೆ ಸಲ್ಲಿಸಬೇಕು. ಮುಷ್ಕರ ಸಂದರ್ಭದಲ್ಲಿ ಹೊರಗುತ್ತಿಗೆ ಸಾರಿಗೆ ನೌಕರರಿಗೆ ರಜೆ ನೀಡುವಂತಿಲ್ಲ. ಅವಶ್ಯವಿದ್ದಲ್ಲಿ ಜಿಲ್ಲೆಯ ಕಾರ್ಖಾನೆಗಳ ಬಸ್ ಬಳಕೆಗೆ ಕ್ರಮವಹಿಸಿ.


ಉದಯವಾಹಿನಿ ಚಿತ್ರ

ಪ್ರಯಾಣಿಕರಿಗೆ ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಶೇಷ ಮಾಹಿತಿ ಕೇಂದ್ರ ಸ್ಥಾಪಿಸಬೇಕು. ಆರ್‌ಟಿಒ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ ಮಾತನಾಡಿ, ಸಾರಿಗೆ ನೌಕರರ ಮುಷ್ಕರ ಸಂದರ್ಭದಲ್ಲಿ ಸಾರ್ವಜನಿಕರ ಪ್ರ ಯಾಣಕ್ಕೆ ಯಾವುದೇ ತೊಂದರೆಯಾಗಬಾರದು. ಇದಕ್ಕಾಗಿ ಸ್ಥಳೀಯ ಖಾಸಗಿ ವಾಹನ ಚಾಲಕರು ಸಹಕಾರ ನೀಡಬೇಕು. ಪ್ರಯಾಣಕ್ಕೆ ನಿಗದಿಯಾಗಿರುವ ಸಾಮಾನ್ಯ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಸ್ವೀಕರಿಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣ ಮತ್ತು ಡಿಪೋಗಳಲ್ಲಿ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗುವುದು. ಅಗತ್ಯ ಸಂದರ್ಭದಲ್ಲಿ ಪೊಲೀಸ್ ಸಹಾಯಕ್ಕಾಗಿ ಸಾರ್ವಜನಿಕರು 112ಗೆ ಕರೆ ಮಾಡಬಹುದಾಗಿದೆ ಎಂದರು.

### 112ಗೆ ಕರೆ ಮಾಡಿ

**ಜಿಲ್ಲೆಯಲ್ಲಿ ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಡಿಸಿ ಸುರೇಶ್ ಇಟ್ನಾಳ್ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮುಷ್ಕರದ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸರ್ಕಾರ ನಿರ್ದೇಶನ ನೀಡಿದ್ದು, ಖಾಸಗಿ ವಾಹನ ಚಾಲಕರು ಸಹಕರಿಸುವಂತೆ ಕೋರಲಾಗಿದೆ. ಪ್ರಯಾಣ ದರ ಹೆಚ್ಚಿಸಿದರೆ ಕ್ರಮ ಕೈಗೊಳ್ಳಲಾಗುವುದು.**

**-ಡಾ. ರಾಮ್ ಎಲ್. ಅರಸಿದ್ದಿ ಪೊಲೀಸ್ ವರಿಷ್ಠಾಧಿಕಾರಿ**

ಸಭೆಯಲ್ಲಿ ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ ಹಿರೇಮಠ , ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಬಿ. ಜಾಧವ್, ಕೊಪ್ಪಳ ವಿಭಾಗೀಯ ಸಂಚಾರ ಅಧಿಕಾರಿ ಪರಮೇಶ್ವರಪ್ಪ, ಕಾರ್ಮಿಕ ಕಲ್ಯಾಣಾಧಿಕಾರಿ ಸತ್ಯನಾರಾಣ ಸೇರಿದಂತೆ ಸಾರಿಗೆ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿ, ಖಾಸಗಿ ವಾಹನಗಳ ಅಸೋಶಿಯೇಶನ್‌ನವರು ಹಾಗೂ ವಾಹನ ಚಾಲಕರು ಉಪಸ್ಥಿತರಿದ್ದರು.

# ದೂರದರ್ಶನ ಕೇಂದ್ರ ಮುಚ್ಚಿದರೆ ಜನಾಂದೋಲನ: ಸಿ.ಎಸ್.ಮಾಲಿಪಾಟೀಲ ಎಚ್ಚರಿಕೆ

• ಉದಯವಾಹಿನಿ, ಕಲಬುರಗಿ



ಗುಲಬರ್ಗಾ ದೂರದರ್ಶನ ಕೇಂದ್ರ ಮುಚ್ಚುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಬಿಡಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಎಸ್.ಮಾಲಿಪಾಟೀಲ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ 1977ರ ಸೆ.3ರಂದು ಗುಲಬರ್ಗಾದಲ್ಲಿ ದೂರದರ್ಶನ ಕೇಂದ್ರ ಆರಂಭವಾಯಿತು. ಇದು ಈ ಭಾಗದ ಜನರಿಗೆ ಅಸ್ಮಿತೆಯ ವಿಷಯವಾಗಿದೆ. ಈ ಕೇಂದ್ರದಿಂದ ಕಲಾವಿದರು, ಸಾಹಿತಿಗಳು, ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿಜ್ಞಾನಿಗಳಿಗೆ ಅನುಕೂಲವಾಗಿತ್ತು' ಎಂದರು. 2022ರಲ್ಲಿ ದೇಶದಲ್ಲಿ ಹಳೆ ದೂರದರ್ಶನ ಕೇಂದ್ರಗಳನ್ನು ಮುಚ್ಚುವ ಪ್ರಯತ್ನ ಆರಂಭವಾಯಿತು. ಈ ಪ್ರಯತ್ನದ ಭಾಗವಾಗಿ ಈ ಕೇಂದ್ರದ ಅಗತ್ಯತೆ ಕುರಿತು ತಿಳಿದುಕೊಳ್ಳಲು ಪ್ರಸಾರ ಭಾರತಿಯ ನಿರ್ದೇಶಕರು ಗುಲಬರ್ಗಾಕ್ಕೆ ಭೇಟಿ ನೀಡಿದ್ದರು. ಈ ವೇಳೆ ಕೇಂದ್ರವನ್ನು ಮುಚ್ಚದಂತೆ ಮನವಿ ಸಲ್ಲಿಸಲಾಗಿತ್ತು. ಕೇಂದ್ರವನ್ನು ಮುಚ್ಚುವುದಿಲ್ಲ. ಡಿಜಿಟಲೀಕರಣಕ್ಕೆ ಸಮಯ ಬೇಕಾಗುತ್ತದೆ ಎಂದು ಹೇಳಿದ್ದರು ಎಂದು ತಿಳಿಸಿದರು. ಪ್ರಾರಂಭದಲ್ಲಿ ಗುಲಬರ್ಗಾ ದೂರದರ್ಶನ ಕೇಂದ್ರದಲ್ಲಿ 91 ಸಿಬ್ಬಂದಿ ಮತ್ತು ಅಧಿಕಾರಿಗಳು ಕೆಲಸ ಮಾಡುತ್ತಿದ್ದರು. ಬಳಿಕ 2021ರಲ್ಲಿ ಇಲ್ಲಿನ ಖಾಲಿ ಹುದ್ದೆಗಳನ್ನು ತುಂಬಲಿಲ್ಲ. ಇದ್ದ ಸಿಬ್ಬಂದಿಯನ್ನೂ ಬೇರೆಡೆ ವರ್ಗಾವಣೆ ಮಾಡಲಾಯಿತು. ಯಂತ್ರೋಪಕರಣಗಳನ್ನೂ ಸಾಗಿಸಲಾಯಿತು. ಈ ಮೂಲಕ ಕೇಂದ್ರ ಸರ್ಕಾರ ಈ ಭಾಗದ ದಾಖಲೆ ಅಳಿಸುವ ಕೆಲಸಕ್ಕೆ ಕೈಹಾಕಿತು. ಇದನ್ನು ಕೈಬಿಡಬೇಕು. ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

**ದೂರದರ್ಶನ ಕೇಂದ್ರ ಅಭಿಮಾನದ ಸಂಗತಿ:** ಕವಿರಾಜಮಾರ್ಗ, ದೂರದರ್ಶನ ಈ ಭಾಗದ ಅಭಿಮಾನದ ಸಂಗತಿಗಳಾಗಿವೆ ಎಂದು ಸಾಹಿತಿ ಸ್ವಾಮಿರಾವ ಕುಲಕರ್ಣಿ ಅಭಿಪ್ರಾಯಪಟ್ಟರು. 1977ರಲ್ಲಿ ದೂರದರ್ಶನ ಕೇಂದ್ರ ಆರಂಭವಾದಾಗ ಹೈದರಾಬಾದ್‌ನಲ್ಲಿ ಚಿತ್ರೀಕರಣ ಮಾಡಲಾಗುತ್ತಿತ್ತು. ಇಲ್ಲಿಯೇ ಚಿತ್ರೀಕರಣ ಮಾಡುವಂತೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ಬಳಿಕ ಇಲ್ಲಿಯೇ ಚಿತ್ರೀಕರಣ ಮಾಡಲು ಆರಂಭಿಸಿದರು. ಬಳಿಕ ಈ ಭಾಗದ ಅನೇಕ ಸಂಗತಿಗಳಿಗೂ ಮಹತ್ವ ಬಂದಿತು ಎಂದರು.

ದೂರದರ್ಶನ ಕೇಂದ್ರ ಈ ಭಾಗದ ಪ್ರಮುಖ ಸರ್ಕಾರಿ ಆಸ್ತಿಯಾಗಿದೆ. 2027ಕ್ಕೆ ಇದಕ್ಕೆ 50 ವರ್ಷ ತುಂಬಲಿದೆ. ಇಂಥ ಸಂದರ್ಭದಲ್ಲಿ ಕೇಂದ್ರ ಮುಚ್ಚುವ ಕಾರ್ಯ ಒಳ್ಳೆಯದಲ್ಲ. ಸಚಿವರು ಸೇರಿದಂತೆ ಜನಪ್ರತಿನಿಧಿಗಳು ಇದರ ವಿರುದ್ಧ ಧ್ವನಿ ಎತ್ತಬೇಕು. ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ಒತ್ತಾಯಿಸಿದರು.

# ರಾಜ್ಯದಲ್ಲಿ ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿ: ನಿಖಿಲ್

## ಹರಿಯಬ್ಬೆ ಜೆಡಿಎಸ್ ಕಾರ್ಯಕರ್ತರ ಸಭೆ, ಸದಸ್ಯತ್ವ ಅಭಿಯಾನಕ್ಕೆ ಚಾಲನೆ

• ಉದಯವಾಹಿನಿ, ಧರ್ಮಪುರ

ರಾಜ್ಯದಲ್ಲಿ ಕುಮಾರಣ್ಣ ಎರಡು ಸಲ ಕಡಿಮೆ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದರೂ ಅವರ ಸಾಧನೆಗಳು ಇಂದಿಗೂ ಜನಮಾನಸದಲ್ಲಿ ಉಳಿದುಕೊಂಡಿವೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಅವರು ಮತ್ತೆ ಮುಖ್ಯಮಂತ್ರಿಯಾಗುವುದು ಖಚಿತ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. ಸಮೀಪದ ಹರಿಯಬ್ಬೆ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಕಾರ್ಯಕರ್ತರ ಸಭೆ ಮತ್ತು ಸದಸ್ಯತ್ವ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗ ಹರಿಯಬ್ಬೆಯಲ್ಲಿ ಗ್ರಾಮ ವಾಸ್ತವ್ಯ ಮಾಡಬೇಕಿತ್ತು, ಆದರೆ ಅದು ಸಾಧ್ಯವಾಗಲಿಲ್ಲ. ಅದಕ್ಕಾಗಿಯೇ ಸದಸ್ಯತ್ವ ನೋಂದಣಿ ಅಭಿಯಾನ ಇಲ್ಲಿಯೇ ಶುರು ಮಾಡಲಾಗಿದೆ ಎಂದರು. ಹಿರಿಯೂರಿನ ವಾಣಿವಿಲಾಸ ಸಾಗರಕ್ಕೆ ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನ ಮತ್ತು ಅನುದಾನ ನೀಡಿಕೆ ಇವತ್ತು ನೀರಾವರಿ ಸೌಕರ್ಯ ಕಾಣಲು ಸಾಧ್ಯವಾಗಿದೆ. ಆದರೆ, ನಂತರದಲ್ಲಿ ಬಂದ ಸರ್ಕಾರ ಪೂರ್ಣ ಪ್ರಮಾಣದ ಅನುಷ್ಠಾನ ಕಾರ್ಯ ಮುಂದುವರಿಸದಿರುವುದು ದುರಾದೃಷ್ಟ ಎಂದು ಹೇಳಿದರು.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ನೆಪದಲ್ಲಿ ಜನರ ಸಂಕಷ್ಟಗಳನ್ನು ಅರಿಯದೇ ಅವರನ್ನು ನಷ್ಟದ ಕೂಪಕ್ಕೆ ನೂಕಿದೆ. ಜೆಡಿಎಸ್ ಬರೀ ದೇವೇಗೌಡರ ಪಕ್ಷವಲ್ಲ, ಅದು


ಉದಯವಾಹಿನಿ ಚಿತ್ರ

ರೈತರ, ಸಾಮಾನ್ಯ ಜನರ ಪಕ್ಷವಾಗಿದೆ. ಪಕ್ಷದ ಕಾರ್ಯಕರ್ತರು ಒಳ ಬೇಗುದಿ ಬಿಟ್ಟು ಸೈನಿಕರಂತೆ ಸಂಘಟಿತರಾಗಬೇಕು ಎಂದು ಮನವಿ ಮಾಡಿದರು. ದೇವೇಗೌಡರು, ಕುಮಾರಣ್ಣ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ರೈತರ ಬದುಕಿಗೆ ಆಸರೆಯಾಗಿದ್ದಾರೆ.

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ನಡೆದರೆ ನಮ್ಮ ಪಕ್ಷಕ್ಕೆ ಹಾನಿಯಾಗಲಿದೆ ಎಂಬುದನ್ನು ಮನಗಂಡಿರುವ ಕಾಂಗ್ರೆಸ್ ಸರ್ಕಾರ ಚುನಾವಣೆ ಮುಂದೂಡುತ್ತಿದೆ. ಇದಕ್ಕಾಗಿ ನ್ಯಾಯಾಲಯ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಜನವರಿಯಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳು ನಡೆಯಲಿವೆ.

ಅದಕ್ಕಾಗಿ ತಳಮಟ್ಟದಿಂದ ಪಕ್ಷ ಬಲವರ್ಧನೆಗೊಳಿಸಿ ಎಂದು ಸಲಹೆ ನೀಡಿದರು. ಹಿರಿಯೂರು ಕ್ಷೇತ್ರ ಜೆಡಿಎಸ್‌ನ ಭದ್ರ ಕೋಟೆಯಾಗಿದೆ. ಆದರೂ ಕಳೆದ 20ವರ್ಷಗಳಿಂದ ಜೆಡಿಎಸ್ ಅಭ್ಯರ್ಥಿಗಳು ಸೋಲುಂಡಿದ್ದಾರೆ. ಈಗಲೂ ನಮ್ಮ ಪಕ್ಷದ ಕಾರ್ಯಕರ್ತರು ವಿಚಲಿತರಾಗಿಲ್ಲ. ಜೊತೆಗೆ ರಾಜ್ಯದಲ್ಲಿ ಬಿಜೆಪಿ ಮೈತ್ರಿ ಇರುವುದರಿಂದ ನಮಗೆ ಆನೆ ಬಲ ಬಂದಿದೆ. ಜನಪರ ಯೋಜನೆಗಳನ್ನು ರೂಪಿಸಿದ ನಮ್ಮ ನಾಯಕರ ಆಶೋತ್ತರಗಳನ್ನು ರೈತರಿಗೆ ತಲುಪಿಸಬೇಕು' ಎಂದು ಜೆಡಿಎಸ್ ಮುಖಂಡ ಎಂ.ರವೀಂದ್ರಪ್ಪ ಹೇಳಿದರು.

ಮಾಜಿ ಶಾಸಕರಾದ ಕೆ.ಟಿ.ತಿಮ್ಮರಾಯಪ್ಪ, ಎಂ.ತಿಪ್ಪೇಸ್ವಾಮಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಜಯಣ್ಣ, ಮಾಜಿ ಅಧ್ಯಕ್ಷ ಡಿ.ಯಶೋಧರ, ವಕೀಲ ಶಿವಶಂಕರ್ ಮಾತನಾಡಿದರು. ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಹನುಮಂತರಾಯ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜೆಡಿಎಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಕಾರ್ಯದರ್ಶಿ ಕನ್ಯಾಕುಮಾರಿ, ಲತಾ ರವೀಂದ್ರಪ್ಪ, ಶಿರಾ ರುದ್ರೇಶ್, ಎಸ್.ಆರ್.ಗೌಡ, ಕಲ್ಲೆ ರುದ್ರೇಶ್, ಡಿ.ಎಸ್.ಪ್ರಕಾಶ್, ಮಂಜುನಾಥ್, ಗಿರಿಜಾಪತಿ, ಸಿ.ನಾಗರಾಜ, ಜಲ್ಮೀರಪ್ಪ, ರಾಧಮ್ಮ, ಮಹಾಂತೇಶ್ ಇನ್ನಿತರರಿದ್ದರು.

### ಕಾಡುಗೊಲ್ಲರಿಗೆ ನ್ಯಾಯ

**ಚಿತ್ರದುರ್ಗ ತುಮಕೂರು ಕೋಲಾರ ಭಾಗಗಳಲ್ಲಿ ಹೆಚ್ಚಾಗಿರುವ ಕಾಡುಗೊಲ್ಲರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಮಾನ್ಯ ದೇವೇಗೌಡರು ಮತ್ತು ಕುಮಾರಣ್ಣ ಈಗಾಗಲೇ ನಿರಂತರವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದಿದ್ದಾರೆ. ಇದು ನೂರಕ್ಕೆ ನೂರು ಈಡೇರುತ್ತದೆ. ಇದರಿಂದ ಹಿಂದುಳಿದ ಸಮುದಾಯವಾಗಿರುವ ಕಾಡುಗೊಲ್ಲರಿಗೆ ಸಾಮಾಜಿಕ ನ್ಯಾಯ ಸಿಗಲಿದೆ ಎಂದು ನಿಖಿಲ್ ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.**

### ಸಕ್ಕರೆ ಕಾರ್ಖಾನೆ ಆರಂಭಿಸಲು ಯತ್ನ

**ತಾಲ್ಲೂಕಿನ ಜೀವನಾಡಿಯಾಗಿದ್ದ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿ ನೌಕರರ ಮತ್ತು ರೈತರ ಬದುಕು ಅತಂತ್ರವಾಗಿದೆ. ಕುಮಾರಣ್ಣನವರ ಗಮನಕ್ಕೆ ತಂದು ಸಕ್ಕರೆ ಕಾರ್ಖಾನೆ ಪುನರಾರಂಭಿಸುವ ಪ್ರಾಮಾಣಿಕ ಪ್ರಯತ್ನ ಕೈಗೊಳ್ಳಲಾಗುವುದು.**

**– ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ**




## ಮಿನಿ ನ್ಯೂಸ್

### ಬಸ್ ಸ್ಟೇರಿಂಗ್ ಕಟ್ಟಾಗಿ ರಸ್ತೆಬದಿಗೆ: ಪ್ರಯಾಣಿಕರು ಸೇಫ್

• ಉದಯವಾಹಿನಿಚಿಂಚೋಳಿ

ತಾಲ್ಲೂಕಿನ ಅಣವಾರ ಗ್ರಾಮಕ್ಕೆ ಹೋಗುತ್ತಿದ್ದ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ಗ್ರಾಮದ ಸಮೀಪ ಯಲ್ಲಾಲಿಂಗೇಶ್ವರ ದೇವಾಲಯದ ಹತ್ತಿರ ಬಸ್ ಸ್ಟೆರಿಂಗ್ ಕಟ್ಟಾಗಿ ರಸ್ತೆ ಬಿಟ್ಟು ಕೆಳೆಗೆ ಹೋಗಿದೆ ಪ್ರಯಾಣಿಕರಿಗೆ ಯಾರಿಗೂ ಯಾವುದೇ ಹಾನಿಯಾಗಿವೆಂದು ಸ್ಥಳೀಯರು ತಿಳಿಸಿದ್ದಾರೆ. ಚಿಂಚೋಳಿ ಬಸ್ ನಿಲ್ದಾಣದಿಂದ ಅಣವಾರ ಗ್ರಾಮಕ್ಕೆ 5ಗಂಟೆಗೆ ತೆರಳಿದ್ದು ಅದರಲ್ಲಿ ಸುಮಾರು 30-40ಜನ ಪ್ರಯಾಣಿಕರು ಪ್ರಯಾಣ ಬೆಳೆಸುತ್ತಿದ್ದರು ಅಂದಾಜು ಸಾಯಂಕಾಲ5-30ಗಂಟೆಯ ಸುಮಾರಿಗೆ ಏಕಾಏಕಿ ಬಸ್ ಸ್ಟೇರಿಂಗ್ ಕಟ್ಟಾಗಿ ರಸ್ತೆ ಕೆಳಗೆ ಹೋಗಿದೆ ದುರಾದೃಷ್ಟ ಯಾರಿಗೂ ಯಾವುದೇ ಹಾನಿಯಾಗಿಲ್ಲಾ, ಬಲಬದಿಗೆ ಅಷ್ಟೇನೂ ತೆಗ್ಗುಯಿಲ್ಲ ಆದರೆ ಎಡಬದಿಗೆ ಬಹಳಷ್ಟು ತೆಗ್ಗುಗುಂಡಿ ಪ್ರದೇಶವಿತ್ತು ಆ ಕಡೆ ಬಸ್ ಹೋದರೆ ದೊಡ್ಡ ಅಪಘಾತ ಸಂಭವಿಸುತ್ತಿತ್ತು ದುರದೃಷ್ಟಕರ ಯಾರಿಗೂ ಯಾವುದೇ ಹಾನಿಯಾಗಿಲ್ಲ ಎಂದು ಗ್ರಾಮಸ್ಥ ನಾಗಪ್ಪ ಪೂಜಾರಿ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

### ದೌಲಸಾಬ್‌ಗೆ ಮೂರು ತಿಂಗಳು ಗಡಿಪಾರು

• ಉದಯವಾಹಿನಿ, ಕಂಪ್ಲಿ

ಎರಡು ವರ್ಷಗಳ ಹಿಂದೆ ಜೈಲಿನಿಂದ ಬಿಡುಗಡೆಯಾದ ಇಲ್ಲಿಯ ಎಂ.ಡಿ ಕ್ಯಾಂಪ್ ನಿವಾಸಿ ದೌಲಸಾಬ್, ಬಾಲಕನೊಬ್ಬನ ಮೇಲೆ ಹಲ್ಲೆ ಮಾಡಿದ ಆರೋಪ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆಯಿಂದ ರಾಮನಗರ ಜಿಲ್ಲೆಯ ಕನಕಪುರಕ್ಕೆ ಮೂರು ತಿಂಗಳು ಗಡಿಪಾರು ಮಾಡಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಅಪ್ರಾಪ್ತ ದಲಿತ ಬಾಲಕಿ ಮೇಲೆ ಅತ್ಯಾಚಾರವೆಸಗಿ ಪೋಕ್ಸ್ ಕಾಯ್ದೆಯಡಿ 2014ರಿಂದ 2023ರವರೆಗೆ ದೌಲಸಾಬ್ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ. ಆದರೂ ಈತ ಪುಂಡಾಟಿಕೆ ಮುಂದುವರಿಸಿದ್ದು, ಸಮಾಜದ ಸಾಸ್ಥ್ಯ ಹಾಳು ಮಾಡುತ್ತಿದ್ದ. ಮೇ 10ರಂದು ಶಿಕಾರಿಹಟ್ಟಿಯ ಬಾಲಕನ ಮೇಲೆ ಹಲ್ಲೆ ಮಾಡಿರುವ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣವು ದಾಖಲಾಗಿದೆ. ಈತನ ಚಟುವಟಿಕೆಯಲ್ಲಿ ಯಾವುದೇ ಸುಧಾರಣೆ ಕಾಣದ ಹಿನ್ನೆಲೆ ಗಡಿಪಾರು ಮಾಡಲು ಜಿಲ್ಲಾಧಿಕಾರಿಗೆ ಮನವಿ ಮಾಡಲಾಗಿತ್ತು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಿಸಿಸಿ ಬ್ಯಾಂಕ್‌ಗೆ ಭೇಟಿ ನೀಡಲು ಹೆದರುತ್ತಿರುವ ರೈತರು

• ಉದಯವಾಹಿನಿ, ಬೀದರ್

ಡಿಸಿಸಿ ಬ್ಯಾಂಕ್‌ನವರು ಮೈಕ್ರೋ ಫೈನಾನ್ಸ್ ತರಹ ಕೆಲಸ ನಿರ್ವಹಿಸುತ್ತಿದ್ದು, ರೈತರಿಗೆ ಬ್ಯಾಂಕಿಗೆ ಹೋಗಲು ಹೆದರಿಕೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕೇಂದ್ರದ ಮಾಜಿಸಚಿವರೂ ಆದ ಬಿಜೆಪಿ ಮುಖಂಡ ಭಗವಂತ ಖೂಬಾ ಆರೋಪಿಸಿದ್ದಾರೆ. ಪ್ರೋತ್ಸಾಹ ಧನಕ್ಕೂ ಕತ್ತರಿ ಹಾಕುವ ಕೆಲಸ ಮಾಡಲಾಗುತ್ತಿದೆ ಎಂದು ರೈತರು ನನ್ನ ಗಮನಕ್ಕೆ ತಂದಿದ್ದಾರೆ. ಆದರೆ, ಪ್ರಧಾನಿಗಳು ರೈತರಿಗೆ ಸಹಾಯವಾಗಲಿ, ಅವರ ಸಣ್ಣ ಪುಟ್ಟ ಅವಶ್ಯಕತೆಗಳು ಈಡೇರಲಿ ಎನ್ನುವ ಉದ್ದೇಶದಿಂದ ಪ್ರೋತ್ಸಾಹ ಧನ ನೀಡುತ್ತಿದ್ದಾರೆ. ಡಿಸಿಸಿ ಬ್ಯಾಂಕಿನವರು ಯಾವುದೇ ಕಾರಣಕ್ಕೂ ಈ ಪ್ರೋತ್ಸಾಹ ಧನವನ್ನು ತಮ್ಮ ಬ್ಯಾಂಕಿನ ರೈತರ ಸಾಲಗಳಲ್ಲಿ ಕಟ್ ಮಾಡಿಕೊಳ್ಳದೆ, ರೈತರಿಗೆ ಈ ಹಣ ನೀಡಬೇಕೆಂದು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಕಾಂಗ್ರೆಸ್‌ನವರು ಹೆಚ್ಚ ಕಡಿಮೆ 60 ವರ್ಷಗಳ ಕಾಲ ಈ ದೇಶದಲ್ಲಿ ಅಧಿಕಾರ ನಡೆಸಿದ್ದಾರೆ. ರೈತರಾಗಲಿ, ಮಹಿಳೆಯರಾಗಲಿ, ಬಡವರ ಬಗ್ಗೆ ಕಾಳಜಿ ತೋರಿಲ್ಲ. ಆದರೆ, ಮೋದಿಯವರು ಬಂದ ನಂತರ ಎಲ್ಲಾ ವರ್ಗದ ಜನರಿಗೆ ಅನುಕೂಲವಾಗುವಂತೆ ಸಹಾಯ ಹಸ್ತ ಚಾಚುತ್ತಿದ್ದಾರೆ. ಎಲ್ಲರ ಅಭಿವೃದ್ಧಿಗೆ ಯೋಜನೆಗಳು ರೂಪಿಸುತ್ತಿದ್ದಾರೆ ಎಂದಿದ್ದಾರೆ. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 20ನೇ ಕಂತಿನ ಪ್ರೋತ್ಸಾಹ ಧನವನ್ನು ದೇಶದ ರೈತರ ಖಾತೆಗೆ ಜಮೆ ಮಾಡಿದ್ದಾರೆ. ಇದರಲ್ಲಿ ಬೀದರ್ ಲೋಕಸಭಾ ಕ್ಷೇತ್ರದ 3 ಲಕ್ಷ ರೈತರ ಖಾತೆಗೆ ಒಟ್ಟು 60 ಕೋಟಿ ಪ್ರೋತ್ಸಾಹ ಧನ ಜಮೆಯಾಗಿರುತ್ತದೆ. 3 ಲಕ್ಷ ರೈತರ ಪೈಕಿ ಬೀದರ್ ಡಿಸಿಸಿ ಬ್ಯಾಂಕ್ ಮೂಲಕ ಒಟ್ಟು 57,916 ರೈತರ ಖಾತೆಗೆ 11.58 ಕೋಟಿ ಜಮೆ ಯಾಗಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ

### ಪ್ರಧಾನಿ ಮೋದಿ ಹಾದಿ ಎಲ್ಲರಿಗೂ ಮಾದರಿ: ಕ್ಯಾಪ್ಟನ್ ಬ್ರಿಜೇಶ್ ಚೌಟ

• ಉದಯವಾಹಿನಿ, ಬಂಟ್ವಾಳ

11 ವರ್ಷಗಳಿಂದ ಪ್ರಧಾನಿಯಾಗಿ ದೇಶಕ್ಕೆ ಗೌರವ ತಂದುಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಗಾಣಿಗ ಸಮಾಜದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಹಾಕಿ ಕೊಟ್ಟ ಹಾದಿ ಮಾದರಿಯಾಗಿದೆ ಎಂದು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಇಲ್ಲಿನ ಪಾಣೆಮಂಗಳೂರು ಸುಮಂಗಲಾ ಸಭಾಂಗಣದಲ್ಲಿ ಬಂಟ್ವಾಳ ತಾಲ್ಲೂಕು ಗಾಣಿಗರ ಸೇವಾ ಸಂಘದ ವತಿಯಿಂದ ಏರ್ಪಡಿಸಿದ್ದ ವಿದ್ಯಾರ್ಥಿ ಪ್ರೋತ್ಸಾಹಧನ ವಿತರಣೆ ಮತ್ತು ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಾಸಕ ರಾಜೇಶ್ ನಾಯ್ಕ ಉಳಿಪಾಡಿ ಮಾತನಾಡಿ, ಆಧುನಿಕ ಯುಗದಲ್ಲಿ ಗಾಣಿಗ ಸಮುದಾಯವು ಕುಲಕಸುಬು ಯಾಂತ್ರಿಕರಣಗೊಳಿಸಿ ಹೊಸ ರೂಪ ನೀಡಲು ಮುಂದಾದರೆ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು. ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಮಾಜಿ ಸಚಿವ ಬಿ.ರಮಾನಾಥ ರೈ ಮಾತನಾಡಿ, ಗಾಣಿಗರು ಯಾಂತ್ರಿಕ ಉದ್ದಿಮೆ ಆರಂಭಿಸಿದಾಗ ಉದ್ಯೋಗ ಸೃಷ್ಟಿಯಾಗುತ್ತದೆ ಎಂದರು.

### ಚಿರತೆ ಸಾವು: ತನಿಖೆಗೆ ತಂಡ ರಚನೆ

• ಉದಯವಾಹಿನಿ, ಚಿಕ್ಕಮಗಳೂರು


ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿ ಬಳಿ ನಡೆದಿದ್ದ ಚಿರತೆ ಸಾವಿನ ಕುರಿತ ತನಿಖೆಗೆ ಶಿವಮೊಗ್ಗ ಸಿಸಿಎಫ್ ನೇತೃತ್ವದಲ್ಲಿ ಇಲಾಖೆ ತಂಡ ರಚಿಸಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ವಲಯದ ದೇವಿಹಳ್ಳಿಯಲ್ಲಿ ಜುಲೈ 30ರಂದು ಸೆರೆ ಹಿಡಿದ ಚಿರತೆಯನ್ನು ಅದೇ ರಾತ್ರಿ ಎಮ್ಮೆದೊಡ್ಡಿ ಬಳಿ ಬಿಡಲಾಗಿದೆ. ಈ ವೇಳೆ ಅರಣ್ಯ ಇಲಾಖೆ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಪಾಲಿಸಿಲ್ಲ ಎಂಬ ಅನುಮಾನ ವ್ಯಕ್ತವಾಗಿತ್ತು. ಎಮ್ಮದೊಡ್ಡಿ ಬಳಿ ಜನರ ಮೇಲೆ ದಾಳಿ ಮಾಡಿದ್ದ ಚಿರತೆ ಸತ್ತಿದೆಯೇ, ಜನ ಕಲ್ಲು ತೂರಿದ ಚಿರತೆಯೇ ಎಂಬ ಬಗ್ಗೆ ತನಿಖೆ ನಡೆಸಿ ಏಳು ದಿನಗಳಲ್ಲಿ ವರದಿ ಸಲ್ಲಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಉದಯ ವಾಹಿನಿ



# ಏನು ಮಾತನಾಡುತ್ತಿದ್ದೀರಿ ಎಂಬ ಅರಿವು ಇರಲಿ

**ಮಾಸ್ಕೋ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸೂಕ್ತ ಪ್ರದೇಶಕ್ಕೆ ಎರಡು ಪರಮಾಣು ಜಲಾಂತರ್ಗಾಮಿ ಕಳುಹಿಸುವ ನಿರ್ಧಾರ ಟೀಕಿಸಿರುವ ರಷ್ಯಾ, ಪರಮಾಣು ಬೆದರಿಕೆಗಳ ಬಗ್ಗೆ ಮಾತನಾಡುವಾಗ ಎಚ್ಚರದಿಂದ ಇರಬೇಕು ಎಂದು ಸೂಚ್ಯವಾಗಿ ಹೇಳಿದೆ. ರಷ್ಯಾಗೆ ಡೊನಾಲ್ಡ್ ಟ್ರಂಪ್ ಅವರ ಪರಮಾಣು ಬೆದರಿಕೆಗಳ ಬಗ್ಗೆ ಇದೇ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿರುವ ಕ್ರೆಮ್ಲಿನ್, ಇಂತಹ ಪರಮಾಣು ಬೆದರಿಕೆಗಳು ಜಾಗತಿಕ ಆತಂಕ ಹೆಚ್ಚಳಕ್ಕೆ ಕಾರಣವಾಗುತ್ತವೆಯೇ ಹೊರತು, ರಷ್ಯಾದ ಮೇಲೆ ಯಾವುದೇ ಪರಿಣಾಮ ಬೀರದು ಎಂದು ಹೇಳಿದೆ.



ಅಮೆರಿಕವೂ ಸೇರಿದಂತೆ ಜಗತ್ತಿನ ಯಾವುದೇ ರಾಷ್ಟ್ರ ರಷ್ಯಾಗೆ ಪರಮಾಣು ಬೆದರಿಕೆ ಹಾಕುವ ಮುನ್ನ ಯೋಚಿಸಬೇಕು. ಅಮೆರಿಕ ತನ್ನ ಎರಡು ಪರಮಾಣು ಜಲಾಂತರ್ಗಾಮಿಗಳನ್ನು ಸೂಕ್ತ ಪ್ರದೇಶಕ್ಕೆ ರವಾನಿಸುವ ನಿರ್ಧಾರ ಮಾಡಿದೆ. ಇದಕ್ಕೆ ನಮ್ಮ ಪರಮಾಣು ಜಲಾಂತರ್ಗಾಮಿಗಳನ್ನು ಸನ್ನದ್ಧಗೊಳಿಸುವ ಮೂಲಕ ನಾವು ಉತ್ತರ ನೀಡುತ್ತೇವೆ ಎಂದು ಕ್ರೆಮ್ಲಿನ್ ತಿರುಗೇಟು ನೀಡಿದೆ.

**ಖಾರದ ಪ್ರತಿಕ್ರಿಯೆ ಏಕೆ?:** ಇತ್ತೀಚಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ರಷ್ಯಾದ ಸಮೀಪಕ್ಕೆ ಎರಡು ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ರವಾನಿಸುವಂತೆ ಅಮೆರಿಕನ್ ನೌಕಾಸೇನೆಗೆ ಆದೇಶ ಮಾಡಿದ್ದರು. ಟ್ರಂಪ್ ಇಂತಹ ನಿರ್ಧಾರ ತೆಗೆದುಕೊಳ್ಳಲು ರಷ್ಯಾದ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ನೀಡಿದ್ದ ಹೇಳಿಕೆಗಳು ಕಾರಣವಾಗಿದ್ದವು. ರಷ್ಯಾದ ಭದ್ರತಾ ಮಂಡಳಿ ಉಪಾಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್, ಅಮೆರಿಕಕ್ಕೆ ಪದೇ ಪದೇ ಯುದ್ಧದ ಬೆದರಿಕೆ ಹಾಕುತ್ತಿದ್ದಾರೆ.

ರಷ್ಯಾದ ಆರ್ಥಿಕತೆ ಸತ್ತಿದೆ ಎಂಬ ಟ್ರಂಪ್ ಹೇಳಿಕೆಗೆ ಡೆಡ್ ಹ್ಯಾಂಡ್ ಪರಮಾಣು ಅಸ್ತ್ರನೆನಪು ಮಾಡಿಕೊಳ್ಳುವಂತೆ ಮೆಡ್ವೆಡೆವ್ ಸೂಚಿಸಿದ್ದರು. ಇದರಿಂದ ರೊಚ್ಚಿಗೆದ್ದ ಟ್ರಂಪ್, ರಷ್ಯಾ ಬಳಿ ಎರಡು ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ನಿಯೋಜಿಸುವಂತೆ ಆದೇಶ ಹೊರಡಿಸಿದ್ದರು. ಇದಕ್ಕೆ ಪ್ರತಿಯಾಗಿ ಇದೀಗ ಕ್ರೆಮ್ಲಿನ್ ತನ್ನ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿದೆ. ಈ ಕುರಿತು ಮಾತನಾಡಿರುವ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್, ಈ ಸಂದರ್ಭದಲ್ಲಿ ಅಮೆರಿಕನ್ ಜಲಾಂತರ್ಗಾಮಿ ನೌಕೆಗಳು ಈಗಾಗಲೇ ಯುದ್ಧ ಕರ್ತವ್ಯದಲ್ಲಿವೆ ಎಂಬುದು ಸ್ಪಷ್ಟವಾಗಿದೆ. ನಾವು ಇದಕ್ಕೆ ಸೂಕ್ತ ಪ್ರತಿಕ್ರಿಯೆ ನೀಡುತ್ತೇವೆ. ಆದರೆ ಅಮೆರಿಕ ಅಧ್ಯಕ್ಷರು ರಷ್ಯಾಗೆ ಪರಮಾಣು ಬೆದರಿಕೆ ಹಾಕುವ ಮೊದಲು ಯೋಚಿಸಬೇಕು ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

> **ಇದೇ ವೇಳೆ ಡೊನಾಲ್ಡ್ ಟ್ರಂಪ್ ಅವರೊಂದಿಗಿನ ಆನ್‌ಲೈನ್ ವಾಗ್ವಾದವನ್ನು ಕಡಿಮೆ ಮಾಡುವಂತೆ, ಡಿಮಿಟ್ರಿ ಮೆಡ್ವೆಡೆವ್ ಅವರಿಗೆ ಕ್ರೆಮ್ಲಿನ್ ಸೂಚಿಸಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಲು ಡಿಮಿಟ್ರಿ ಪೆಸ್ಕೋವ್ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಪ್ರತಿಯೊಂದೂ ದೇಶದಲ್ಲೂ ಅದರ ನಾಯಕರು ಜಾಗತಿಕ ಬೆಳವಣಿಗೆಗಳ ಬಗ್ಗೆ ತಮ್ಮದೇ ಆದ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುತ್ತಾರೆ. ಯಾರನ್ನೂ ಸುಮ್ಮನಿರುವಂತೆ ಕೇಳಿಕೊಳ್ಳಲು ಸಾಧ್ಯವಿಲ್ಲ ಎಂದು ಪೆಸ್ಕೋವ್ ಪ್ರತಿಕ್ರಿಯಿಸಿದರು.**

ಮುಂದುವರೆದು, ಸಾಮಾನ್ಯವಾಗಿ ನಾವು ಅಂತಹ ವಿವಾದದಲ್ಲಿ ಭಾಗಿಯಾಗಲು ಬಯಸುವುದಿಲ್ಲ ಮತ್ತು ಅದರ ಬಗ್ಗೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸಲು ಬಯಸುವುದಿಲ್ಲ. ಆದರೆ ರಷ್ಯಾಗೆ ಪರಮಾಣು ಬೆದರಿಕೆ ಹಾಕುವ ಮೊದಲು ಜಾಗೂರಕರಾಗಿರಬೇಕುಗಳು ಎಂದು ಡಿಮಿಟ್ರಿ ಪೆಸ್ಕೋವ್ ಎಚ್ಚರಿಸಿದ್ದಾರೆ. ನಮ್ಮ ದೇಶದಲ್ಲಿ ವಿದೇಶಾಂಗ ನೀತಿಯನ್ನು ರಾಷ್ಟ್ರದ ಮುಖ್ಯಸ್ಥರಾದ ವ್ಲಾಡಿಮಿರ್ ಪುಟಿನ್ ನಿರ್ಧರಿಸುತ್ತಾರೆ. ಈ ವಿಚಾರದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಡಿಮಿಟ್ರಿ ಪೆಸ್ಕೋವ್ ಇದೇ ವೇಳೆ ಸ್ಪಷ್ಟಪಡಿಸಿದ್ದಾರೆ.

## ಪೆಹಲ್ಗಾಮ್‌ನಲ್ಲಿ ದಾಳಿ ನಡೆಸಿದವರು ಪಾಕ್ ಉಗ್ರರು: ಭದ್ರತಾ ಏಜೆನ್ಸಿ



**ಶ್ರೀನಗರ:** ಭಾರತೀಯ ಭದ್ರತಾ ಏಜೆನ್ಸಿಗಳು ಕಲೆಹಾಕಿದ ಮಾಹಿತಿ ಸೇರಿದಂತೆ ಪಾಕಿಸ್ತಾನ ಸರ್ಕಾರ ನೀಡಿದ ದಾಖಲೆಗಳು ಮತ್ತು ಬಯೋಮೆಟ್ರಿಕ್ ಮಾಹಿತಿಗಳ ಬಗ್ಗೆ ತನಿಖೆ ನಡೆಸಿದಾಗ ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ದಾಳಿ ನಡೆಸಿದ ಮೂವರೂ ಪಾಕಿಸ್ತಾನಿ ಮೂಲದವರು ಎನ್ನುವುದು ದೃಢಪಟ್ಟಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಉಗ್ರಗಾಮಿಗಳನ್ನು ಲಷ್ಕರ್- ಎ-ತಯಬಾದ (ಎಲ್‌ಇಟಿ) ಹಿರಿಯ ಕಾರ್ಯಕರ್ತರು ಎಂದು ಗುರುತಿಸಲಾಗಿದೆ. ಇವರು ಜುಲೈ 28ರಂದು ಶ್ರೀನಗರದ ಹೊರವಲಯದ ಡಚಿಗಮ್ ಅರಣ್ಯ ಪ್ರದೇಶದಲ್ಲಿ ಭಾರತೀಯ ಭದ್ರತಾ ಪಡೆದಗಳು ನಡೆಸಿದ ಆಪರೇಷನ್ ಮಹಾದೇವ್ ಕಾರ್ಯಾಚರಣೆಯಲ್ಲಿ ಮೃತಪಟ್ಟಿದ್ದಾರೆ. ಇವರು ಏ. 22ರಂದು ದಾಳಿ ನಡೆಸಿದ ಬಳಿಕ ಡಚಿಗಮ್-ಹರ್ವಾನ್ ಅರಣ್ಯ ಪ್ರದೇಶದಲ್ಲಿ ಅಡಗಿಕೊಂಡಿದ್ದರು. ಪಾಕಿಸ್ತಾನದ ರಾಷ್ಟ್ರೀಯ ಮಾಹಿತಿ, ನೋಂದಣಿ ಪ್ರಾಧಿಕಾರದ ಬಯೋಮೆಟ್ರಿಕ್ ದಾಖಲು, ಮತದಾರರ ಗುರುತಿನ ಚೀಟಿಗಳು ಮತ್ತು ಡಿಜಿಟಲ್ ಸ್ಯಾಟಲೈಟ್ ಫೋನ್ ಮಾಹಿತಿ, ಲಾಗ್‌ಗಳು ಮತ್ತು ಜಿಪಿಎಸ್ ವೇ ಪಾಯಿಂಟ್‌ಗಳು ಸೇರಿದಂತೆ, ಭದ್ರತಾ ಸಂಸ್ಥೆಗಳು ಸಂಗ್ರಹಿಸಿದ ಪ್ರಮುಖ ಪುರಾವೆಗಳಲ್ಲಿ ಮೂವರು ಭಯೋತ್ಪಾದಕರು ಪಾಕಿಸ್ತಾನದ ರಾಷ್ಟ್ರೀಯತೆ ಹೊಂದಿರುವುದು ಸ್ಪಷ್ಟವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬ್ಯಾಲಿಸ್ಟಿಕ್ಸ್ ಆಯುಧ-ಬುಲೆಟ್‌ಗಳ ಹೊಂದಾಣಿಕೆ, ಬಂಧಿತ ಇಬ್ಬರು ಕಾಶ್ಮೀರಿ ಸಹಾಯಕರ ಹೇಳಿಕೆಗಳು ಸೇರಿದಂತೆ ಎನ್‌ಕೌಂಟರ್ ನಂತರದ ತನಿಖೆಯು ಪೆಹಲ್ಗಾಮ್ ದಾಳಿಯಲ್ಲಿ ಭಯೋತ್ಪಾದಕರ ಭಾಗಿಯಾಗುವಿಕೆಯನ್ನು ದೃಢಪಡಿಸಿದೆ ಎಂದು ಅವರು ಹೇಳಿದರು. ಮೂವರು ಉಗ್ರರನ್ನು, ಸುಲೇಮಾನ್ ಶಾ ಅಲಿಯಾಸ್ 'ಫೈಜಲ್ ಜತ್' ಈತ ಎ+ + ವಿಭಾಗದ ಉಗ್ರನಾಗಿದ್ದು, ದಾಳಿಯ ಮಾಸ್ಟರ್‌ಮೈಂಡ್ ಆಗಿದ್ದಾನೆ. ಈತನ ಆಪ್ತ ಅಬು ಹಮಾಜ್ ಅಲಿಯಾಸ್ ಅಫ್ಘಾನ್, ಈತ ಎ ಗ್ರೇಡ್ ಕಮಾಂಡರ್. ಮತ್ತೋರ್ವ ಯಾಸಿರ್ ಅಲಿಯಾಸ್ ಜಿಬ್ರಾನ್ ಈತ ಕೂಡ ಎ ಗ್ರೇಡ್ ಕಮಾಂಡರ್ ಆಗಿದ್ದಾನೆ ಎಂದು ಉಗ್ರರ ಬಗ್ಗೆ ಮಾಹಿತಿ ಬಹಿರಂಗಪಡಿಸಿದ್ದಾರೆ.

## ಭೂಕಬಳಿಕೆ ವಿಚಾರದಲ್ಲಿ ರಾಹುಲ್‌ಗೆ ಸುಪ್ರೀಂ ತರಾಟೆ

### ನೀವು ನಿಜವಾದ ಭಾರತೀಯರಾಗಿದ್ದರೆ ಇದನ್ನು ಹೇಳುವುದಿಲ್ಲ ಎಂದ ನ್ಯಾಯಮೂರ್ತಿಗಳು

**ಹೊಸದಿಲ್ಲಿ:** ಚೀನಾದಿಂದ ಭಾರತದ ಭೂ ಕಬಳಿಕೆ ಹೇಳಿಕೆ ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಚೀನಿಯರು ವಶಪಡಿಸಿಕೊಂಡಿದ್ದಾರೆ ಎಂದು ನಿಮಗೆ ಹೇಗೆ ತಿಳಿಯಿತು? ಎಂದು ಪ್ರಶ್ನೆ ಮಾಡಿರುವ ಕೋರ್ಟ್, ನೀವು ನಿಜವಾದ ಭಾರತೀಯರಾಗಿದ್ದರೆ ಇದನ್ನು ಹೇಳುವುದಿಲ್ಲ ಎಂದು ಕಿಡಿಕಾರಿದೆ. ಭಾರತೀಯ ಸೇನೆಯ ಬಗ್ಗೆ ಹೇಳಿಕೆ ನೀಡಿದ್ದಕ್ಕಾಗಿ ತಮ್ಮ ವಿರುದ್ಧದ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕೋರಿ ರಾಹುಲ್ ಗಾಂಧಿ ಸುಪ್ರೀಂಗೆ ಅರ್ಜಿ ಸಲ್ಲಿಸಿದ್ದರು. ಸೋಮವಾರ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ, ಎಜಿ ಮಸೀಹ್ ಅವರ ಪೀಠವು ಈ ಪ್ರಕರಣದ ವಿಚಾರಣೆ ನಡೆಸಿತು. ಕ್ರಿಮಿನಲ್ ದೂರನ್ನು ಪರಿಗಣಿಸುವ ಮೊದಲು ರಾಹುಲ್ ಗಾಂಧಿ ಅವರ ಪೂರ್ವ ವಿಚಾರಣೆಗೆ ಪೊಲೀಸರು ಅವಕಾಶ ನೀಡದಿರುವುದು ಸೇರಿ ಆರೋಪಗಳನ್ನು ದಾಖಲಿಸುವಲ್ಲಿ ಬಹಳಷ್ಟು ತಪ್ಪು ನಡೆದಿದೆ ಎಂದು ಅಭಿಷೇಕ್ ಮನು ಸಿಂಘ್ವಿ ವಾದಿಸಿದರು. ಇದಾದ ಬಳಿಕ ಸುಪ್ರೀಂ ಕೋರ್ಟ್ ಸದ್ಯಕ್ಕೆ ಮೊಕದ್ದಮೆ ಕೇಸ್‌ಗೆ ತಡೆ ನೀಡಿ, ವಿಚಾರಣೆಯನ್ನು ಮುಂದೂಡಿದೆ.

**ಮೊಕದ್ದಮೆ ಕೇಸ್‌ಗೆ ತಡೆ**

ಸುಪ್ರೀಂ ಕೋರ್ಟ್‌ನಲ್ಲಿ ರಾಹುಲ್ ಗಾಂಧಿ ಪರ ವಾದ ಮಂಡಿಸಿದ, ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಅದು ಒಂದು ಸಾಮಾನ್ಯ ಹೇಳಿಕೆ ಅಷ್ಟೇ, ವಿರೋಧ ಪಕ್ಷದ ನಾಯಕರಾಗಿ ಅವರು ಹಾಗೆ ಹೇಳದಿದ್ದರೆ ಹೇಗೆ? ಎಂದು ಹೇಳಿದರು. ಆಗ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ದೀಪಂಕರ್ ದತ್ತಾ ಅವರು. ಅಂತಹ ಮಾತುಗಳನ್ನು ಸಂಸತ್ತಿನಲ್ಲಿ ಹೇಳಿ, ಸಾಮಾಜಿಕ ಜಾಲತಾಣಗಳಲ್ಲಿ ಯಾಕೆ ಹೇಳಬೇಕು? ಗಡಿಯಲ್ಲಿ ಸಂಘರ್ಷವಾದಾಗ, ಎರಡೂ ಕಡೆ ಸಾವುನೋವುಗಳು ಸಂಭವಿಸುವುದು ಅಸಾಮಾನ್ಯವೇ? ಎಂದು ಪ್ರಶ್ನಿಸಿದರು. ಅದಲ್ಲದೇ, ರಾಹುಲ್ ಗಾಂಧಿಯವರನ್ನು ಉದ್ದೇಶಿಸಿ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ, 2000 ಚದರ ಕಿಲೋ ಮೀಟರ್ ಭಾರತೀಯ ಭೂಪ್ರದೇಶವನ್ನು ಚೀನಿಯರು ಆಕ್ರಮಿಸಿಕೊಂಡಿದ್ದಾರೆ ಎಂದು ನಿಮಗೆ ಹೇಗೆ ತಿಳಿಯಿತು? ನೀವು ಅಲ್ಲಿಗೆ ಹೋಗಿದ್ದೀರಾ? ನಿಮ್ಮ ಬಳಿ ಯಾವುದಾದರೂ ವಿಶ್ವಾಸಾರ್ಹ ದಾಖಲೆ ಇದೆಯೇ? ನೀವು ನಿಜವಾದ ಭಾರತೀಯರಾಗಿದ್ದರೆ, ಇಂತಹ ಮಾತುಗಳನ್ನು ಆಡುತ್ತಿರಲಿಲ್ಲ ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.



### ರಫೇಲ್ ವಿಚಾರದಲ್ಲಿಯೂ ಕ್ಷಮೆ ಕೇಳಿದ್ದ ರಾಹುಲ್

**ಕೆಲ ವರ್ಷಗಳ ಹಿಂದೆ ರಫೇಲ್ ಫೈಟರ್ ಜೆಟ್ ಹಗರಣದ ಕುರಿತು ಸುಪ್ರೀಂ ಕೋರ್ಟ್ ಆದೇಶದ ನಂತರವೂ ಪ್ರಧಾನಿ ಮೋದಿ ವಿರುದ್ಧದ 'ಚೌಕಿದಾರ್ ಚೋರ್ ಹೈ' ಎಂಬ ಹೇಳಿಕೆಯನ್ನು ರಾಹುಲ್ ಗಾಂಧಿ ನೀಡಿದ್ದರು. ಈ ಬೆನ್ನಲ್ಲೆ ನ್ಯಾಯಾಂಗ ನಿಂದನೆ ವಿಚಾರದಲ್ಲಿ ತಪ್ಪನ್ನು ಒಪ್ಪಿಕೊಳ್ಳುವಂತೆ ಸುಪ್ರೀಂಕೋರ್ಟ್ ತಾಕೀತು ಮಾಡಿತ್ತು. ಈ ಬಗ್ಗೆ ನ್ಯಾಯಾಂಗ ನಿಂದನೆ ಎಂದು ಸುಪ್ರೀಂ ಕೋರ್ಟ್‌ಗೆ ರಾಹುಲ್ ಗಾಂಧಿ ಕ್ಷಮೆ ಕೋರಿದ್ದರು.**

### ಭಾರತ್ ಜೋಡೋ ಯಾತ್ರೆಯಲ್ಲಿ ಸೇನೆ ಬಗ್ಗೆ ಹೇಳಿಕೆ

**ಪ್ರಕರಣದ ಹಿನ್ನೆಲೆ ಏನು ಎಂಬುದನ್ನು ನೋಡಿದರೆ, ಡಿಸೆಂಬರ್ 16, 2022 ರಂದು ತಮ್ಮ ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ, ಚೀನಾ ನಮ್ಮ 2000 ಚದರ ಕಿಮೀ ಭೂಪ್ರದೇಶವನ್ನು ಆಕ್ರಮಿಸಿಕೊಂಡಿದೆ. 20 ಭಾರತೀಯ ಸೈನಿಕರನ್ನು ಕೊಂದಿದೆ, ಅರುಣಾಚಲ ಪ್ರದೇಶದಲ್ಲಿ ನಮ್ಮ ಸೈನಿಕರನ್ನು ಚೀನಾ ಸೈನಿಕರು ಹೊಡೆದಿದ್ದಾರೆ ಎಂದು ಹೇಳಿದ್ದರು. ಈ ಹೇಳಿಕೆ ಸೇನೆಗೆ ಮಾಡಿದ ಅವಮಾನ ಎಂದು ಆರೋಪಿಸಿ ಗಡಿ ರಸ್ತೆ ಸಂಸ್ಥೆಯ ಮಾಜಿ ನಿರ್ದೇಶಕರೊಬ್ಬರು ಲಕ್ನೋದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದರು.**


ಈ ಹಿನ್ನೆಲೆ ವಿಶೇಷ ನ್ಯಾಯಾಲಯ ಫೆಬ್ರವರಿಯಲ್ಲಿ ರಾಹುಲ್ ಗಾಂಧಿ ವಿರುದ್ಧ ಸಮನ್ಸ್ ಅನ್ನು ನೀಡಿತ್ತು. ಈ ಸಮನ್ಸ್ ಅನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಿದ್ದರೂ, ಆದರೆ, ಮೇ ತಿಂಗಳಲ್ಲಿ ಈ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ತಿರಸ್ಕರಿಸಿತ್ತು. ಈ ವೇಳೆ ವಾಕ್ ಸ್ವಾತಂತ್ರ್ಯವು ಸೇನೆಯನ್ನು ಅವಮಾನಿಸುವ ಹೇಳಿಕೆಗಳನ್ನು ನೀಡುವ ಹಕ್ಕನ್ನು ನೀಡಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆ ತಮ್ಮ ವಿರುದ್ಧದ ಮಾನನಷ್ಟ ಮೊಕದ್ದಮೆ ಕೇಸ್ ಅನ್ನು ವಜಾಗೊಳಿಸಬೇಕು ಎಂದು ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

## ಭಾರತದ ವಿರುದ್ಧ ಹರಿಹಾಯ್ದ ಟ್ರಂಪ್ ಸಹಾಯಕ

**ನ್ಯೂಯಾರ್ಕ್:** ಭಾರತವು ತನ್ನನ್ನು ತಾನು ಅಮೆರಿಕದ ಅತ್ಯಂತ ಆತ್ಮೀಯ ಸ್ನೇಹಿತರಲ್ಲಿ ಒಬ್ಬನೆಂದು ಬಿಂಬಿಸಿಕೊಳ್ಳುತ್ತದೆ, ಆದರೆ ಬೃಹತ್ ಸುಂಕಗಳನ್ನು ವಿಧಿಸುತ್ತದೆ, ವಲಸೆ ನೀತಿಗಳ ಮೇಲೆ ವಂಚನೆಯಲ್ಲಿ ತೊಡಗಿದೆ, ರಷ್ಯಾದ ತೈಲ ಖರೀದಿಯು ಉಕ್ರೇನ್ ಯುದ್ಧಕ್ಕೆ ಹಣಕಾಸು ಒದಗಿಸುತ್ತಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉನ್ನತ ಸಹಾಯಕ ಆರೋಪಿಸಿದ್ದಾರೆ.

ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಶ್ವೇತಭವನದ ಉಪ ಮುಖ್ಯಸ್ಥ ಸ್ಟೀಫನ್ ಮಿಲ್ಲರ್ ಅವರು, ಟ್ರಂಪ್ ರಷ್ಯಾದಿಂದ ತೈಲವನ್ನು ಖರೀದಿಸುವ ಮೂಲಕ ಈ ಯುದ್ಧಕ್ಕೆ ಹಣಕಾಸು ಒದಗಿಸುವುದನ್ನು ಭಾರತ ಮುಂದುವರಿಸುವುದು ಸ್ವೀಕಾರಾರ್ಹವಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ರಷ್ಯಾದ ತೈಲವನ್ನು ಖರೀದಿಸುವಲ್ಲಿ ಭಾರತ ಮೂಲತಃ ಚೀನಾದೊಂದಿಗೆ ಸಂಬಂಧ ಹೊಂದಿದೆ ಎಂದು ತಿಳಿದು ಜನರು ಆಘಾತಕ್ಕೊಳಗಾಗುತ್ತಾರೆ ಎಂದು ಮಿಲ್ಲರ್ ಹೇಳಿದರು.

ಅದು ಆಶ್ಚರ್ಯಕರ ಸಂಗತಿಯಾಗಿದೆ, ಅವರು ಹೇಳಿದರು,ಭಾರತವು ವಿಶ್ವದ ನಮ್ಮ ಅತ್ಯಂತ ಆತ್ಮೀಯ ಸ್ನೇಹಿತರಲ್ಲಿ ಒಬ್ಬರು ಎಂದು ಬಿಂಬಿಸಿಕೊಳ್ಳುತ್ತದೆ, ಆದರೆ ಅವರು ನಮ್ಮ ಉತ್ಪನ್ನಗಳನ್ನು ಸ್ವೀಕರಿಸುವುದಿಲ್ಲ, ಅವರು ನಮ್ಮ ಮೇಲೆ ಬೃಹತ್ ಸುಂಕಗಳನ್ನು ವಿಧಿಸುತ್ತಾರೆ, ವಲಸೆ ನೀತಿಗಳ ಮೇಲೆ ಅವರು ಬಹಳಷ್ಟು ವಂಚನೆಯಲ್ಲಿ ತೊಡಗಿದ್ದಾರೆ ಎಂದು ನಮಗೆ ತಿಳಿದಿದೆ, ಇದು ಅಮೆರಿಕನ್ ಕಾರ್ಮಿಕರಿಗೆ ತುಂಬಾ ಹಾನಿಕಾರಕವಾಗಿದೆ. ಖಂಡಿತ, ನಾವು ಮತ್ತೆ ನೋಡುತ್ತೇವೆ, ಎಂದು ರಷ್ಯಾದಿಂದ ತೈಲ ಖರೀದಿಯನ್ನು ನೋಡುತ್ತೇವೆ ಎಂದು ಮಿಲ್ಲರ್ ಹೇಳಿದರು. ಟ್ರಂಪ್ ಒಂದು ಅದ್ಭುತ ಸಂಬಂಧವನ್ನು ಬಯಸುತ್ತಾರೆ ಮತ್ತು ಯಾವಾಗಲೂ ಭಾರತ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಅದ್ಭುತ ಸಂಬಂಧವನ್ನು ಹೊಂದಿದ್ದಾರೆ, ಆದರೆ ಈ ಯುದ್ಧದ ಹಣಕಾಸಿನ ಬಗ್ಗೆ ಅಮೆರಿಕ ವಾಸ್ತವಿಕತೆಯನ್ನು ತಿಳಿದುಕೊಳ್ಳಬೇಕು ಎಂದು ಅವರು ಹೇಳಿದರು.



> **ಯಾವಾಗಲೂ ತಮ್ಮ ಮಿಲಿಟರಿ ಉಪಕರಣಗಳಲ್ಲಿ ಹೆಚ್ಚಿನದನ್ನು ರಷ್ಯಾದಿಂದ ಖರೀದಿಸಿದ್ದಾರೆ, ಚೀನಾದೊಂದಿಗೆ ರಷ್ಯಾದ ಅತಿದೊಡ್ಡ ಇಂಧನ ಖರೀದಿದಾರರಾಗಿದ್ದಾರೆ, ರಷ್ಯಾ, ಹತ್ಯೆಯನ್ನು ನಿಲ್ಲಿಸಬೇಕೆಂದು ಎಲ್ಲರೂ ಬಯಸುವ ಸಮಯದಲ್ಲಿ ಉಕ್ರೇನ್ ಎಲ್ಲವೂ ಒಳ್ಳೆಯದಲ್ಲ ಎಂದು ಟ್ರಂಪ್ ಹೇಳಿದ್ದರು. ಆದ್ದರಿಂದ ಆಗಸ್ಟ್ 1 ರಿಂದ ಭಾರತವು ಶೇಕಡಾ 25 ರಷ್ಟು ಸುಂಕವನ್ನು, ಮೇಲಿನದಕ್ಕೆ ದಂಡವನ್ನು ಪಾವತಿಸಲಿದೆ ಎಂದರು.**

ಅಧ್ಯಕ್ಷ ಟ್ರಂಪ್, ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ರಾಜತಾಂತ್ರಿಕವಾಗಿ, ಆರ್ಥಿಕವಾಗಿ ಮತ್ತು ಇಲ್ಲದಿದ್ದರೆ ನಿಭಾಯಿಸಲು ಎಲ್ಲಾ ಆಯ್ಕೆಗಳು ಮೇಜಿನ ಮೇಲಿವೆ, ಆದ್ದರಿಂದ ನಾವು ಶಾಂತಿಯನ್ನು ಸಾಧಿಸಬಹುದು ಮತ್ತು ಡೆಮಾಕ್ರಟಿಕ್ ಪಕ್ಷ ಮತ್ತು ಜೋ ಬಿಡೆನ್ ಜವಾಬ್ದಾರರಾಗಿರುವ ಯುದ್ಧವನ್ನು ಕೊನೆಗೊಳಿಸಬಹುದು ಎಂದು ಅವರು ಹೇಳಿದರು.

ಕಳೆದ ವಾರ, ಟ್ರಂಪ್ ಅವರು ಅಮೆರಿಕವು ಭಾರತದೊಂದಿಗೆ ಭಾರಿ ವ್ಯಾಪಾರ ಕೊರತೆಯನ್ನು ಹೊಂದಿದೆ ಎಂದು ಹೇಳಿದರು. ಭಾರತ ನಮ್ಮ ಸ್ನೇಹಿತನಾಗಿದ್ದರೂ, ನಾವು ವರ್ಷಗಳಲ್ಲಿ ಅವರೊಂದಿಗೆ ತುಲನಾತ್ಮಕವಾಗಿ ಕಡಿಮೆ ವ್ಯವಹಾರವನ್ನು ಮಾಡಿದ್ದೇವೆ ಏಕೆಂದರೆ ಅವರ ಸುಂಕಗಳು ತುಂಬಾ ಹೆಚ್ಚಿವೆ, ವಿಶ್ವದಲ್ಲೇ ಅತ್ಯಧಿಕವಾಗಿವೆ, ಅವರು ಯಾವುದೇ ದೇಶಕ್ಕಿಂತ ಅತ್ಯಂತ ಕಠಿಣ, ಅಸಹ್ಯಕರವಾದ ವಿತ್ತೀಯವಲ್ಲದ ವ್ಯಾಪಾರ ಅಡೆತಡೆಗಳನ್ನು ಹೊಂದಿದ್ದಾರೆ ಎಂದು ಅವರು ಹೇಳಿದರು.

## ಭಾರತ, ಸಿಂಗಾಪುರ ಕಡಲ ವ್ಯಾಯಾಮ ಪೂರ್ಣ

**ಸಿಂಗಾಪುರ:** ರಿಪಬ್ಲಿಕ್ ಆಫ್ ಸಿಂಗಾಪುರ್ ನೌಕಾಪಡೆ, ಭಾರತೀಯ ನೌಕಾಪಡೆ ಜುಲೈ 28 ರಿಂದ ಆಗಸ್ಟ್ 1 ರವರೆಗೆ ನಡೆದ ವಾರ್ಷಿಕ ಸಿಂಗಾಪುರ-ಭಾರತ ಕಡಲ ದ್ವಿಪಕ್ಷೀಯ ವ್ಯಾಯಾಮಅನ್ನು ಪೂರ್ಣಗೊಳಿಸಿವೆ. ಈ ವರ್ಷದ ವ್ಯಾಯಾಮವು ಆರ್‌ಎಸ್‌ಎನ್ ಸಿಂಗಾಪುರ-ಚಾಂಗಿ ನೌಕಾ ನೆಲೆಯಲ್ಲಿ ನಡೆದ ತೀರ ಹಂತವನ್ನು ಒಳಗೊಂಡಿತ್ತು, ನಂತರ ದಕ್ಷಿಣ ಚೀನಾ ಸಮುದ್ರದ ದಕ್ಷಿಣ ಪ್ರದೇಶಗಳಲ್ಲಿ ನಡೆದ ಸಮುದ್ರ ಹಂತವನ್ನು ಒಳಗೊಂಡಿತ್ತು. ಸಮುದ್ರ ಹಂತದಲ್ಲಿ ನೌಕಾಪಡೆಗಳು ಮತ್ತು ರಿಪಬ್ಲಿಕ್ ಆಫ್ ಸಿಂಗಾಪುರ್ ವಾಯುಪಡೆಯ ವಿಮಾನಗಳೆರಡರ ಹಡಗುಗಳು ಸೇರಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಆರ್‌ಎಸ್‌ಎನ್ ಫಾರ್ಮಿಡಬಲ್-ಕ್ಲಾಸ್ ಫ್ರಿಗೇಟ್, ಆರ್‌ಎಸ್‌ಎಸ್ ಸುಪ್ರೀಂ, ಎಂವಿ ಮೆಂಟರ್ ಬೆಂಬಲದೊಂದಿಗೆ ವಿಕ್ಟರಿ-ಕ್ಲಾಸ್ ಮಿಸೈಲ್ ಕಾರ್ವೆಟ್, ಆರ್‌ಎಸ್‌ಎಸ್ ವಿಜಿಲೆನ್ಸ್ ಅನ್ನು ನಿಯೋಜಿಸಿತು. ಭಾರತೀಯ ನೌಕಾಪಡೆಯು ಶಿವಾಲಿಕ್-ಕ್ಲಾಸ್ ಫ್ರಿಗೇಟ್, ಐಎನ್‌ಎಸ್ ಸತ್ಪುರದೊಂದಿಗೆ ಭಾಗವಹಿಸಿತು.



ಆರ್‌ಎಸ್‌ಎಫ್‌ನಿಂದ ಎಸ್ 70 ಬಿ ನೌಕಾ ಹೆಲಿಕಾಪ್ಟರ್, ಎರಡು ಫೋಕರ್ -50 ಕಡಲ ಗಸ್ತು ವಿಮಾನ, ಎರಡು ಎಫ್ -15 ಎಸ್‌ಜಿ ಯುದ್ಧ ವಿಮಾನಗಳು ಸಹ ಈ ವ್ಯಾಯಾಮದಲ್ಲಿ ಭಾಗವಹಿಸಿದ್ದವು. ಕರಾವಳಿ ಹಂತದಲ್ಲಿ, ಎರಡೂ ನೌಕಾಪಡೆಗಳು ಜಂಟಿ ಯೋಜನೆ, ಸಿಮ್ಯುಲೇಟರ್ ತರಬೇತಿ, ವೃತ್ತಿಪರ ವಿನಿಮಯ, ಕ್ರೀಡೆಗಳಲ್ಲಿ ಭಾಗವಹಿಸಿದವು. ವಿಷಯ ತಜ್ಞರ ವಿನಿಮಯ ಕೇಂದ್ರಗಳಲ್ಲಿ, ಎರಡೂ ನೌಕಾಪಡೆಗಳು ಕಡಲ ವಾಯು ಕಾರ್ಯಾಚರಣೆಗಳು, ಕಂಪ್ಲೈಂಟ್ ಬೋರ್ಡಿಂಗ್ ಕಾರ್ಯವಿಧಾನಗಳಿಗೆ ಸಂಬಂಧಿಸಿದ ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಂಡವು. ಸಮುದ್ರದಲ್ಲಿ, ಭಾಗವಹಿಸುವ ಪಡೆಗಳು ಗನ್ನರಿ ಫೈರಿಂಗ್, ವಾಯು-ರಕ್ಷಣಾ ವ್ಯಾಯಾಮಗಳು ಮತ್ತು ಕಡಲ ಭದ್ರತಾ ಕವಾಯತುಗಳು ಸೇರಿದಂತೆ ಸಂಕೀರ್ಣ ಯುದ್ಧ ಸರಣಿಗಳನ್ನು ನಡೆಸಿದವು. ಭಾಗವಹಿಸುವ ಹಡಗುಗಳ ನೌಕಾಯಾನದೊಂದಿಗೆ ಸಮುದ್ರ ಹಂತವು ಮುಕ್ತಾಯಗೊಂಡಿತು. ಸಿಂಬೆಕ್ಸ್ 2025ರ ಯಶಸ್ವಿ ನಡವಳಿಕೆಯು ಭಾರತೀಯ ನೌಕಾಪಡೆ, ನಡುವಿನ ಶಾಶ್ವತ ಪಾಲುದಾರಿಕೆಯನ್ನು ಒತ್ತಿಹೇಳುತ್ತದೆ. ಆರ್‌ಎಸ್‌ಎಸ್ ಸುಪ್ರೀಂ ಕಮಾಂಡಿಂಗ್ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಆರನ್ ಕೊಹ್, ಸಿಂಬೆಕ್ಸ್ ಸಿಂಗಾಪುರ್ ಗಣರಾಜ್ಯ ನೌಕಾಪಡೆ, ಭಾರತೀಯ ನೌಕಾಪಡೆಯ ನಡುವಿನ ದೀರ್ಘಕಾಲದ ದ್ವಿಪಕ್ಷೀಯ ಸಂಬಂಧಗಳಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

## ಮೋದಿ ಸರ್ಕಾರದ ಅವಧಿಯಲ್ಲಿ 17 ಕೋಟಿ ಉದ್ಯೋಗ ಸೃಷ್ಟಿ: ಸಚಿವ ಮಾಂಡವಿಯಾ

**ನವದೆಹಲಿ:** ಪ್ರಧಾನಿ ಮೋದಿ ಅವರ ಸರ್ಕಾರ 10 ವರ್ಷಗಳಲ್ಲಿ 17 ಕೋಟಿ ಉದ್ಯೋಗ ಸೃಷ್ಟಿಯಾಗಿದೆ. ಆದರೆ ಈ ಹಿಂದೆ ದಶಕಗಳ ಕಾಲ ಆಡಳಿತದಲ್ಲಿದ್ದ ಯುಪಿಎ ಸರ್ಕಾರದ ಅವಧಿಯಲ್ಲಿ ಕೇವಲ 3 ಕೋಟಿ ಉದ್ಯೋಗ ಸೃಷ್ಟಿಯಾಗಿತ್ತು ಎಂದು ಕಾರ್ಮಿಕ, ಉದ್ಯೋಗ ಖಾತೆ ಸಚಿವ ಮನಸುಖ್ ಮಾಂಡವಿಯಾ ಲೋಕಸಭೆಗೆ ತಿಳಿಸಿದರು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಕಳೆದ 10 ವರ್ಷಗಳಲ್ಲಿ 10 ಕೋಟಿಗೂ ಅಧಿಕ ಉದ್ಯೋಗ ಸೃಷ್ಟಿಸಿರುವುದು ದಾಖಲೆಯಾಗಿದೆ.



10 ವರ್ಷಗಳ ಯುಪಿಎ ಆಡಳಿತದಲ್ಲಿ ಕೇವಲ 3 ಕೋಟಿ ಉದ್ಯೋಗ ಮಾತ್ರ ಸೃಷ್ಟಿಯಾಗಿತ್ತು. ಇದನ್ನು ನಾವಾಗಿಯೇ ಹೇಳುತ್ತಿಲ್ಲ, ಆರ್‌ಬಿಐ ನೀಡಿದ ಅಂಕಿಅಂಶಗಳಲ್ಲಿ ಈ ಮಾಹಿತಿ ಇದೆ. ಸ್ವಾತಂತ್ರ್ಯಾನಂತರ ಪ್ರತೀ ವರ್ಷ ಉದ್ಯೋಗ ಸೃಷ್ಟಿಯಾದ ಬಗ್ಗೆ ಆರ್‌ಬಿಐ ಮಾಹಿತಿಯನ್ನು ಬಿಡುಗಡೆ ಮಾಡುತ್ತದೆ. ಕಳೆದ 16 ತಿಂಗಳಲ್ಲಿ ಕೇಂದ್ರವು 11 ಲಕ್ಷ ಯುವಜನತೆಗೆ ಕೆಲಸ ಸಿಗುವಂತೆ ಮಾಡಿದೆ ಎಂದರು. ಮೋದಿಯವರು ಕೇವಲ ಉದ್ಯೋಗವನ್ನು ಸೃಷ್ಟಿಸಿಲ್ಲ, ಬದಲಾಗಿ ಮುಂದಿನ 5 ವರ್ಷಗಳ ಉದ್ಯೋಗ ಸೃಷ್ಟಿಗೆ ಬೇಕಾದ ಯೋಜನೆಯನ್ನೂ ರೂಪಿಸಿದ್ದಾರೆ.

ಮೋದಿ 3.0 ಆರಂಭದಲ್ಲೇ ವಿಕಸಿತ್ ಭಾರತ್ ರೋಜಗಾರ್ ಯೋಜನೆಯನ್ನು ಘೋಷಿಸಿದ್ದಾರೆ ಇದರ ಅಡಿಯಲ್ಲಿ 2ಲಕ್ಷ ಕೋಟಿ ವೆಚ್ಚದಲ್ಲಿ 4 ಕೋಟಿ ಉದ್ಯೋಗ ಸೃಷ್ಟಿಸುವ ಗುರಿ ಇದೆ. ಈ ಯೋಜನೆಯಿಂದ ಉತ್ತಮ ಫಲಿತಾಂಶವನ್ನು ಪಡೆಯುತ್ತಿದ್ದೇವೆ ಎಂದು ವಿವರಿಸಿದರು. ಪಿಎಂ ವಿಕಸಿತ್ ಭಾರತ ರೋಜಗಾರ್ ಯೋಜನೆಯು ಈ ವರ್ಷದ ಆ.1ರಿಂದ ಆರಂಭವಾಗಿದೆ. ಈ ಯೋಜನೆಯ ಪ್ರಯೋಜನಗಳು 2025ರ ಆಗಸ್ಟ್ 1 ರಿಂದ 2027 ಜುಲೈ 31ರ ನಡುವೆ ಸೃಷ್ಟಿಯಾದ ಉದ್ಯೋಗಗಳಿಗೆ ಅನ್ವಯಿಸುತ್ತವೆ.

### ಮುಸ್ಲಿಂಗೆ ಮತಾಂತರಗೊಳ್ಳಲು ನಿರಾಕರಿಸಿದ್ದ ಯುವತಿ; ಆಕೆಯ ಮನೆಗೆ ನುಗ್ಗಿ, ಕತ್ತು ಸೀಳಿ ಕೊಲೆ ಮಾಡಿದ ವ್ಯಕ್ತಿ ಅರೆಸ್ಟ್

## ಹಿಂದೂ ಸಮುದಾಯ ಈ ಕೊಲೆ ಪ್ರಕರಣಕ್ಕೆ ಆಕ್ರೋಶ

**ನೇಪಾನಗರ:** ಮುಸ್ಲಿಂಗೆ ಮತಾಂತರಗೊಳ್ಳಲು ನಿರಾಕರಿಸಿದ್ದಕ್ಕೆ ಯುವತಿಯ ಗಂಟಲು ಸೀಳಿ ಕೊಲೆ ಮಾಡಿದ ಘಟನೆ ನೇಪಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ನವಾರದಲ್ಲಿ ನಡೆದಿದೆ. 35 ವರ್ಷದ ಭಾಗ್ಯಶ್ರೀ ನಾಮದೇವ್ ಧನುಕ್‌ರನ್ನು ಮದುವೆಯಾಗಲು, ಮುಸ್ಲಿಂಗೆ ಮತಾಂತರಗೊಳ್ಳಲು ಒತ್ತಾಯಿಸುತ್ತಿದ್ದನು. ಆಕೆ ಒಪ್ಪದಿದ್ದಕ್ಕೆ ಆಕೆಯ ಮನೆಯೊಳಗೆ ನುಗ್ಗಿ ಕೊಲೆ ಮಾಡಿದ್ದಾನೆ. ಪೊಲೀಸರು ಆರೋಪಿಯನ್ನು ಕೆಲವೇ ಗಂಟೆಗಳಲ್ಲಿ ಬಂಧಿಸಿದ್ದಾರೆ. ರಯೀಸ್ ಆಕೆಯ ಕೂದಲನ್ನು ಹಿಡಿದು ಎಳೆದು ಹೊಡೆಯುತ್ತಿದ್ದನು. ಆತ ತುಂಬಾ ದಿನಗಳಿಂದ ತನ್ನ ಅಕ್ಕನ ಬಳಿ ಮದುವೆ ಆಗುವಂತೆ, ಮತಾಂತರಗೊಳ್ಳುವಂತೆ ಒತ್ತಡ ಹಾಕುತ್ತಿದ್ದ. ಆದರೆ ಆಕೆ ಒಪ್ಪಿಕೊಂಡಿರಲಿಲ್ಲ, ಹೀಗಾಗಿ ರಾತ್ರೋ ರಾತ್ರಿ ಆಕೆಯ ಮನೆಗೆ ನುಗ್ಗಿ ಕತ್ತು ಸೀಳಿ ಕೊಲೆ ಮಾಡಿದ್ದಾನೆ ಸಹೋದರಿ ಸುಭದ್ರಾ ಬಾಯಿ ಹೇಳಿದ್ದಾರೆ.

- ಮುಸ್ಲಿಂಗೆ ಮತಾಂತರಗೊಳ್ಳಲು ಒತ್ತಾಯ ನಿರಾಕರಿಸಿದ್ದಕ್ಕೆ ಕೊಲೆ
- ಉತ್ತರ ಪ್ರದೇಶದಲ್ಲಿ ಹಿಂದೂ ಹುಡುಗಿಯರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರ

ಈ ಪ್ರಕರಣದಲ್ಲಿ ಆರೋಪಿ ರಯೀಸ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಆತನ ವಿರುದ್ಧ ಕೊಲೆ ಮತ್ತು ದೌರ್ಜನ್ಯದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬುರ್ಹಾನ್‌ಪುರದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ. ಅಂತರ ಸಿಂಗ್ ಕನೇಶ್ ಈ ವಿಷಯವನ್ನು ಖಚಿತಪಡಿಸಿದ್ದಾರೆ. ಈ ಘಟನೆಯಿಂದ ಹಿಂದೂ ಸಮುದಾಯದವರು ಆಕ್ರೋಶಗೊಂಡಿದ್ದಾರೆ. ಪ್ರತಿಭಟನೆ ನಡೆಸಿದ ಜನರು, ಇದು ಲವ್ ಜಿಹಾದ್ ಎಂದು ಕರೆದಿದ್ದಾರೆ.




**ಯುವಕರ ಮತಾಂತರಕ್ಕೆ ಆಗ್ರಹ:** ಉತ್ತರ ಪ್ರದೇಶದಲ್ಲಿ ಹಿಂದೂ ಹುಡುಗಿಯರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡಲು ಯತ್ನಿಸುತ್ತಿದ್ದ ಆರೋಪ ಹೊತ್ತಿರುವ ಛಾಂಗೂರ ಬಾಬಾನ ಮಾದರಿಗೆ ಕೊಂಚ ವ್ಯತಿರಿಕ್ತವಾಗಿ ನಗರದಲ್ಲಿ ಯುವತಿಯರನ್ನು ಬಿಟ್ಟು ಹಿಂದೂ ಯುವಕರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡುತ್ತಿದ್ದಾರೆ ಎಂದು ಶಿವ ರಾಮಕೃಷ್ಣ ಸೇವಾ ಸಮಿತಿ ಸಂಚಾಲಕ ರಾಜು ಖಾನಪ್ಪನವರ ಆರೋಪಿಸಿದರು.

**ಜಾತಿ ಲೆಕ್ಕಾಚಾರ**

**ಹಿಂದೂಗಳ ಮತಾಂತರ ನಡೆಯುತ್ತಿದ್ದರೂ ಯಾವುದೇ ಪಕ್ಷದ ನಾಯಕರಾಗಲಿ, ಮಠಾಧೀಶರಾಗಲಿ ವಿರೋಧ ಮಾಡುತ್ತಿಲ್ಲ. ಎಲ್ಲಪಕ್ಷದವರೂ ಜಾತಿ ಲೆಕ್ಕಾಚಾರದಲ್ಲೇ ರಾಜಕಾರಣ ಮಾಡುತ್ತಿದ್ದಾರೆ. ಹೀಗಾಗಿ ನಮ್ಮ ಮನೆಯೊಳಗೆ ಜಾತಿ ಯಾವುದೇ ಇರಲಿ, ಹೊರಗೆ ನಾವೆಲ್ಲ ಹಿಂದೂಗಳು, ಬಂಧುಗಳು ಎಂದರು.**

**ಖಾಸಗಿ ಹಾಲ್‌ನಲ್ಲಿ ಸಾಮೂಹಿಕ ಪ್ರಾರ್ಥನೆ:** ಮತಾಂತರ ಮಾಡುತ್ತಿದ್ದಾರೆಂದು ಆರೋಪಿಸಿ ದಾಳಿ ನಡೆಸಿದ ಶ್ರೀರಾಮ ಸೇನೆ ಕಾರ್ಯಕರ್ತರು ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ವಿಶಾಲ ಗೋಕಾವಿ ಎಂಬ ಯುವಕ ಈ ಮತಾಂತರಕ್ಕೆ ಬಲಿಯಾಗಿ ಮೋಸ ಹೋಗಿದ್ದಾನೆ ಎಂದು ಆಪಾದಿಸಿದರು. ನಗರದ ವಿಶಾಲ ಗೋಕಾವಿ ಎಂಬ ಯುವಕ ಮುಸ್ಲಿಂ ಯುವತಿಯನ್ನು ಪ್ರೀತಿಸಿದ್ದ. ಬಳಿಕ ಮುಸ್ಲಿಂ ಯುವತಿ, ಅವನಿಗೆ ಬೆದರಿಕೆ ಹಾಕಿ, ಹಿಂಸೆ ನೀಡಿ ಮುಸ್ಲಿಂ ಸಂಪ್ರದಾಯದಂತೆ ಮದುವೆ ಮಾಡಿದ್ದಾರೆ. ಅಷ್ಟೇ ಅಲ್ಲ, ಮದುವೆ ಬಳಿಕ ಯುವಕ ನಿತ್ಯ ನಮಾಜ್‌ಗೆ ಹೋಗಬೇಕು, ಕುಂಕುಮ ಹಚ್ಚಬಾರದು ಎಂದೆಲ್ಲ ಹಿಂಸೆ ನೀಡಿದ್ದಾರೆ. ಶಂಸುದ್ದೀನ್ ಎಂಬ ವಕೀಲರ ಸಮ್ಮುಖದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮದುವೆ ನೋಂದಣಿ ಮಾಡಿಸಿ, ಅವರ ಧರ್ಮದಂತೆ ಮದುವೆಯನ್ನೂ ಮಾಡಿಸಿದ್ದಾರೆ. ಇದೀಗ ಈ ವಿಷಯ ಬೆಳಕಿಗೆ ಬರುತ್ತಿದ್ದಂತೆ ಮುಸ್ಲಿಂ ಯುವತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾಳೆ ಎಂದು ಅವರು ವಿವರಿಸಿದರು.

**ಇದು ಲವ್ ಜಿಹಾದ್**

ಸುದ್ದಿಗೋಷ್ಠಿಯಲ್ಲಿ ಶಿವ ರಾಮಕೃಷ್ಣ ಸೇವಾ ಸಮಿತಿಯ ಮಹೇಶ ರೋಖಡೆ, ಶಿವಯೋಗಿ ಹಿರೇಮಠ, ರಾಚೋಟಿ ಕಾಡಪ್ಪನವರ, ರಾಜು ಡಮಾನ್, ಕುಮಾರ ನಡಗೇರಿ, ಕಿರಣ ಹಿರೇಮಠ, ವೆಂಕಟೇಶ ದೊಡ್ಡಮನಿ, ಸತೀಶ ಕುಂಬಾರ, ಅರುಣಕುಮಾರ ಬಜಿ, ಮಂಜುನಾಥ ಬೆಂತೂರ ಇದ್ದರು.

## ಮಿನಿ ನ್ಯೂಸ್

### ಮುಂಬೈ ವಿಮಾನ ನಿಲ್ದಾಣದಲ್ಲಿ 14.738 ಕೋಟಿರೂ. ಗಾಂಜಾ ವಶ

**ಮುಂಬೈ:** ಮುಂಬೈ ಕಸ್ಟಮ್ಸ್ ಇಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 15 ಕೆಜಿ ಹೈಡ್ರೋಪೋನಿಕ್ ಕಳೆ ಕಳ್ಳಸಾಗಣೆ ಮಾಡಲು ಯತ್ನಿಸಿದ ಆರೋಪದ ಮೇಲೆ ಪ್ರಯಾಣಿಕನನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ರಾಜತಾಂತ್ರಿಕ ಪೌಚ್ ಎಂದು ಲೇಬಲ್ ಮಾಡಲಾದ ಪ್ಯಾಕೆಟ್‌ನಲ್ಲಿ ನಿಷಿದ್ಧ ವಸ್ತುವನ್ನು ಮರೆಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಯಾಣಿಕ ಬ್ಯಾಂಕಾಕ್‌ನಿಂದ ಛತ್ರಪತಿ ಶಿವಾಜಿ ಮಹಾರಾಜ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅವರ ಸಾಮಾನುಗಳನ್ನು ಪರಿಶೀಲಿಸುವಾಗ, ಕಸ್ಟಮ್ಸ್ ಅಧಿಕಾರಿಗಳು 14.738 ಕೆಜಿ ಶಂಕಿತ ಹೈಡ್ರೋಪೋನಿಕ್ ಕಳೆ ವಶಪಡಿಸಿಕೊಂಡಿದ್ದಾರೆ.

ಇದರ ಮಾರುಕಟ್ಟೆ ಮೌಲ್ಯ ಸುಮಾರು 14.738 ಕೋಟಿ ರೂ. ಎಂದು ಅವರು ಹೇಳಿದರು. ಆರೋಪಿಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಗೌಪ್ಯ ರಾಜತಾಂತ್ರಿಕ ಸರಕು ಎಂದು ತಪ್ಪಾಗಿ ಘೋಷಿಸುವ ಮೂಲಕ ನಿಷಿದ್ಧ ವಸ್ತುವನ್ನು ಕಳ್ಳಸಾಗಣೆ ಮಾಡಲು ಪ್ರಯತ್ನಿಸುತ್ತಿದ್ದ ಎಂದು ಅವರು ಹೇಳಿದರು.ವಿದೇಶಾಂಗ ಸಚಿವಾಲಯದ ಗುರುತುಗಳನ್ನು ಹೊಂದಿರುವ ಲಕೋಟೆಗಳ ಒಳಗೆ ಕಳ್ಳಸಾಗಣೆ ಮಾಡಲಾದ ವಸ್ತುಗಳನ್ನು ಮರೆಮಾಡಲಾಗಿತ್ತು ಮತ್ತು ಅಧಿಕೃತ ಟೇಪ್‌ನಿಂದ ಮುಚ್ಚಲಾಗಿತ್ತು ಎಂದು ಅವರು ಹೇಳಿದರು. ಟ್ರಾಲಿ ಬ್ಯಾಗ್‌ನಲ್ಲಿ ವಿವಿಧ ಮತ್ತು ನಕಲಿ ಉನ್ನತ ರಹಸ್ಯ ಕಾರ್ಯಾಚರಣೆ ವರದಿಗಳ ಪ್ರತಿಗಳು ಸಹ ಇದ್ದವು ಎಂದು ಅವರು ಹೇಳಿದರು. ನಾರ್ಕೋಟಿಕ್ ಡ್ರಗ್ಸ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

### ಡಿಜೆ ವಾಹನಕ್ಕೆ ವಿದ್ಯುತ್ ಸ್ಪರ್ಶಿಸಿ ಐದು ಕನ್ವಾರಿಯಾಗಳ ಸಾವು

**ಪಾಟ್ನಾ:** ಬಿಹಾರದ ಭಾಗಲ್ಪುರ ಜಿಲ್ಲೆಯಲ್ಲಿ ತಡರಾತ್ರಿ ವಾಹನದ ಮೇಲೆ ಅಳವಡಿಸಲಾಗಿದ್ದ ಡಿಜೆ ಮ್ಯೂಸಿಕ್ ಸಿಸ್ಟಮ್ ಲೈವ್ ವೈರ್‌ಗೆ ತಗುಲಿ ಅಪಘಾತ ಸಂಭವಿಸಿದ ನಂತರ ಕನಿಷ್ಠ ಐದು ಕನ್ವಾರಿಯಾಗಳು ಸಾವನ್ನಪ್ಪಿದ್ದಾರೆ ಮತ್ತು ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಶ್ರಾವಣ ಮೇಳದ ನಾಲ್ಕನೇ ಮತ್ತು ಕೊನೆಯ ಸೋಮವಾರದಂದು ಸುಲ್ತಾನಗಂಜ್‌ನಿಂದ ಗಂಗಾಜಲವನ್ನು ಹೊತ್ತುಕೊಂಡು ಜಯಸ್ಥ ಗೌರ್‌ನಾಥಸ್ಥಾನಕ್ಕೆ ಪೂಜೆ ಸಲ್ಲಿಸಲು ಹೋಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಡಿಜೆ ವಾಹನವೊಂದು ವಿದ್ಯುತ್ ತಂತಿಗೆ ತಗುಲಿ ಪಲ್ಟಿಯಾಗಿ ಐದು ಜನರು ಸ್ಥಳದಲ್ಲೇ ಸಾವನ್ನಪ್ಪಿದರು.

ಕುಟುಂಬಗಳಿಗೆ ಆರ್ಥಿಕ ನೆರವು ನೀಡಲು ಪ್ರಯತ್ನಿಸಲಾಗುತ್ತಿದೆ ಎಂದು ಭಾಗಲ್ಪುರ ಎಸ್‌ಎಸ್‌ಪಿ ಹೃದಯಕಾಂತ್ ಹೇಳಿದರು, ಎಸ್‌ಡಿಪಿಒ (ಕಾನೂನು ಮತ್ತು ಸುವ್ಯವಸ್ಥೆ) ಸ್ಥಳದಲ್ಲಿಯೇ ಬೀಡುಬಿಟ್ಟಿದೆ. ಡಿಜೆ ಮತ್ತು ಸೌಂಡ್ ಸಿಸ್ಟಮ್ ಅಳವಡಿಸಲಾದ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಬಲಿಪಶುಗಳು ಬೆಳಿಗ್ಗೆ 12:05 ರ ಸುಮಾರಿಗೆ ನಿರ್ದಿಷ್ಟ ಸ್ಥಳಕ್ಕೆ ಬಂದಾಗ ಅಪಘಾತ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ವಾಹನವು ರಸ್ತೆಯಲ್ಲಿ ಸಿಲುಕಿಕೊಂಡಿತ್ತು.

ಘಟನೆಯ ಸಮಯದಲ್ಲಿ ವಾಹನದಲ್ಲಿ ಒಂಬತ್ತು ಜನರು ಪ್ರಯಾಣಿಸುತ್ತಿದ್ದರು ಮತ್ತು ಡಜನ್‌ಗಟ್ಟಲೆ ಕನ್ವಾರಿಯಾಗಳು ಡಿಜೆ ಸೌಂಡ್ ಸಿಸ್ಟಮ್‌ಗಳೊಂದಿಗೆ ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಿದ್ದರು. ವಾಹನ ಚಾಲಕ ಮಣ್ಣಿನಿಂದ ಹೊರಬರುವಲ್ಲಿ ಯಶಸ್ವಿಯಾಗುತ್ತಿದ್ದಂತೆ, ಸೌಂಡ್ ಸಿಸ್ಟಮ್‌ಗಳು ಕಡಿಮೆ ನೇತಾಡುವ ಹೈ-ಟೆನ್ಷನ್ ವಿದ್ಯುತ್ ತಂತಿಗೆ ಸಂಪರ್ಕಕ್ಕೆ ಬಂದವು. ವಾಹನವು ರಸ್ತೆ ಬದಿಯ ಕಾಲುವೆಗೆ ಉರುಳಿತು, ಎಂದು ಅವರು ಹೇಳಿದರು.

### ಸ್ಕಾಟ್ಲೆಂಡ್‌ನಲ್ಲಿ ಬಿರುಗಾಳಿ ಸಹಿತ ಮಳೆ: ರೈಲು ಸಂಚಾರ ರದ್ದು

**ಲಂಡನ್:** ಬ್ರಿಟನ್‌ನ ಉತ್ತರ ಭಾಗಕ್ಕೆ ತೀವ್ರ ಅಪಾಯಕಾರಿ ವೇಗದಲ್ಲಿ ಬೀಸುತ್ತಿರುವ ಬಿರುಗಾಳಿ ಅಪ್ಪಳಿಸಿದೆ. ಭಾರಿ ಮಳೆ ಹಾಗೂ ಗಾಳಿಯಿಂದ ಜನರನ್ನು ರಕ್ಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಕಾಟ್ಲೆಂಡ್‌ನಲ್ಲಿ ರೈಲು ಸಂಚಾರವನ್ನು ರದ್ದು ಮಾಡಲಾಗಿದೆ. ಉದ್ಯಾನಗಳನ್ನೂ ಬಂದ್ ಮಾಡಲಾಗಿದ್ದು, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಹವಾಮಾನ ಇಲಾಖೆಯು ಸ್ಕಾಟ್ಲೆಂಡ್‌ನಲ್ಲಿ ಬಿರುಗಾಳಿಯ ಎಚ್ಚರಿಕೆ ನೀಡಿದೆ. ಭಾರಿ ಗಾಳಿಯಿಂದಾಗಿ ಜನರ ಜೀವ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗುವ ಸಾಧ್ಯತೆ ಇದೆ. ಕರಾವಳಿ ಪ್ರದೇಶದಲ್ಲಿ ಮಳೆಯೊಂದಿಗೆ ಗಂಟೆಗೆ 137 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಮುನ್ಸೂಚನೆ ನೀಡಿದೆ.

### ಮುಳುಗಿದ ದೋಣಿ; 68 ವಲಸಿಗರ ಸಾವು, 74 ಮಂದಿ ನಾಪತ್ತೆ

**ಕೈರೊ:** ಯೆಮೆನ್‌ನಲ್ಲಿ ಸುಮಾರು 150 ಜನರು ಇದ್ದ ದೋಣಿ ಮುಳುಗಿ 68 ವಲಸಿಗರು ಮೃತಪಟ್ಟಿದ್ದು, 74 ಮಂದಿ ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ. ಯೆಮೆನ್‌ನ ದಕ್ಷಿಣ ಅಬ್ಯಾನ್ ಪ್ರಾಂತ್ಯದ ಕರಾವಳಿ ಪ್ರದೇಶದಲ್ಲಿ ದುರಂತ ಸಂಭವಿಸಿದೆ. ಈವರೆಗೆ 10 ಮಂದಿಯನ್ನು ರಕ್ಷಿಸಲಾಗಿದೆ. ಕಡುಬಡತನದ ಆಫ್ರಿಕಾದಿಂದ ಪಲಾಯನಗೈದ ನೂರಾರು ವಲಸಿಗರು ಕೆಲಸದ ನಿಟ್ಟಿನಲ್ಲಿ ಶ್ರೀಮಂತ ಗಲ್ಫ್ ಅರಬ್ ರಾಷ್ಟ್ರಗಳನ್ನು ತಲುಪುವ ಇರಾದೆ ಹೊಂದಿದ್ದರು.

ಯೆಮೆನ್‌ಗೆ ಅನಧಿಕೃತ ವಲಸಿಗರ ಹರಿವು ಗಣನೀಯವಾಗಿ ಹೆಚ್ಚುತ್ತಿದೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಘಟನೆ ಹೇಳಿದೆ. ಆಫ್ರಿಕಾದಿಂದ ಯೆಮೆನ್‌ಗೆ ಹೋಗುವ ಮಾರ್ಗ, ವಿಶ್ವದ ಅತ್ಯಂತ ನಿಬಿಡ ಹಾಗೂ ಅತ್ಯಂತ ಅಪಾಯಕಾರಿ ವಲಸೆ ಮಾರ್ಗಗಳಲ್ಲಿ ಒಂದಾಗಿದೆ. ಕಳೆದ ವರ್ಷ ಯೆಮೆನ್‌ಗೆ 60 ಸಾವಿರಕ್ಕೂ ಹೆಚ್ಚು ಮಂದಿ ವಲಸೆ ಹೋಗಿದ್ದರು ಎಂದು ಐಒಎಂ ತಿಳಿಸಿದೆ.

### ಲೋಕಸಭೆಯಲ್ಲಿ ಟಿಎಂಸಿ ನಾಯಕನಾಗಿ ಅಭಿಷೇಕ್ ಬ್ಯಾನರ್ಜಿ ನೇಮಕ

**ಕೋಲ್ಕತ್ತ:** ತೃಣಮೂಲ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರನ್ನು ಲೋಕಸಭೆಯಲ್ಲಿ ಸದನದ ನಾಯಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರು ಡೈಮಂಡ್ ಹಾರ್ಬರ್ ಕ್ಷೇತ್ರದಿಂದ ಸ್ಪರ್ಧಿಸಿ ಮೂರನೇ ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಅಭಿಷೇಕ್ ಬ್ಯಾನರ್ಜಿ ಅವರು ಸುದೀಪ್ ಬಂಡೋಪಾಧ್ಯಾಯ ಅವರ ಸ್ಥಾನವನ್ನು ವಹಿಸಿಕೊಳ್ಳಲಿದ್ದಾರೆ. ಅನಾರೋಗ್ಯ ಕಾರಣ ಬಂಡೋಪಾಧ್ಯಾಯ ಅವರನ್ನು ಸದನದ ನಾಯಕ ಸ್ಥಾನದಿಂದ ಮುಕ್ತಗೊಳಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಟಿಎಂಸಿ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅಧ್ಯಕ್ಷತೆಯಲ್ಲಿ ನಡೆದ ವರ್ಚುವಲ್ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಲೋಕಸಭೆ ಸಂಸದರು, ರಾಜ್ಯಸಭೆ ಸದಸ್ಯರು ಸಭೆಯಲ್ಲಿ ಹಾಜರಿದ್ದರು ಎಂದು ತಿಳಿದುಬಂದಿದೆ. ಲೋಕಸಭೆಯಲ್ಲಿ 29 ಸ್ಥಾನಗಳನ್ನು ಹೊಂದಿರುವ ಟಿಎಂಸಿ, ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟದಲ್ಲಿ ಪ್ರಮುಖ ಪಾತ್ರವಹಿಸಿದೆ.

# ದೇವರಕೊಂಡ ಫ್ಯಾನ್ಸ್‌ಗೆ ಖುಷಿ ಸುದ್ದಿ ಕೊಟ್ಟ ನಿರ್ದೇಶಕ


‘ಕಿಂಗ್ಡಮ್’ ಸಿನಿಮಾದ ಭರ್ಜರಿ ಯಶಸ್ಸಿನ ಬಳಿಕ, ನಿರ್ದೇಶಕ ಗೌತಮ್ ತಿನ್ನನುರಿ ಅವರು ಕಿಂಗ್ಡಮ್ 2 ಮತ್ತು ಒಂದು ಸ್ಪಿನ್ ಆಫ್ ಸಿನಿಮಾಗಳನ್ನು ಮಾಡುವುದಾಗಿ ಘೋಷಿಸಿದ್ದಾರೆ. ಮೊದಲ ಭಾಗದಲ್ಲಿ ಪರಿಚಯಿಸಲಾದ ಸೇತು ಪಾತ್ರವನ್ನು ಕೇಂದ್ರೀಕರಿಸಿ ಒಟಿಟಿಗಾಗಿ ಒಂದು ಪ್ರೀಕ್ವೆಲ್ ಕೂಡ ತಯಾರಾಗಲಿದೆ. ಭವಿಷ್ಯದಲ್ಲಿ ಕಿಂಗ್ಡಮ್ 3 ಕೂಡ ಬರಬಹುದು ಎಂಬ ಸುಳಿವು ನೀಡಿದ್ದಾರೆ. ‘ಕಿಂಗ್ಡಮ್’ ಸಿನಿಮಾ ಯಶಸ್ಸಿನ ಬಳಿಕ ನಿರ್ದೇಶಕ ಗೌತಮ್ ತಿನ್ನನುರಿ ಅವರು ಒಂದು ಭರ್ಜರಿ ಅಪ್‌ಡೇಟ್ ಕೊಟ್ಟಿದ್ದಾರೆ.

ಈ ಸಿನಿಮಾ ಗೆಲುವಿನ ಬೆನ್ನಲ್ಲೇ ‘ಕಿಂಗ್ಡಮ್ 2’ ಬರಲಿದೆ ಎಂದು ಹೇಳಿದ್ದಾರೆ. ಜೊತೆಗೆ ಇದೇ ಕಥೆ ಇಟ್ಟುಕೊಂಡು ಒಂದು ಸ್ಪಿನ್ ಆಫ್ ಮಾಡುವ ಆಲೋಚನೆ ಕೂಡ ನಿರ್ದೇಶಕರಿಗೆ ಇದೆ.

ಈ ವಿಚಾರ ಕೇಳಿ ಫ್ಯಾನ್ಸ್ ಖುಷಿಪಟ್ಟಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದೊಂದು ದಿನ ‘ಕಿಂಗ್ಡಮ್ 3’ ಕೂಡ ಮೂಡಿ ಬರಲಿದೆಯಂತೆ. ‘ಕಿಂಗ್ಡಮ್’ ಸಿನಿಮಾ ಜುಲೈ 31ರಂದು ರಿಲೀಸ್ ಆಯಿತು. ಮೊದಲ ದಿನವೇ ಚಿತ್ರ ವಿಶ್ವ ಬಾಕ್ಸ್ ಆಫೀಸ್‌ನಲ್ಲಿ 33 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈ ಸಿನಿಮಾದ ಕೆಲಸಗಳು ಪೂರ್ಣಗೊಳ್ಳದಿದ್ದ ಕಾರಣ ಪ್ರಚಾರದಲ್ಲಿ ಗೌತಮ್ ಭಾಗಿ ಆಗಿರಲಿಲ್ಲ. ಈಗ ಸಿನಿಮಾ ಬಳಿಕ ಅವರು ಅಪ್‌ಡೇಟ್ ಒಂದನ್ನು ನೀಡಿದ್ದಾರೆ.

‘ಕಿಂಗ್ಡಮ್’ ಸಿನಿಮಾ ಎರಡು ಭಾಗದಲ್ಲಿ ಮಾಡುವ ಆಲೋಚನೆ ಗೌತಮ್‌ಗೆ ಇತ್ತು. ಮೊದಲ ಪಾರ್ಟ್‌ನ ಕೊನೆಯಲ್ಲಿ ಸೇತು ಹೆಸರಿನ ವಿಲನ್ ಪಾತ್ರ ಪರಿಚಯಿಸಲಾಗಿದೆ. ಈತ ವಿಲನ್‌ನ ಅಣ್ಣ. 2ನೇ ಪಾರ್ಟ್‌ನಲ್ಲಿ ಸೂರಿ (ವಿಜಯ್ ದೇವರಕೊಂಡ) ಹಾಗೂ ಸೇತು ನಡುವಿನ ತಿಕ್ಕಾಟವನ್ನು ಹೈಲೈಟ್ ಮಾಡಲಾಗುತ್ತದೆ. ಈ ಸಿನಿಮಾ ಮಾಡುವುದಕ್ಕೂ ಮೊದಲು ಸೇತು ಪಾತ್ರವನ್ನು ಕೇಂದ್ರೀಕರಿಸಿ ಒಟಿಟಿಗಾಗಿ ಗೌತಮ್ ಒಂದು ಸಿನಿಮಾ ಮಾಡಲಿದ್ದಾರೆ. ಮೊದಲ ಪಾರ್ಟ್‌ನಲ್ಲಿ ಸಮಯದ ಅಭಾವದಿಂದ ಅನೇಕ ದೃಶ್ಯಗಳನ್ನು ಟ್ರಿಮ್ ಮಾಡಲಾಗಿದೆ. ಹೀಗಾಗಿ, ಒಟಿಟಿ ಪ್ರೀಕ್ವೆಲ್ ಈ ಗ್ಯಾಪ್‌ನ ಮುಚ್ಚಲಿದೆ. ಹೀಗಾಗಿ, ಎರಡನೇ ಪಾರ್ಟ್ ಮಾಡುವುದಕ್ಕೂ ಮೊದಲು ಒಟಿಟಿಗಾಗಿ ಒಂದು ವಿಶೇಷ ಸಿನಿಮಾ ರೆಡಿ ಆಗಲಿದೆ. ನಿರ್ಮಾಪಕ ನಾಗ ವಂಶಿ ಅವರು ಈ ವಿಚಾರವನ್ನು ಖಚಿತಪಡಿಸಿದ್ದಾರೆ. ಆದರೆ, ಸೇತು ಪಾತ್ರವನ್ನು ಯಾರು ಮಾಡುತ್ತಾರೆ ಎಂಬ ವಿಚಾರ ಇನ್ನೂ ರಿವೀಲ್ ಆಗಿಲ್ಲ. ಈ ಚಿತ್ರಕ್ಕೆ ಮೂರು ಪಾರ್ಟ್ ಮಾಡುವ ಆಲೋಚನೆ ಕೂಡ ಇದೆಯಂತೆ. ಇದು ಪ್ರೀಕ್ವೆಲ್ ಆಗಿರಲಿದೆ. ‘ಕಿಂಗ್ಡಮ್’ ಹೇಗೆ ಹುಟ್ಟಿತು ಎಂಬಿತ್ಯಾದಿ ಕಥೆಗಳ ಮೇಲೆ ಸಿನಿಮಾ ಸಾಗಲಿದೆ.

**33 ಕೋಟಿ ರೂಪಾಯಿ ಕಲೆಕ್ಷನ್**





# ನಟ ಖಾನ್‌ಗೆ ರಾಷ್ಟ್ರ ಪ್ರಶಸ್ತಿ

71ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿಗಳು ಘೋಷಣೆ ಆದಾಗಿನಿಂದ ಕೆಲವರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ‘ಜವಾನ್’ ಚಿತ್ರದ ನಟನೆಗಾಗಿ ಶಾರುಖ್ ಖಾನ್ ಅವರಿಗೆ ಬೆಸ್ಟ್ ಆಕ್ಟರ್ ಪ್ರಶಸ್ತಿ ನೀಡಿದ್ದು ಹಲವರಿಗೆ ಸರಿ ಎನಿಸಿಲ್ಲ. ನಟಿ ಊರ್ವಶಿ ಕೂಡ ಈ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಈ ಆಯ್ಕೆಗೆ ಮಾನದಂಡ ಏನು ಎಂದು ಅವರು ಪ್ರಶ್ನೆ ಎತ್ತಿದ್ದಾರೆ. ಬಾಲಿವುಡ್ ನಟ ಶಾರುಖ್ ಖಾನ್ ಅವರು ಇದೇ ಮೊದಲ ಬಾರಿಗೆ ‘ಅತ್ಯುತ್ತಮ ನಟ’ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2023ರಲ್ಲಿ ಬಿಡುಗಡೆ ಆದ ಸಿನಿಮಾಗಳಿಗೆ ಇತ್ತೀಚೆಗೆ ರಾಷ್ಟ್ರ ಪ್ರಶಸ್ತಿ ಘೋಷಣೆ ಆಯಿತು. ‘ಜವಾನ್’ ಸಿನಿಮಾದ ಅಭಿನಯದಕ್ಕಾಗಿ ಶಾರುಖ್ ಖಾನ್ ಅವರು ‘ಬೆಸ್ಟ್ ಆಕ್ಟರ್ ನ್ಯಾಷನಲ್ ಅವಾರ್ಡ್’ ಪಡೆದಿದ್ದಾರೆ. ಇದು ಅವರ ಅಭಿಮಾನಿಗಳಿಗೆ ಖುಷಿ ನೀಡಿದೆ. ಆದರೆ ಶಾರುಖ್ ಖಾನ್ ಅವರಿಗೆ ‘ಅತ್ಯುತ್ತಮ ನಟ’ ರಾಷ್ಟ್ರ ಪ್ರಶಸ್ತಿ ನೀಡಿದ್ದನ್ನು ಕೆಲವರು ಪ್ರಶ್ನಿಸಿದ್ದಾರೆ. ಹಿರಿಯ ನಟಿ ಊರ್ವಶಿ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಲಯಾಳಂ ಭಾಷೆಯ ‘ಪೂಕಾಲಂ’ ಸಿನಿಮಾದಲ್ಲಿನ ಅಭಿನಯಕ್ಕಾಗಿ ವಿಜಯ ರಾಘವನ್ ಅವರಿಗೆ ‘ಅತ್ಯುತ್ತಮ ಪೋಷಕ ನಟ’ ರಾಷ್ಟ್ರ ಪ್ರಶಸ್ತಿ ನೀಡಲಾಗಿದೆ. ಅಲ್ಲದೇ, ಮಲಯಾಳಂನ ‘ಉಳ್ಳೋಳುಕ್ಕು’ ಸಿನಿಮಾದ ನಟನೆಗಾಗಿ ಊರ್ವಶಿ ಅವರು ‘ಅತ್ಯುತ್ತಮ ಪೋಷಕ ನಟಿ’ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಹಿರಿಯ ನಟಿ ಊರ್ವಶಿ ಅಸಮಾಧಾನ**







# ಕಾಂತಾರ ಚಿತ್ರಕ್ಕೆ ಬರಲಿದೆ ಮತ್ತೊಂದು ಪಾರ್ಟ್

ಕಾಂತಾರ ಚಿತ್ರದ ಭಾರೀ ಯಶಸ್ಸಿನ ಬಳಿಕ, ಚಿತ್ರಕ್ಕೆ ಪ್ರಿಕ್ವೆಲ್ ಬರುತ್ತಿದೆ.ಅಕ್ಟೋಬರ್ 2ರಂದು ಪ್ರಿಕ್ವೆಲ್ ಬಿಡುಗಡೆಯಾಗಲಿದೆ. ಸೀಕ್ವೆಲ್‌ನಲ್ಲಿ ಜೂನಿಯರ್ ಎನ್‌ಟಿಆರ್ ನಟಿಸುವ ಸಾಧ್ಯತೆಯಿದೆ ಎಂಬುದು ಸದ್ಯದ ಸುದ್ದಿ. ರಿಷಬ್ ಶೆಟ್ಟಿ ಅವರ ನಿರ್ದೇಶನದಲ್ಲಿ ಈ ಚಿತ್ರಗಳು ಮೂಡಿ ಬರುತ್ತಿವೆ. ‘ಕಾಂತಾರ’ ಸಿನಿಮಾ ಹಿಟ್ ಆದ ಬಳಿಕ ಈ ಚಿತ್ರಕ್ಕೆ ಪ್ರೀಕ್ವೆಲ್ ತರೋದಾಗಿ ತಂಡದವರು ಘೋಷಣೆ ಮಾಡಿದರು. ಈಗಾಗಲೇ ಸಿನಿಮಾದ ಶೂಟ್ ಕೂಡ ಪೂರ್ಣಗೊಂಡಿದ್ದು, ಅಕ್ಟೋಬರ್ 2ರಂದು ಸಿನಿಮಾ ರಿಲೀಸ್ ಆಗಲಿದೆ. ಈ ಚಿತ್ರದ ಬಗ್ಗೆ ಫ್ಯಾನ್ಸ್ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಹೀಗಿರುವಾಗಲೇ ಸಿನಿಮಾದ ಬಗ್ಗೆ ಭರ್ಜರಿ ಅಪ್‌ಡೇಟ್ ಒಂದು ಸಿಕ್ಕಿದೆ. ‘ಕಾಂತಾರ’ ಸಿನಿಮಾಗೆ ಪ್ರೀಕ್ವೆಲ್ ಮಾತ್ರವಲ್ಲ, ಸೀಕ್ವೆಲ್ ಕೂಡ ಬರಲಿದೆಯಂತೆ.

‘ಕಾಂತಾರ ಚಾಪ್ಟರ್ 1’ ಸಿನಿಮಾಗೆ 280ಕ್ಕೂ ಹೆಚ್ಚು ದಿನ ಶೂಟ್ ಮಾಡಲಾಗಿದೆ. ರಿಷಬ್ ಅವರು ಕಳೆದ ಮೂರು ವರ್ಷಗಳಿಂದ ಸಿನಿಮಾ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಚಿತ್ರದ ಪಾತ್ರವರ್ಗದ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಇಲ್ಲ. ಈ ಚಿತ್ರದಲ್ಲಿ ಮೋಹನ್‌ಲಾಲ್ ನಟಿಸುತ್ತಾರೆ ಎಂದು ಹೇಳಲಾಗುತ್ತಿದೆಯಾದರೂ ಆ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಈಗ ಚಿತ್ರದ ಸೀಕ್ವೆಲ್ ಬಗ್ಗೆ ಚರ್ಚೆ ಶುರುವಾಗಿದೆ.

# ‘ಆಜ್ ಕಿ ರಾತ್ ಹಾಡು ನೋಡಿದ್ರೆ ಮಾತ್ರ ಊಟ

ತಮನ್ನಾ ಭಾಟಿಯಾ ಅವರ ‘ಆಜ್ ಕಿ ರಾತ್’ ಹಾಡು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಹಾಡು ’ಸ್ತ್ರೀ 2’ ಚಿತ್ರದಲ್ಲಿದೆ. ಆದರೆ ಆಶ್ಚರ್ಯಕರವಾಗಿ ಚಿಕ್ಕ ಮಕ್ಕಳು ಕೂಡ ಈ ಹಾಡನ್ನು ಇಷ್ಟಪಟ್ಟಿದ್ದಾರೆ ಎಂದು ತಮನ್ನಾ ಹೇಳಿದ್ದಾರೆ. ಮಕ್ಕಳು ಈ ಹಾಡನ್ನು ಕೇಳಿ ಊಟ ಮಾಡುತ್ತಾರೆ ಎಂದು ಅನೇಕ ತಾಯಂದಿರು ಹೇಳಿದ್ದಾರಂತೆ. ನಟಿ ತಮನ್ನಾ ಭಾಟಿಯಾ ಅವರು ಭರ್ಜರಿಯಾಗಿ ಸ್ಟೆಪ್ ಹಾಕಿದ ‘ಆಜ್ ಕಿ ರಾತ್..’ ಹಾಡು ಸಖತ್ ವೈರಲ್ ಆಗಿತ್ತು. ‘ಸ್ತ್ರೀ 2’ ಚಿತ್ರದ ಈ ಹಾಡು ಪಡ್ಡೆಗಳ ಕಣ್ಣು ಕುಕ್ಕಿತ್ತು. ಈ ಸಿನಿಮಾ ಗೆಲ್ಲುವಲ್ಲಿ ಈ ಚಿತ್ರದ ಪಾಲೂ ಕೂಡ ಇತ್ತು. ಈ ಹಾಡನ್ನು ಯವ ಜನತೆ ಇಷ್ಟಪಟ್ಟಿದ್ದು ಗೊತ್ತೇ ಇದೆ. ಆದರೆ, ಈ ಚಿತ್ರವನ್ನು ಸಣ್ಣ ಮಕ್ಕಳು ಕೂಡ ಇಷ್ಟಪಟ್ಟಿದ್ದಾರೆ ಎಂಬ ವಿಷಯ ಗೊತ್ತೇ? ಸ್ವತಃ ನಟಿ ತಮನ್ನಾ ಭಾಟಿಯಾ ಅವರು ಈ ವಿಚಾರ ರಿವೀಲ್ ಮಾಡಿದ್ದಾರೆ. ಲಲ್ಲನ್‌ಟಾಪ್ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ತಮನ್ನಾ ಮಾತನಾಡಿದರು. ಪಾತ್ರಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳುತ್ತೀರಾ ಎಂದು ತಮನ್ನಾಗೆ ಕೇಳಲಾಯಿತು. ಆಗ ಅವರು ಪಾತ್ರ ಅಥವಾ ಹಾಡು ಕೇವಲ ಮನರಂಜನೆ ನೀಡೋದು ಮಾತ್ರವಲ್ಲ, ಜನರ ಮೇಲೆ ಪ್ರಭಾವ ಬೀರಬೇಕು ಎಂದು ಹೇಳಿದರು. ಈ ವೇಳೆ ‘ಆಜ್ ಕಿ ರಾತ್’ ಹಾಡಿನ ಒಂದು ವೈಶಿಷ್ಟ್ಯದ ಬಗ್ಗೆ ಹೇಳಿದರು. ‘ನನ್ನ ಮಕ್ಕಳು ಆಜ್ ಕಿ ರಾತ್ ಹಾಡು ಕೇಳಿದ ಬಳಿಕವೇ ಊಟ ಮಾಡುತ್ತಾರೆ ಎಂದು ನನಗೆ ಅನೇಕ ತಾಯಂದಿರು ಕರೆ ಮಾಡಿ ಹೇಳಿದ್ದಾರೆ’ ಎಂದು ತಮನ್ನಾ ವಿವರಿಸಿದರು.



# ದುಲ್ಕರ್ ಸಲ್ಮಾನ್ 41ನೇ ಸಿನಿಮಾಗೆ ಮುಹೂರ್ತ

ಹೊಸದೊಂದು ಹೃದಯಸ್ಪರ್ಶಿ ಲವ್ ಸ್ಟೋರಿ ಸಿನಿಮಾದ ಮೂಲಕ ಪ್ರೇಕ್ಷಕರನ್ನು ರಂಜಿಸಲು ಮಲಯಾಳಂನ ಸ್ಟಾರ್ ನಟ ದುಲ್ಕರ್ ಸಲ್ಮಾನ್ ಅವರು ರೆಡಿಯಾಗಿದ್ದಾರೆ. ದುಲ್ಕರ್ ಅಭಿನಯದ ಹೊಸ ಸಿನಿಮಾಗೆ ಮುಹೂರ್ತ ಮಾಡಲಾಗಿದೆ. ಟಾಲಿವುಡ್ ನಟ ನಾನಿ ಅವರು ಕ್ಲ್ಯಾಪ್ ಮಾಡಿದ್ದಾರೆ. ಮುಹೂರ್ತದ ಫೋಟೋಗಳು ಇಲ್ಲಿವೆ. ಇದು ದುಲ್ಕರ್ ಸಲ್ಮಾನ್ ನಟಿಸುತ್ತಿರುವ 41ನೇ ಸಿನಿಮಾ. ಅದ್ದೂರಿಯಾಗಿ ಮುಹೂರ್ತ ಸಮಾರಂಭ ನೆರವೇರಿದೆ. ಇನ್ನೂ ಶೀರ್ಷಿಕೆ ಬಹಿರಂಗ ಆಗಿಲ್ಲ. ಸದ್ಯಕ್ಕೆ ಈ ಸಿನಿಮಾವನ್ನು ‘DQ41’ ಎಂದು ಕರೆಯಲಾಗುತ್ತಿದೆ. ಈ ಸಿನಿಮಾದ ಮೊದಲ ದೃಶ್ಯಕ್ಕೆ ನಟ ನಾನಿ ಅವರು ಕ್ಲ್ಯಾಪ್ ಮಾಡುವ ಮೂಲಕ ಶುಭ ಹಾರೈಸಿದರು. ಈ ಸಿನಿಮಾಗೆ ರವಿ ನೆಲಕುಡಿತಿ ಅವರು ನಿರ್ದೇಶನ ಮಾಡುತ್ತಿದ್ದಾರೆ. ರವಿ ನಿರ್ದೇಶನದ ಮೊದಲ ಸಿನಿಮಾ ಇದು. ಯುವ ನಿರ್ದೇಶಕನ ಜತೆ ದುಲ್ಕರ್ ಸಲ್ಮಾನ್ ಕೈ ಜೋಡಿಸಿರುವುದರಿಂದ ನಿರೀಕ್ಷೆ ಮೂಡಿದೆ. ‘ಸೀತಾ ರಾಮಂ’ ಸಿನಿಮಾದಲ್ಲಿ ಗಮನ ಸೆಳೆದಿದ್ದ ದುಲ್ಕರ್ ಅವರು ಮತ್ತೆ ಹೃದಯಸ್ಪರ್ಶಿ ಪ್ರೇಮಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಚಿತ್ರವು ‘ಎಸ್‌ಎಲ್‌ವಿ’ ಬ್ಯಾನರ್ ಮೂಲಕ ನಿರ್ಮಾಣ ಆಗುತ್ತಿದೆ. ದುಲ್ಕರ್ ಸಲ್ಮಾನ್ ಅವರು ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಮಾಡುತ್ತಿದ್ದಾರೆ. ಮಲಯಾಳಂ ಹಾಗೂ ತೆಲುಗು ಸಿನಿಮಾರಂಗದಲ್ಲಿ ಅವರು ಮಿಂಚುತ್ತಿದ್ದಾರೆ.

# ಓವಲ್ ಟೆಸ್ಟ್ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಆಂಗ್ಲರನ್ನು ಹಿಂದಿಕ್ಕಿದ ಭಾರತ

ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿ ಅತ್ಯಂತ ರೋಮಾಂಚಕಾರಿಯಾಗಿ ಕೊನೆಗೊಂಡಿತು. ಓವಲ್‌ನಲ್ಲಿ ಭಾರತದ ಗೆಲುವು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಪಾಯಿಂಟ್ ಪಟ್ಟಿಯಲ್ಲಿ ದೊಡ್ಡ ಬದಲಾವಣೆಗಳನ್ನು ತಂದಿದೆ. ಭಾರತ ಮೂರನೇ ಸ್ಥಾನಕ್ಕೇರಿದರೆ, ಇಂಗ್ಲೆಂಡ್ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಿನ 5 ಪಂದ್ಯಗಳ ಟೆಸ್ಟ್ ಸರಣಿ ಅತ್ಯಂತ ರೋಮಾಂಚಕಾರಿ ರೀತಿಯಲ್ಲಿ ಕೊನೆಗೊಂಡಿದೆ.

ಜೂನ್ 20 ರಂದು ಲೀಡ್ಸ್‌ನಲ್ಲಿ ಪ್ರಾರಂಭವಾದ ಈ ಟೆಸ್ಟ್ ಸರಣಿಯು ಆಗಸ್ಟ್ 4 ರಂದು ಓವಲ್‌ನಲ್ಲಿ ನಡೆದ ಕೊನೆಯ ಟೆಸ್ಟ್‌ನ ಕೊನೆಯ ಇನ್ನಿಂಗ್ಸ್‌ನೊಂದಿಗೆ ಕೊನೆಗೊಂಡಿತು. ಟೀಂ ಇಂಡಿಯಾ ಈ ಕೊನೆಯ ಟೆಸ್ಟ್ ಪಂದ್ಯವನ್ನು 6 ರನ್‌ಗಳಿಂದ ಗೆದ್ದುಕೊಳ್ಳುವ ಮೂಲಕ ಸರಣಿಯನ್ನು ಡ್ರಾದಲ್ಲಿ ಕೊನೆಗೊಳಿಸಿತು. ಓವಲ್ ಟೆಸ್ಟ್‌ನ ಫಲಿತಾಂಶವು ಸರಣಿಯ ಸ್ಕೋರ್‌ಲೈನ್‌ನ ಮೇಲೆ ಪರಿಣಾಮ ಬೀರಿದ್ದು ಮಾತ್ರವಲ್ಲದೆ ನಾಲ್ಕನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಪಾಯಿಂಟ್ ಪಟ್ಟಿಯಲ್ಲಿಯೂ ಮಹತ್ವದ ಬದಲಾವಣೆಗಳನ್ನು ತಂದಿದೆ. ಈ ಗೆಲುವಿನೊಂದಿಗೆ ಟೀಂ ಇಂಡಿಯಾ ಪಾಯಿಂಟ್ ಪಟ್ಟಿಯಲ್ಲಿ ದೊಡ್ಡ ಜಿಗಿತವನ್ನು ಸಾಧಿಸಿದ್ದು, ಆತಿಥೇಯ ಇಂಗ್ಲೆಂಡ್ ತಂಡವನ್ನು ಹಿಂದಿಕ್ಕಿದೆ. ವಾಸ್ತವವಾಗಿ ಮ್ಯಾಂಚೆಸ್ಟರ್‌ನಲ್ಲಿ ನಡೆದ 4ನೇ ಟೆಸ್ಟ್ ನಂತರ, ಇಂಗ್ಲೆಂಡ್ ಘಖಿಲ ಪಾಯಿಂಟ್ ಪಟ್ಟಿಯಲ್ಲಿ 26 ಅಂಕಗಳು ಮತ್ತು 54.17 ಗೆಲುವಿನ ಶೇಕಡಾವಾರುವಿನೊಂದಿಗೆ ಮೂರನೇ ಸ್ಥಾನದಲ್ಲಿತ್ತು. ಇತ್ತ ಟೀಂ ಇಂಡಿಯಾ 16 ಅಂಕಗಳು ಮತ್ತು 33.33 ಗೆಲುವಿನ ಶೇಕಡಾವಾರುವಿನೊಂದಿಗೆ ನಾಲ್ಕನೇ ಸ್ಥಾನದಲ್ಲಿತ್ತು. ಇದೀಗ ಓವಲ್ ಟೆಸ್ಟ್‌ನಲ್ಲಿ ಟೀಂ ಇಂಡಿಯಾದ ಗೆಲುವಿನೊಂದಿಗೆ ಪಾಯಿಂಟ್ ಪಟ್ಟಿಯಲ್ಲೂ ಬದಲಾವಣೆಗಳಾಗಿವೆ. ಐದನೇ ಟೆಸ್ಟ್‌ನಲ್ಲಿನ ಗೆಲುವಿನ ನಂತರ, ಟೀಂ ಇಂಡಿಯಾ 28 ಅಂಕಗಳು ಮತ್ತು 46.67 ಗೆಲುವಿನ ಶೇಕಡಾವಾರುವಿನೊಂದಿಗೆ ಮೂರನೇ ಸ್ಥಾನಕ್ಕೇರಿದರೆ, ಇತ್ತ ಇಂಗ್ಲೆಂಡ್ ಕೇವಲ 26 ಅಂಕಗಳು ಮತ್ತು 43.33 ಗೆಲುವಿನ ಶೇಕಡಾವಾರುವಿನೊಂದಿಗೆ ಕುಸಿದು ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಪಾಯಿಂಟ್ ಟೇಬಲ್‌ನಲ್ಲಿರುವ ಉಳಿದ ತಂಡಗಳಿಗೆ ಸಂಬಂಧಿಸಿದಂತೆ, ಮಾಜಿ ಚಾಂಪಿಯನ್ ಆಸ್ಟ್ರೇಲಿಯಾ ಇನ್ನೂ ಮೊದಲ ಸ್ಥಾನದಲ್ಲಿದೆ. ವೆಸ್ಟ್ ಇಂಡೀಸ್ ವಿರುದ್ಧ ಆಡಿದ ಮೂರು ಪಂದ್ಯಗಳನ್ನು ಗೆದ್ದಿರುವ ಕಾಂಗರೂ ತಂಡ ಅಗ್ರಸ್ಥಾನದಲ್ಲಿದ್ದರೆ, ಶ್ರೀಲಂಕಾ ಎರಡನೇ ಸ್ಥಾನದಲ್ಲಿದೆ. ಹಾಲಿ ಚಾಂಪಿಯನ್ ದಕ್ಷಿಣ ಆಫ್ರಿಕಾವನ್ನು ಹೊರತುಪಡಿಸಿ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಈ ಸೀಸನ್‌ನಲ್ಲಿ ಇನ್ನೂ ತಮ್ಮ ಅಭಿಯಾನವನ್ನು ಪ್ರಾರಂಭಿಸಿಲ್ಲ. ಟೀಮ್ ಇಂಡಿಯಾ ಬಗ್ಗೆ ಹೇಳುವುದಾದರೆ, ಗಿಲ್ ಪಡೆ ತನ್ನ ಮುಂದಿನ ಟೆಸ್ಟ್ ಸರಣಿಯನ್ನು ತವರು ನೆಲದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಆಡಲಿದೆ.

ಈ 2 ಪಂದ್ಯಗಳ ಸರಣಿ ಎರಡು ತಿಂಗಳ ನಂತರ ಅಂದರೆ ಅಕ್ಟೋಬರ್ 2 ರಿಂದ ಆರಂಭವಾಗಲಿದೆ. ಇದರ ನಂತರ, ಟೀಂ ಇಂಡಿಯಾ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ. ಈ ಸರಣಿಯೂ ಭಾರತದ ನೆಲದಲ್ಲಿ ನಡೆಯಲಿದೆ. ಈ ಎರಡೂ ಸರಣಿಗಳನ್ನು ಗೆಲ್ಲುವ ಮೂಲಕ ಟೀಂ ಇಂಡಿಯಾ ಪಾಯಿಂಟ್ಸ್ ಪಟ್ಟಿಯಲ್ಲಿ ಮುನ್ನಡೆ ಸಾಧಿಸುವ ಅವಕಾಶವನ್ನು ಹೊಂದಿರುತ್ತದೆ.



# ಇಂಗ್ಲೆಂಡ್ ಪ್ರವಾಸದಲ್ಲಿ ಸಿರಾಜ್ ಅಬ್ಬರ

ಓವಲ್ ಟೆಸ್ಟ್‌ನಲ್ಲಿ ಟೀಂ ಇಂಡಿಯಾದ ಗೆಲುವಿನ ಕಥೆ ಬರೆದಿದ್ದು ವೇಗಿ ಮೊಹಮ್ಮದ್ ಸಿರಾಜ್ ಎಂದರೆ ತಪ್ಪಾಗಲಾರದು. ಐದನೇ ದಿನದಂದು ಉಳಿದ ನಾಲ್ಕು ವಿಕೆಟ್‌ಗಳಲ್ಲಿ ಮೂರು ವಿಕೆಟ್‌ಗಳನ್ನು ಕಬಳಿಸಿದ ಸಿರಾಜ್, ಇಂಗ್ಲೆಂಡ್ ಗೆಲುವಿನ ಕನಸಿಗೆ ತಣ್ಣೀರೆರಚಿದರು. ಅಂತಿಮವಾಗಿ ಆತಿಥೇಯ ಇಂಗ್ಲೆಂಡ್ ಟೆಸ್ಟ್ ಸರಣಿಯನ್ನು ಡ್ರಾದಲ್ಲಿ ಅಂತ್ಯಗೊಳಿಸಿದ ನಿರಾಶೆಯಲ್ಲಿದ್ದರೆ, ಇತ್ತ ಟೀಂ ಇಂಡಿಯಾ ಸರಣಿ ಸೋಲಿನಿಂದ ಪಾರಾಯಿತು. ಮೇಲೆ ಹೇಳಿದಂತೆ ಓವಲ್ ಟೆಸ್ಟ್ ಗೆಲುವಿನ ಶ್ರೇಯ ಸಿರಾಜ್‌ಗೆ ಸಲ್ಲಬೇಕು. 5ನೇ ಟೆಸ್ಟ್‌ನಲ್ಲಿ ಸಿರಾಜ್ ಒಟ್ಟು 9 ವಿಕೆಟ್‌ಗಳನ್ನು ಕಬಳಿಸಿದರು. ಮೊದಲ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಕಬಳಿಸಿದ ಸಿರಾಜ್, ಎರಡನೇ ಇನ್ನಿಂಗ್ಸ್‌ನಲ್ಲಿ 5 ವಿಕೆಟ್‌ಗಳ ಗೊಂಚಲು ಪಡೆದರು. ನಾಲ್ಕನೇ ದಿನದಾಟದಂತು ಕೇವಲ 2 ವಿಕೆಟ್‌ಗಳನ್ನು ಮಾತ್ರ ಪಡೆದಿದ್ದ ಸಿರಾಜ್, ಐದನೇ ದಿನದಂದು 3 ವಿಕೆಟ್ ಉರುಳಿಸಿ ಟೀಂ ಇಂಡಿಯಾಕ್ಕೆ ಗೆಲುವು ತಂದುಕೊಟ್ಟರು.

ಒಟ್ಟಾರೆ ಈ ಟೆಸ್ಟ್ ಸರಣಿಯಲ್ಲಿ ಎಲ್ಲಾ ಐದು ಪಂದ್ಯಗಳನ್ನಾಡಿದ ಮೊಹಮ್ಮದ್ ಸಿರಾಜ್ ಅತಿ ಹೆಚ್ಚು ಅಂದರೆ 23 ವಿಕೆಟ್‌ಗಳನ್ನು ಕಬಳಿಸಿದರು. ಈ ಮೂಲಕ ಮೊದಲ ಬಾರಿಗೆ ಭಾರತೀಯ ವೇಗಿಯೊಬ್ಬರು ಟೆಸ್ಟ್ ಸರಣಿಯಲ್ಲಿ ಅತಿ ಹೆಚ್ಚು ವಿಕೆಟ್‌ಗಳನ್ನು ಕಬಳಿಸಿದ ಸಾಧನೆಯನ್ನು ಸಿರಾಜ್ ಮಾಡಿದ್ದಾರೆ. ಮೊದಲ ಟೆಸ್ಟ್‌ನಲ್ಲಿ ಎರಡು ವಿಕೆಟ್‌ಗಳನ್ನು ಕಬಳಿಸಲಷ್ಟೇ ಶಕ್ತರಾಗಿದ್ದ ಸಿರಾಜ್, ಇದಾದ ನಂತರ ಎರಡನೇ ಟೆಸ್ಟ್‌ನಲ್ಲಿ ಮಾರಕ ಬೌಲಿಂಗ್ ಮಾಡಿ ಒಟ್ಟು 7 ವಿಕೆಟ್‌ಗಳನ್ನು ಕಬಳಿಸಿದರು.

ಹಾಗೆಯೇ ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದ ಎರಡೂ ಇನ್ನಿಂಗ್ಸ್‌ಗಳಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದ ಸಿರಾಜ್, ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಕೇವಲ ಒಂದು ವಿಕೆಟ್ ಪಡೆದಿದ್ದರು. ಅಂತಿಮವಾಗಿ ಐದನೇ ಟೆಸ್ಟ್‌ನಲ್ಲಿ 9 ವಿಕೆಟ್ ಪಡೆಯುವ ಮೂಲಕ ಸಿರಾಜ್ 20 ವಿಕೆಟ್‌ಗಳ ಗಡಿ ದಾಟಿದರು. ಇದಕ್ಕೂ ಮೊದಲು, 2024-25ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ, ಸಿರಾಜ್ 5 ಪಂದ್ಯಗಳಲ್ಲಿ 20 ವಿಕೆಟ್‌ಗಳನ್ನು ಪಡೆದಿದ್ದರು. ಇದೀಗ ಸಿರಾಜ್ ಇಂಗ್ಲೆಂಡ್ ಪ್ರವಾಸದಲ್ಲಿ 23 ವಿಕೆಟ್‌ಗಳನ್ನು ಉರುಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಒಟ್ಟಾರೆ ಈ ಪ್ರವಾಸದಲ್ಲಿ 185.3 ಓವರ್‌ಗಳನ್ನು ಅಂದರೆ 1113 ಎಸೆತಗಳನ್ನು ಬೌಲ್ ಮಾಡಿದ ಸಿರಾಜ್ 23 ವಿಕೆಟ್ ಪಡೆದರು.

**1113 ಎಸೆತಗಳು, 23 ವಿಕೆಟ್..!**




# ಐತಿಹಾಸಿಕ ಗೆಲುವು; 77 ವರ್ಷಗಳ ಬರ ನೀಗಿಸಿಕೊಂಡ ಟೀಂ ಇಂಡಿಯಾ..!



ಓವಲ್‌ನಲ್ಲಿ ನಡೆದ ಐದನೇ ಮತ್ತು ಅಂತಿಮ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ 6 ರನ್‌ಗಳಿಂದ ಅದ್ಭುತ ಗೆಲುವು ಸಾಧಿಸಿದೆ. ಈ ಮೂಲಕ ಬರೋಬ್ಬರಿ 77 ವರ್ಷಗಳ ನಂತರ ವಿದೇಶಿ ನೆಲದಲ್ಲಿ ಐದು ಪಂದ್ಯಗಳ ಸರಣಿಯ ಅಂತಿಮ ಪಂದ್ಯವನ್ನು ಭಾರತ ಗೆದ್ದಿರುವುದು ಇದೇ ಮೊದಲು. ಈ ಗೆಲುವಿನೊಂದಿಗೆ ಭಾರತ 2-2ರ ಸಮಬಲದೊಂದಿಗೆ ಸರಣಿಯನ್ನು ಪೂರ್ಣಗೊಳಿಸಿದೆ. ಸೋಲಿನೊಂದಿಗೆ ಇಂಗ್ಲೆಂಡ್ ಪ್ರವಾಸವನ್ನು ಆರಂಭಿಸಿದ್ದ ಟೀಂ ಇಂಡಿಯಾ ಇದೀಗ ಓವಲ್ ಟೆಸ್ಟ್ ಪಂದ್ಯವನ್ನು 6 ರನ್‌ಗಳಿಂದ ಗೆದ್ದುಕೊಳ್ಳುವ ಮೂಲಕ ಅಂತ್ಯಗೊಳಿಸಿದೆ. ಒಂದು ಹಂತದಲ್ಲಿ ಸರಣಿ ಕಳೆದುಕೊಳ್ಳುವ ಆತಂಕದಲ್ಲಿದ್ದ ಟೀಂ ಇಂಡಿಯಾ , ಇಬ್ಬರು ವೇಗಿಗಳ ಅಮೋಘ ಪ್ರದರ್ಶನಿಂದ ಕೊನೆಯ ಟೆಸ್ಟ್ ಪಂದ್ಯವನ್ನು ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಓವಲ್ ಟೆಸ್ಟ್ ಗೆಲುವಿನೊಂದಿಗೆ ಸರಣಿಯನ್ನು 2-2 ರಿಂದ ಅಂತ್ಯಗೊಳಿಸಿದ ಟೀಂ ಇಂಡಿಯಾ 77 ವರ್ಷಗಳ ದೀರ್ಘ ಕಾಯುವಿಕೆಯನ್ನು ಸಹ ಕೊನೆಗೊಳಿಸಿದೆ. ಇದು ಮಾತ್ರವಲ್ಲದೆ ಓವಲ್ ಟೆಸ್ಟ್ ಗೆಲುವು ಭಾರತೀಯ ಕ್ರಿಕೆಟ್‌ಗೆ ಹಲವು ವಿಧಗಳಲ್ಲಿಯೂ ವಿಶೇಷವಾಗಿತ್ತು.

ವಾಸ್ತವವಾಗಿ, ಭಾರತ ತಂಡವು ವಿದೇಶಿ ನೆಲದಲ್ಲಿ ಐದು ಪಂದ್ಯಗಳ ಟೆಸ್ಟ್ ಸರಣಿಯ ಕೊನೆಯ ಪಂದ್ಯವನ್ನು ಗೆದ್ದಿರುವುದು ಇದೇ ಮೊದಲು. ಭಾರತ ಈ ಹಿಂದೆ ವಿದೇಶದಲ್ಲಿ ಐದು ಪಂದ್ಯಗಳ ಟೆಸ್ಟ್ ಸರಣಿಯನ್ನು 16 ಬಾರಿ ಆಡಿದೆ, ಆದರೆ ಪ್ರತಿ ಬಾರಿಯೂ ಕೊನೆಯ ಟೆಸ್ಟ್‌ನಲ್ಲಿ ಸೋಲನುಭವಿಸಿತ್ತು. ಆದಾಗ್ಯೂ, ಈ ಬಾರಿ, ಭಾರತೀಯ ಆಟಗಾರರು ಅದ್ಭುತ ಪ್ರದರ್ಶನದೊಂದಿಗೆ ಇತಿಹಾಸವನ್ನು ಸೃಷ್ಟಿಸಿದರು. ಓವಲ್ ಮೈದಾನದಲ್ಲಿ ನಡೆದ ಈ ನಿರ್ಣಾಯಕ ಪಂದ್ಯದಲ್ಲಿ, ಭಾರತೀಯ ಬ್ಯಾಟ್ಸ್‌ಮನ್‌ಗಳು ಬೌಲರ್‌ಗಳು ಮತ್ತು ಸಾಂಘಿಕ ಪ್ರದರ್ಶನ ನೀಡಿ ಪಂದ್ಯವನ್ನು ಗೆದ್ದುಕೊಂಡರು. ಪಂದ್ಯದ ಐದನೇ ದಿನದಾಟ ಎಷ್ಟು ರೋಮಾಂಚನಕಾರಿಯಾಗಿತ್ತೆಂದರೆ, ಇಂಗ್ಲೆಂಡ್ ಗೆಲುವಿಗೆ ಕೇವಲ 35 ರನ್ ಬೇಕಿದ್ದರೆ, ತಂಡದ ಬಳಿ ಇನ್ನು 4 ವಿಕೆಟ್‌ಗಳು ಉಳಿದಿದ್ದವು. ಆದರೆ ಕೊನೆಯ ದಿನದ ಮೊದಲ ಸೆಷನ್‌ನಲ್ಲಿ ಭಾರತದ ಇಬ್ಬರು ಬೌಲರ್‌ಗಳು ಇಡೀ ಪಂದ್ಯದ ದಿಕ್ಕನೇ ಬದಲಾಯಿಸಿದರು.

**ಮತ್ತೊಂದು ಇತಿಹಾಸ ಬದಲಿಸಿದ ಭಾರತ**



# ಸಿಎಸ್‌ಕೆ ತಂಡದ ನಾಯಕ ಯಾರೆಂದು ತಿಳಿಸಿದ ಧೋನಿ

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಅತ್ಯಂತ ಹೀನಾಯ ಪ್ರದರ್ಶನ ನೀಡಿತ್ತು. ಲೀಗ್ ಹಂತದಲ್ಲಿ ಕಣಕ್ಕಿಳಿದ 14 ಪಂದ್ಯಗಳಲ್ಲಿ ಸಿಎಸ್‌ಕೆ ತಂಡ ಗೆದ್ದಿದ್ದು ಕೇವಲ 4 ಮ್ಯಾಚ್ ಮಾತ್ರ. ಪರಿಣಾಮ ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ಐಪಿಎಲ್ ಅಭಿಯಾನ ಅಂತ್ಯಗೊಳಿಸಬೇಕಾಯಿತು. ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸುವವರು ಯಾರು ಇಂತಹದೊಂದು ಪ್ರಶ್ನೆಗಳು ಹುಟ್ಟಿಕೊಳ್ಳಲು ಮುಖ್ಯ ಕಾರಣ ತಂಡದ ಬಗ್ಗೆ ಕೇಳಿ ಬರುತ್ತಿರುವ ಕೆಲ ಊಹಾಪೋಹಗಳು. ಅಂದರೆ ಸಿಎಸ್‌ಕೆ ತಂಡಕ್ಕೆ ಸಂಜು ಸ್ಯಾಮ್ಸನ್ ಎಂಟ್ರಿ ಕೊಡಲಿದ್ದಾರೆ ಎಂಬ ಸುದ್ದಿಯೊಂದು ಹರಿದಾಡುತ್ತಿದೆ. ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು ಸಂಜು ಸ್ಯಾಮ್ಸನ್ ಅವರನ್ನು ಖರೀದಿಸಲು ಆಸಕ್ತಿ ಹೊಂದಿದ್ದು, ಹೀಗಾಗಿ ಅವರನ್ನು ಟ್ರೇಡ್ ಮಾಡಿಕೊಳ್ಳುವ ಅಥವಾ ಹರಾಜಿನ ಮೂಲಕ ಖರೀದಿಸುವ ಸಾಧ್ಯತೆಯಿದೆ. ಈ ಸಾಧ್ಯತೆಗಳ ನಡುವೆ ಸ್ಯಾಮ್ಸನ್ ಅವರಿಗೆ ನಾಯಕತ್ವ ನೀಡಲಿದ್ದಾರೆ ಎಂಬ ಸುದ್ದಿಗಳು ಕೂಡ ಮಹತ್ವ ಪಡೆದುಕೊಂಡಿದೆ. ಒಂದೆಡೆ ಸ್ಯಾಮ್ಸನ್ ಎಂಟ್ರಿಯ ಸುದ್ದಿಯು ದಿನದಿಂದ ದಿನಕ್ಕೆ ಮಹತ್ವ ಪಡೆದುಕೊಳ್ಳುತ್ತಿದ್ದರೆ, ಮತ್ತೊಂದೆಡೆ ಮಹೇಂದ್ರ ಸಿಂಗ್ ಧೋನಿ ಐಪಿಎಲ್ 2026 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಯಾರು ಮುನ್ನಡೆಸುವವರು ಯಾರು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಕಳೆದ ಸೀಸನ್‌ನಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದ ರುತುರಾಜ್ ಗಾಯಕ್ವಾಡ್ ಅವರೇ ಮುಂದಿನ ಸೀಸನ್‌ನಲ್ಲೂ ಕ್ಯಾಪ್ಟನ್ ಆಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ಧೋನಿ ತಿಳಿಸಿದ್ದಾರೆ. ಚೆನ್ನೈನನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಧೋನಿ, ಸಿಎಸ್‌ಕೆ ತಂಡದ ಆರಂಭಿಕ ಆಟಗಾರ ರುತುರಾಜ್ ಗಾಯಕ್ವಾಡ್ ಮುಂದಿನ ಸೀಸನ್‌ನಲ್ಲಿ ತಂಡಕ್ಕೆ ಮರಳಲಿದ್ದಾರೆ. ಅಲ್ಲದೆ ಅವರೇ ಕ್ಯಾಪ್ಟನ್ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಐಪಿಎಲ್ 2025 ರ ಸೀಸನ್ ನಡುವೆ ಗಾಯಗೊಂಡಿದ್ದ ರುತುರಾಜ್ ಅರ್ಧದಲ್ಲೇ ಟೂರ್ನಿಯಿಂದ ಹಿಂದೆ ಸರಿದಿದ್ದರು. ಹೀಗಾಗಿ ಸಿಎಸ್‌ಕೆ ತಂಡವನ್ನು ಮಹೇಂದ್ರ ಸಿಂಗ್ ಧೋನಿ ಮುನ್ನಡೆಸಿದ್ದರು. ಇದೀಗ ಮುಂದಿನ ಸೀಸನ್‌ನಲ್ಲಿ ನಾನು ನಾಯಕನಾಗಿ ಕಾಣಿಸಿಕೊಳ್ಳುವುದಿಲ್ಲ ಎಂಬುದನ್ನು ಧೋನಿ ಖಚಿತಪಡಿಸಿದ್ದಾರೆ. ಇದರ ಜೊತೆಗೆ ರುತುರಾಜ್ ಗಾಯಕ್ವಾಡ್ ಅವರೇ ಕ್ಯಾಪ್ಟನ್ ಪಟ್ಟದೊಂದಿಗೆ ಕಾಣಿಸಿಕೊಳ್ಳಲಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966